09 January 2026 Friday
SINCE 1957
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ
ಭವಿಷ್ಯದ ಮುನ್ನುಡಿ
info.varthaman@gmail.com
9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್
VARTHAMAN | Volume: 69 | Issue: 74 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

**ಭಾವನಾಂತರಂಗ**

ಅದೃಷ್ಟವಂತನು ಅವಕಾಶಗಳನ್ನು ಪಡೆಯುತ್ತಾನೆ, ಬುದ್ಧಿವಂತನು ಅವಕಾಶಗಳನ್ನು ಸೃಷ್ಟಿಸಿಕೊಳ್ಳುತ್ತಾನೆ!
-ಸ್ನೇಹಾ ಆನಂದ್

**ಒಂದೊಳ್ಳೆ ಮಾತು**

ಬಳಸಿಕೊಂಡವರನ್ನು ಮರೆತು ಬಿಡಬೇಕು ಆದರೆ ಬೆಳೆಸಿದವರನ್ನು ಯಾವತ್ತೂ ಮರೆಯಬಾರದು
ಮೈಲಾರ ಸಾವಿತ್ರಿಬಾಯಿ

## ನ್ಯಾಷನಲ್ ಹೆರಾಲ್ಡ್‌ಗೆ 1.99 ಕೋಟಿ ಜಾಹೀರಾತು

**ಬೆಂಗಳೂರು:** ಕಾಂಗ್ರೆಸ್ ಪಕ್ಷದ ಮಾಲೀಕತ್ವದ ನ್ಯಾಷನಲ್ ಹೆರಾಲ್ಡ್ ಪತ್ರಿಕೆಗೆ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಹೆಚ್ಚಿನ ಜಾಹೀರಾತು ನಿಧಿ ನೀಡಿದೆ. ಪತ್ರಿಕೆಗೆ ಕರ್ನಾಟಕದಲ್ಲಿ ಪ್ರಸರಣ ಶೂನ್ಯ ಇದ್ದರೂ ನ್ಯಾಷನಲ್ ಹೆರಾಲ್ಡ್ ರಾಜ್ಯ ಸರ್ಕಾರದ ಜಾಹೀರಾತು ಬಜೆಟ್‌ನಿಂದ ಕೋಟ್ಯಂತರ ರೂ. ನೀಡಿದೆ ಎಂದು ಆರೋಪಿಸಲಾಗಿದೆ.

ಸತತ ಎರಡು ವರ್ಷಗಳ ಕಾಲ ಕರ್ನಾಟಕದಿಂದ ಜಾಹೀರಾತು ಪಡೆದ ರಾಷ್ಟ್ರೀಯ ಪತ್ರಿಕೆಗಳಲ್ಲಿ ಅತಿದೊಡ್ಡ ಫಲಾನುಭವಿಯಾಗಿ ನ್ಯಾಷನಲ್ ಹೆರಾಲ್ಡ್ ಹೊರಹೊಮ್ಮಿದೆ. 2023–24 ರಲ್ಲಿ ನ್ಯಾಷನಲ್ ಹೆರಾಲ್ಡ್‌ 1 ಕೋಟಿ ರೂ. ಹಂಚಿಕೆ ಮಾಡಲಾಗಿದೆ. 2024–25ರಲ್ಲಿ ಸುಮಾರು 99 ಲಕ್ಷ ಹಂಚಿಕೆಯಾಗಿದೆ. ಒಟ್ಟಾರೆ 1.99 ಕೋಟಿ ರೂಪಾಯಿ ನೀಡಲಾಗಿದೆ. ಅದೇ ಸಮಯದಲ್ಲಿ ಹಲವಾರು ಪ್ರಸಿದ್ಧ ರಾಷ್ಟ್ರೀಯ ಪತ್ರಿಕೆಗಳು ಬಹಳ ಕಡಿಮೆ ಹಣವನ್ನು ಪಡೆದಿವೆ ಎಂದು ವರದಿಯಾಗಿದೆ.

## ಕುಮಾರಸ್ವಾಮಿಯಿಂದ ಕಲಿಯುವ ಅಗತ್ಯ ನನಗಿಲ್ಲ



**ಬೆಂಗಳೂರು:** ರಾಜಕೀಯದಲ್ಲಿ ಕುಮಾರಸ್ವಾಮಿ ಅವರಿಗಿಂತ ಹೆಚ್ಚಿನ ಅನುಭವ ನನಗಿದೆ. ನಾನು ಮುಖ್ಯಮಂತ್ರಿ ಆಗದೇ ಇರಬಹುದು, ಆದರೆ, ಆಡಳಿತ ವಿಚಾರದಲ್ಲಿ ಅವರಿಗಿಂತ ಹೆಚ್ಚು ಅನುಭವ ಹೊಂದಿದ್ದೇನೆ. ಅವರಿಂದ ಕಲಿಯುವ ಅಗತ್ಯ ನನಗಿಲ್ಲ ಎಂದು ಡಿ.ಕೆ.ಶಿವಕುಮಾರ್ ತಿರುಗೇಟು ನೀಡಿದರು.

ಬಳ್ಳಾರಿಯಲ್ಲಿ ಪೊಲೀಸ್ ಅಧಿಕಾರಿಗಳ ಜೊತೆ ನಡೆಸಿದ ಸಭೆಗೆ ಕುಮಾರಸ್ವಾಮಿ ಆಕ್ಷೇಪ ವ್ಯಕ್ತಪಡಿಸಿರುವ ಬಗ್ಗೆ ಕೇಳಿದಾಗ, ನಾನು ಬಹಳ ಕಾಲ ಸಚಿವನಾಗಿ ಕೆಲಸ ಮಾಡಿದ್ದೇನೆ. ಆಡಳಿತ ಹೇಗೆ ಮಾಡಬೇಕು, ಯಾರ ಜೊತೆ ಸಭೆ ಮಾಡಬೇಕು, ಮಾಡಬಾರದು ಎಂಬುದು ನನಗೆ ಗೊತ್ತಿದೆ ಎಂದು ತಿರುಗೇಟು ನೀಡಿದರು.

ರಾಜಕಾರಣದಲ್ಲಿ ಸೋಲು ಗೆಲುವು ಇದ್ದೇ ಇರುತ್ತದೆ. ನಾವು ಗೆಲ್ಲುತ್ತೀವೊ, ಸೋಲುತ್ತೀವೊ. ಆದರೆ, ಪಾಲಿಕೆ ಚುನಾವಣೆ ಮಾಡುವ ಬಗ್ಗೆ ಸರ್ಕಾರ ಈಗಾಗಲೇ ನ್ಯಾಯಾಲಯದಲ್ಲಿ ಪ್ರಮಾಣಪತ್ರ ಸಲ್ಲಿಸಿದೆ. ಜೊತೆಗೆ, ಈ ವರ್ಷವನ್ನು ಚುನಾವಣಾ ವರ್ಷ ಎಂದು ಪರಿಗಣಿಸಲಾಗಿದೆ. ಈ ವರ್ಷವೇ ಇತರೆ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲಾಗುವುದು. ಈ ಬಗ್ಗೆ ಮುಖ್ಯಮಂತ್ರಿಯವರು ಗ್ರಾಮೀಣಾಭಿವೃದ್ಧಿ ಸಚಿವರ ಜೊತೆ ಚರ್ಚಿಸಿ, ಕಾನೂನು ಅಡೆತಡೆ ನಿವಾರಣೆಗೆ ತೀರ್ಮಾನಿಸಿದ್ದಾರೆ ಎಂದು ತಿಳಿಸಿದರು.

## ಪರಿಸರ ವಿಜ್ಞಾನಿ ಮಾಧವ ಗಾಡ್ಗೀಳ್ ನಿಧನ

**ಮುಂಬೈ:** ಪಶ್ಚಿಮ ಘಟ್ಟಗಳ ಸಂರಕ್ಷಣಾ ವರದಿ ನೀಡಿದ್ದ ಹಿರಿಯ ಪರಿಸರ ವಿಜ್ಞಾನಿ ಡಾ. ಮಾಧವ ಗಾಡ್ಗೀಳ್ (83) ಬುಧವಾರ ರಾತ್ರಿ ಪುಣೆಯಲ್ಲಿ ನಿಧನರಾದರು.

ಮಾಧವ ಗಾಡ್ಗೀಳ್ ಅವರು ಪ್ರಧಾನ ಮಂತ್ರಿಗಳ ವೈಜ್ಞಾನಿಕ ಸಲಹಾ ಮಂಡಳಿ ಸದಸ್ಯರಾಗಿದ್ದರು ಮತ್ತು 2010ರ ಪಶ್ಚಿಮ ಘಟ್ಟಗಳ ಪರಿಸರ ವಿಜ್ಞಾನ ತಜ್ಞರ ಸಮಿತಿ ಮುಖ್ಯಸ್ಥರಾಗಿದ್ದರು. ಇವರು ಅಧ್ಯಯನ ನಡೆಸಿ ತಯಾರಿಸಿದ್ದ ವರದಿ ಗಾಡ್ಗೀಳ್ ಆಯೋಗದ ವರದಿ ಎಂದೇ ಜನಪ್ರಿಯವಾಗಿತ್ತು.

ಗಾಡ್ಗೀಳ್ ಅವರು ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿಯ ಸದಸ್ಯರಾಗಿ, ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು.

# ಬಿ–ಖಾತೆ ಆಸ್ತಿಗೂ ಎ–ಖಾತಾ

## ರಾಜ್ಯಾದ್ಯಂತ ಅಕ್ರಮ ಬಡಾವಣೆಗಳ ಸಕ್ರಮಕ್ಕೆ ಸಚಿವ ಸಂಪುಟ ಒಪ್ಪಿಗೆ




**ಬೆಂಗಳೂರು:** ಬೆಂಗಳೂರಿನ ನಂತರ ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲೂ ಬಿ ಖಾತಾಗೆ ಎ ಖಾತಾ ಮಾನ್ಯತೆ ನೀಡಲು ರಾಜ್ಯ ಸರ್ಕಾರ ಮುಂದಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ.

ಸಚಿವ ಸಂಪುಟ ಸಭೆಯ ನಂತರ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಸಚಿವ ಎಚ್.ಕೆ. ಪಾಟೀಲ್ ಅವರು, ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳು, ನಗರಸಭೆ ವ್ಯಾಪ್ತಿಯಲ್ಲಿ ಅಕ್ರಮ ಬಡಾವಣೆಗಳಲ್ಲಿರುವ ಬಿ ಖಾತಾ ಆಸ್ತಿಗಳಿಗೆ ಎ–ಖಾತಾ ನೀಡಲು ಸಂಪುಟ ಸಭೆ ಅನುಮೋದನೆ ನೀಡಿದೆ ಎಂದು ತಿಳಿಸಿದರು.

ಗ್ರೇಟರ್ ಬೆಂಗಳೂರು ಅಥಾರಿಟಿ ಮಾದರಿಯಲ್ಲೇ ನಿಯಮ ರೂಪಿಸಿ ರಾಜ್ಯದಾದ್ಯಂತ ಬಿ ಖಾತಾ ಆಸ್ತಿಗಳಿಗೆ ಎ ಖಾತಾ ನೀಡಲಾಗುತ್ತದೆ. ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯದೆ ರಚಿಸಿರುವ ಬಡಾವಣೆಗಳಲ್ಲಿನ 'ಬಿ–ಖಾತಾ' ನಿವೇಶನ/ ಕಟ್ಟಡ/ ಅಪಾರ್ಟ್ ಮೆಂಟ್ ಅಥವಾ ಫ್ಲಾಟ್ ಗಳಿಗೆ ಎ–ಖಾತಾ ನೀಡಲು ಸಂಪುಟ ಒಪ್ಪಿಗೆ ನೀಡಿದೆ ಎಂದರು.

ಜಿಬಿಎ ಮಾದರಿಯಲ್ಲಿಯೇ ನಿಯಮ ರೂಪಿಸಿ ಎ ಖಾತಾ ನೀಡಲು ನಿರ್ಧಾರ ಕೈಗೊಳ್ಳಲಾಗಿದೆ. ಇದರಿಂದ ಬೆಂಗಳೂರು ಹೊರತುಪಡಿಸಿ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿರುವ ಪುರಸಭೆ, ಪಟ್ಟಣ ಪಂಚಾಯಿತಿ, ನಗರಸಭೆ, ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಬಿ ಖಾತಾ ಆಸ್ತಿಗಳನ್ನು ಪುಟ 2ಕ್ಕೆ

### ಅಕ್ಕಪಡೆ ಯೋಜನೆ ಜಾರಿ

**ಬೆಂಗಳೂರು:** ರಾಜ್ಯದ 31 ಜಿಲ್ಲೆಗಳ ಮತ್ತು 5 ಪೊಲೀಸ್ ಆಯುಕ್ತಾಲಯಗಳಲ್ಲಿ ಅಕ್ಕಪಡೆ ಯೋಜನೆ ಜಾರಿಗೆ ಸಚಿವ ಸಂಪುಟ ಒಪ್ಪಿಗೆ ನೀಡಿದೆ. ರಾಜ್ಯದ ವಿವಿಧ ಕಾರಾಗೃಹಗಳಲ್ಲಿ ಇರುವ 33 ಜೀವಾವಧಿ ಶಿಕ್ಷಾ ಬಂಧಿಗಳನ್ನು ಸನ್ನಡತೆಯ ಆಧಾರದಲ್ಲಿ ಬಿಡುಗಡೆ ಮಾಡಲು ಕ್ಯಾಬಿನೆಟ್ ಸಮ್ಮತಿಸಿದೆ. ಆರ್ಮ್ಸ್ ಆಕ್ಟ್ ಸಂಬಂಧಿಸಿದ ಹಿನ್ನೆಲೆಯಲ್ಲಿ ಇಬ್ಬರು ಬಂಧಿಗಳ ಬಿಡುಗಡೆಗೆ ಕೇಂದ್ರದ ಅನುಮತಿ ಪಡೆಯಲು ತೀರ್ಮಾನಿಸಲಾಗಿದೆ.

### ಜಿ ರಾಮ್ ಜಿ ವಿರುದ್ಧ ಕಾನೂನು ಹೋರಾಟ

**ಬೆಂಗಳೂರು:** ಜಿ ರಾಮ್ ಜಿ ಕಾಯ್ದೆ ವಿರೋಧಿಸಿ ಕೇಂದ್ರ ಸರ್ಕಾರದ ವಿರುದ್ಧ ಕಾನೂನು ಹೋರಾಟಕ್ಕೆ ಸಚಿವ ಸಂಪುಟದಲ್ಲಿ ತೀರ್ಮಾನಿಸಿದೆ. ಸುಪ್ರೀಂ ಕೋರ್ಟ್‌ನಲ್ಲಿ ಕಾನೂನು ಹೋರಾಟಕ್ಕೆ ಅಡ್ವೊಕೇಟ್ ಜನರಲ್ ಅಭಿಪ್ರಾಯ ಪಡೆಯಲಾಗಿದೆ. ಕೋರ್ಟ್‌ನಲ್ಲಿ ಕಾನೂನು ಹೋರಾಟ, ಜನತಾ ನ್ಯಾಯಾಲಯದಲ್ಲಿ ರಾಜಕೀಯ ಹೋರಾಟ ಮಾಡಲು ತೀರ್ಮಾನಿಸಲಾಯಿತು. ರಾಷ್ಟ್ರದಲ್ಲಿ ಸದ್ದು ಪುಟ 2ಕ್ಕೆ

## ಬಿಪಿಎಲ್ ಕಾರ್ಡ್ ರದ್ದಾದರೆ ಗೃಹಲಕ್ಷ್ಮಿ ಹಣ ಸಿಗಲ್ಲ: ಸಚಿವೆ

**ಬೆಂಗಳೂರು:** ಹಣಕಾಸು ಇಲಾಖೆ ಅನುಮತಿ ನೀಡಿದ ತಕ್ಷಣವೇ 2025ರ ಫೆಬ್ರವರಿ ಹಾಗೂ ಮಾರ್ಚ್ ತಿಂಗಳ ಗೃಹಲಕ್ಷ್ಮಿ ಯೋಜನೆಯ ಹಣವನ್ನು ಫಲಾನುಭವಿಗಳ ಖಾತೆಗೆ ಜಮಾ ಮಾಡಲಾಗುವುದು ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ತಿಳಿಸಿದರು.



ಸಚಿವ ಸಂಪುಟ ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಈ ಎರಡು ತಿಂಗಳ ಗೃಹಲಕ್ಷ್ಮಿ ಯೋಜನೆ ಹಣ ಬಿಡುಗಡೆ ಕುರಿತಂತೆ ಈಗಾಗಲೇ ಮುಖ್ಯಮಂತ್ರಿಗಳ ಬಳಿ ಚರ್ಚಿಸಲಾಗಿದೆ.

ಬಿಪಿಎಲ್ ಕಾರ್ಡ್ ರದ್ದಾಗಿದ್ದರೆ ಗೃಹಲಕ್ಷ್ಮಿ ಹಣ ಸಿಗಲ್ಲ. ಅನರ್ಹ ರೇಷನ್ ಕಾರ್ಡ್‌ಗಳು ರದ್ದಾಗಿರುವ ಕಾರಣ ಕೆಲವರಿಗೆ ಹಣ ಸಂದಾಯವಾಗಿಲ್ಲ. ಆಹಾರ ಇಲಾಖೆಯಿಂದ ಹೊಸ ಡೇಟಾ ಬಂದ ತಕ್ಷಣ ಅವರಿಗೂ ಹಣ ಸಿಗಲಿದೆ ಎಂದು ಹೇಳಿದರು.

ಗೃಹಲಕ್ಷ್ಮಿ ಸಹಕಾರ ಸಂಘಕ್ಕೆ ಸದಸ್ಯರಾದವರು ಪ್ರತಿ ತಿಂಗಳು 200 ರೂಪಾಯಿ ಹಣ ಪಾವತಿಸಬೇಕು. 6 ತಿಂಗಳು ಆದ ಬಳಿಕ ಸಾಲ ಸೌಲಭ್ಯ ಪಡೆಯಲು ಅರ್ಹರಾಗುತ್ತಾರೆ. ನನ್ನ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಇದ್ದು, ಹೆಚ್ಚು ಕಂಡೀಷನ್‌ಗಳನ್ನು ಹಾಕದೇ ಅರ್ಹರನ್ನು ಗುರುತಿಸಿ ಸಾಲ ನೀಡಲಾಗುವುದು. ಜೊತೆಗೆ ಆರೋಗ್ಯ ವಿಮೆಯನ್ನು ನೀಡುವ ಯೋಚನೆ ಇದೆ ಎಂದು ಹೇಳಿದರು.

## ಡಿಕೆಶಿಗೆ ಅಸ್ಸಾಂ ಚುನಾವಣೆ ಹೊಣೆ: ಸದ್ಯಕ್ಕಿಲ್ಲ ನಾಯಕತ್ವ ಬದಲಾವಣೆ?

**ಬೆಂಗಳೂರು:** ಮುಖ್ಯಮಂತ್ರಿ ಕುರ್ಚಿ ಪಡೆಯಲು ಕಸರತ್ತು ನಡೆಸುತ್ತಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಕಾಂಗ್ರೆಸ್ ಹೈಕಮಾಂಡ್ ಬಿಗ್ ಶಾಕ್ ನೀಡಿದೆ. ಡಿಕೆಶಿ ಅವರನ್ನು ಅಸ್ಸಾಂ ವಿಧಾನಸಭಾ ಚುನಾವಣೆ ಹಿರಿಯ ವೀಕ್ಷಕರಾಗಿ ನೇಮಕ ಮಾಡಲಾಗಿದೆ.

ಇದರೊಂದಿಗೆ ರಾಜ್ಯದಲ್ಲಿ ಮುಖ್ಯಮಂತ್ರಿ ಕುರ್ಚಿ ಕದನ ಸದ್ಯಕ್ಕೆ ಮುಂದೂಡಿಕೆಯಾಗಿದೆ. ಪಂಚರಾಜ್ಯ ಚುನಾವಣೆ ಮುಗಿಯುವವರೆಗೂ ನಾಯಕತ್ವ ಬದಲಾವಣೆ ಬಗ್ಗೆ ಯಾವುದೇ ನಿರ್ಧಾರ ಕೈಗೊಳ್ಳದಿರಲು




ನಿರ್ಧರಿಸಿದೆ ಎನ್ನಲಾಗಿದೆ. 126 ಸದಸ್ಯ ಬಲದ ಅಸ್ಸಾಂ ವಿಧಾನಸಭೆಗೆ ಮಾರ್ಚ್–ಏಪ್ರಿಲ್‌ನಲ್ಲಿ ಚುನಾವಣೆ ನಡೆಯುವ ಸಾಧ್ಯತೆಯಿದೆ. ಪುಟ 2ಕ್ಕೆ

# ಬಿಜೆಪಿಯಲ್ಲಿ ಜೆಡಿಎಸ್ ಶೀಘ್ರ ವಿಲೀನ

**ಆಗ ಆಟಕ್ಕೆ 3, ಲೆಕ್ಕಕ್ಕೆ 2 ಪಕ್ಷ ಎಂಬ ಗೊಂದಲ ಇರಲ್ಲ: ಡಿ.ಕೆ.ಶಿವಕುಮಾರ್ ಲೇವಡಿ**

**ಬೆಂಗಳೂರು:** ಬಿಜೆಪಿ ಜೊತೆ ಜೆಡಿಎಸ್ ಸದ್ಯದಲ್ಲಿಯೇ ವಿಲೀನವಾಗುವ ಸಾಧ್ಯತೆ ಇದೆ. ವಿಲೀನವಾದರೆ ನಮಗೂ ಒಳ್ಳೆಯದೇ. ನಾವೂ ನೇರವಾಗಿ ಬಿಜೆಪಿ ಜೊತೆ ಹೋರಾಟ ಮಾಡಬಹುದು. ಆಗ 'ಆಟಕ್ಕೆ ಮೂರು ಪಕ್ಷ, ಲೆಕ್ಕಕ್ಕೆ ಮಾತ್ರ ಎರಡು ಪಕ್ಷ ಎಂಬ ಗೊಂದಲ ಇರುವುದಿಲ್ಲ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ತಿರುಗೇಟು ನೀಡಿದರು.



ಕೆಪಿಸಿಸಿ ಕಚೇರಿಯಲ್ಲಿ ಗುರುವಾರ ಮಾತನಾಡಿದ ಅವರು, ಕುಮಾರಸ್ವಾಮಿ ನಡೆ ನೋಡಿದರೆ ವಿಲೀನ ಶೀಘ್ರದಲ್ಲಿಯೇ ನಡೆಯಲಿದೆ. ಜೆಡಿಎಸ್ ಪಕ್ಷವನ್ನು ಕುಮಾರಸ್ವಾಮಿ ಅವರು ತಮ್ಮ ವೈಯಕ್ತಿಕ ಆಸ್ತಿಯಂತೆ ಮಾಡಿಕೊಂಡಿದ್ದಾರೆ. ಜೆಡಿಎಸ್ ಪಕ್ಷಕ್ಕೆ ಒಂದು ಸಿದ್ಧಾಂತ, ಬದ್ಧತೆ, ನೀತಿ ಇಲ್ಲ. ನಿಮ್ಮ ಸರ್ಕಾರ ಆಡಳಿತದಲ್ಲಿದ್ದು, ಇದನ್ನು ಉಪಯೋಗಿಸಿಕೊಳ್ಳಿ ಎಂದು ಪಕ್ಷಕ್ಕೆ ಸೇರ್ಪಡೆಯಾದ ಮುಖಂಡರಿಗೆ ತಿಳಿಸಿದರು.

ಬೆಂಗಳೂರು ನಗರದಲ್ಲಿ ಚುನಾವಣೆ ಸಮೀಪಿಸುತ್ತಿದೆ. ಈ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಲು ಅನೇಕರು ಉತ್ಸುಕರಾಗಿದ್ದಾರೆ. ಬೆಂಗಳೂರು ಪಶ್ಚಿಮ ಪಾಲಿಕೆಯಲ್ಲಿ 247, ಬೆಂಗಳೂರು ಉತ್ತರದಲ್ಲಿ 199, ಬೆಂಗಳೂರು ದಕ್ಷಿಣದಲ್ಲಿ 129, ಬೆಂಗಳೂರು ಕೇಂದ್ರದಲ್ಲಿ 106, ಬೆಂಗಳೂರು ಪೂರ್ವದಲ್ಲಿ 78 ಸೇರಿ ಒಟ್ಟು 779 ಟಿಕೆಟ್ ಆಕಾಂಕ್ಷಿಗಳು ಸ್ಪರ್ಧಿಸಲು ಆಸಕ್ತಿ ತೋರಿಸಿ ಅರ್ಜಿ ಪಡೆದುಕೊಂಡಿದ್ದಾರೆ ಎಂದು ಹೇಳಿದರು.

ಆಸಕ್ತರು ಜ.10ರ ಒಳಗಾಗಿ ಅರ್ಜಿ ಕೊಟ್ಟರೆ ಪಕ್ಷದಿಂದ ತಂಡವನ್ನು ಕಳುಹಿಸಿ ವರದಿ ಪಡೆಯಬಹುದು. ಯಾರು ವಾರ್ಡ್‌ಗಳಲ್ಲಿ ಕೆಲಸ ಮಾಡಿದ್ದಾರೆ, ಯಾರು ಮಾಡಿಲ್ಲ, ಯಾರು ಪಕ್ಷಕ್ಕೆ ನಿಷ್ಠರಾಗಿದ್ದಾರೆ ಎಂದು ಪರಿಶೀಲಿಸಿ ಟಿಕೆಟ್ ನೀಡಬಹುದು ಎಂದು ಹೇಳಿದರು.

ಬೆಂಗಳೂರು ನಗರದಲ್ಲಿ ನಮ್ಮ ಸರ್ಕಾರ ಮಾಡುತ್ತಿರುವ ಪುಟ 2ಕ್ಕೆ

# ಕಾಂಗ್ರೆಸ್ ಯಾವುದೇ ವ್ಯಕ್ತಿಗಾಗಿ ಅಲ್ಲ

## ರಾಜಣ್ಣ, ಮಹದೇವಪ್ಪ ಹೇಳಿಕೆಗೆ ಪ್ರಿಯಾಂಕ್ ಖರ್ಗೆ ತಿರುಗೇಟು

**ಬೆಂಗಳೂರು:** ಕಾಂಗ್ರೆಸ್ ಪಕ್ಷ ಯಾವುದೇ ವ್ಯಕ್ತಿಗಳಿಂದ ಅಥವಾ ವ್ಯಕ್ತಿಗಳಿಗಾಗಿ ಅಲ್ಲ. ನಾವು ನಾಯಕರು ಇಲ್ಲಿದ್ದೇವೆ ಎಂಬುದನ್ನು ಯಾರೂ ಮರೆಯಬಾರದು ಎಂದು ಸಚಿವ ಪ್ರಿಯಾಂಕ್ ಖರ್ಗೆ ತರಾಟೆಗೆ ತೆಗೆದುಕೊಂಡಿದ್ದಾರೆ.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, ಕಾಂಗ್ರೆಸ್ 140 ವರ್ಷಗಳಿಂದ ಇದೆ. ನಾಯಕತ್ವದ ಬೆಳವಣಿಗೆ ನಿರಂತರ ಪ್ರಕ್ರಿಯೆ. ಕಾರ್ಮಿಕರಿಲ್ಲದೆ, ನಾನು ನಾಯಕನೂ ಅಲ್ಲ, ಬೇರೆಯವರು ಕೂಡ ಅಲ್ಲ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಸೂಕ್ತ ಸ್ಥಾನಮಾನ ನೀಡದಿದ್ದರೆ ಕರ್ನಾಟಕದಲ್ಲಿ ಕಾಂಗ್ರೆಸ್ ಅಸ್ತಿತ್ವ ಕಳೆದುಕೊಳ್ಳುತ್ತದೆ ಎಂದು ಹಿರಿಯ ಶಾಸಕ ಕೆ.ಎನ್.ರಾಜಣ್ಣ ಹೇಳಿಕೆ ಹಾಗೂ ಸಿದ್ದರಾಮಯ್ಯ ಇಲ್ಲದಿದ್ದರೆ ಕಾಂಗ್ರೆಸ್ ಪಕ್ಷ ಉಳಿಯಲ್ಲ ಎಂಬ ಸಚಿವ ಎಚ್.ಸಿ.ಮಹದೇವಪ್ಪ ಹೇಳಿಕೆ ಹಿನ್ನೆಲೆಯಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಯಾರ ಹೆಸರನ್ನೂ ಉಲ್ಲೇಖಿಸದೆ ತರಾಟೆಗೆ ತೆಗೆದುಕೊಂಡರು.

ಸಿದ್ದರಾಮಯ್ಯ ಇಲ್ಲದೆ ಕಾಂಗ್ರೆಸ್ ಇಲ್ಲ ಎಂದು ರಾಜಣ್ಣ ಹೇಳಿದ್ದರು. ಈ ಹಿಂದೆಯೂ ಇದೇ ರೀತಿಯಲ್ಲಿ





ಹೇಳಿದ್ದರು. ಇದಕ್ಕೆ ಅಸಮಾಧಾನ ವ್ಯಕ್ತಪಡಿಸಿರುವ ಪ್ರಿಯಾಂಕ್ ಖರ್ಗೆ, 'ಬಿ' ಫಾರ್ಮ್‌ಗಾಗಿ ಕಾಂಗ್ರೆಸ್ ಬೇಕು, ಚುನಾವಣಾ ಪ್ರಚಾರದ ಸಮಯದಲ್ಲಿ ಕಾಂಗ್ರೆಸ್ ನಾಯಕತ್ವ ಬೇಕು ಮತ್ತು ಕಾಂಗ್ರೆಸ್ ಸಿದ್ಧಾಂತ ಬೇಕು. ಆದರೆ ಗೆದ್ದು ಅಧಿಕಾರಕ್ಕೆ ಬಂದ ನಂತರ, ಅಂತಹ ಮಾತುಗಳನ್ನು ಹೇಳುವುದು ತಪ್ಪು ಎಂದು ರಾಜಣ್ಣ ಅವರ ಹೆಸರನ್ನು ಉಲ್ಲೇಖಿಸದೆ ಹೇಳಿದರು. ರಾಜಣ್ಣ ಅವರ ಹೇಳಿಕೆಯ ಕುರಿತಾದ ಪ್ರಶ್ನೆಗೆ ಅವರು ಪ್ರತಿಕ್ರಿಯಿಸುತ್ತಿದ್ದರು.

ನಿಗಮ–ಮಂಡಳಿಗಳಿಗೆ ಕಾಂಗ್ರೆಸ್ ಕಾರ್ಯಕರ್ತರನ್ನು ನೇಮಿಸುವಲ್ಲಿ ವಿಳಂಬದ ಬಗ್ಗೆ ಕೇಳಿದಾಗ, ತಾಳ್ಮೆಯಿಂದಿರಬೇಕು ಎಂದು ಹೇಳಿದರು. ಪುಟ 2ಕ್ಕೆ

## ಹುಬ್ಬಳ್ಳಿ ಮಹಿಳೆ ಬೆತ್ತಲೆ ಪ್ರಕರಣ: ರಾಷ್ಟ್ರೀಯ ಮಹಿಳಾ ಆಯೋಗ ಎಂಟ್ರಿ

**ನವದೆಹಲಿ:** ಹುಬ್ಬಳ್ಳಿಯಲ್ಲಿ ಮಹಿಳೆಯೊಬ್ಬರನ್ನು ಪೊಲೀಸರು ಬೆತ್ತಲೆಗೊಳಿಸಿ ದೌರ್ಜನ್ಯ ಮಾಡಿದ್ದಾರೆ ಎಂಬ ಆರೋಪದ ಹಿನ್ನೆಲೆಯಲ್ಲಿ ರಾಷ್ಟ್ರೀಯ ಮಹಿಳಾ ಆಯೋಗ ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡಿದೆ.

ಈ ಸಂಬಂಧ ಕರ್ನಾಟಕ ಡಿಜಿಪಿ ಅವರಿಗೆ ಪತ್ರ ಬರೆದಿರುವ ಆಯೋಗದ ಅಧ್ಯಕ್ಷೆ ವಿಜಯಾ ರಹಟ್ಕರ್ ಘಟನೆಯನ್ನು ತೀವ್ರವಾಗಿ ಖಂಡಿಸಿದ್ದಾರೆ. ಈ ಘಟನೆಯು ಮಹಿಳೆಯರ ವ್ಯಕ್ತಿತ್ವದ ಗೌರವ, ವೈಯಕ್ತಿಕ ಸ್ವಾತಂತ್ರ್ಯ ಮತ್ತು ಲಿಂಗ ಆಧಾರಿತ ಹಿಂಸೆಯಿಂದ ರಕ್ಷಣೆಗೆ ಗಂಭೀರ ಉಲ್ಲಂಘನೆಯಾಗಿದೆ ಎಂದು ಹೇಳಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಎಫ್‌ಐಆರ್ ದಾಖಲಿಸದಿದ್ದರೆ ತಕ್ಷಣ ದಾಖಲಿಸಿ, ನ್ಯಾಯಸಮ್ಮತ, ನಿಷ್ಪಕ್ಷಪಾತ ಮತ್ತು ಸಮಯಬದ್ಧ ತನಿಖೆ ನಡೆಸಬೇಕು. ವೀಡಿಯೋ ಸಾಕ್ಷ್ಯಗಳನ್ನು ಪರಿಶೀಲಿಸಿ. ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕಠಿಣ

## ಸಿಎಂ ಸಿದ್ದು ಮಾರ್ಗದರ್ಶನದಲ್ಲೇ ಮುಂದಿನ ಚುನಾವಣೆ: ಬಾಲಕೃಷ್ಣ

**ರಾಮನಗರ:** ರಾಜ್ಯಕ್ಕೆ ಸಿದ್ದರಾಮಯ್ಯ ಅವಶ್ಯಕತೆ ಅವರ ಇದೆ. ಮುಂದೆಯೂ ಅವರ ಮಾರ್ಗದರ್ಶನದಲ್ಲೇ ಚುನಾವಣೆ ನಡೆಯಬೇಕಿದೆ ಎಂದು ಶಾಸಕ ಎಚ್.ಸಿ.ಬಾಲಕೃಷ್ಣ ಹೇಳಿದರು.



ಡಿಸಿಎಂ ಡಿಕೆಶಿಗೆ ಸಿಎಂ ಸ್ಥಾನ ನೀಡುವ ವಿಚಾರವಾಗಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಈ ಬಗ್ಗೆ ಹೈಕಮಾಂಡ್ ನಾಯಕರು ತೀರ್ಮಾನ ಮಾಡುತ್ತಾರೆ. ನಾನಾಗಲಿ, ಶಾಸಕರಾಗಲಿ ಸಿಎಂ ಮಾಡಲು ಆಗಲ್ಲ. ಸಿದ್ದರಾಮಯ್ಯ ಇರಬೇಕಾ, ಡಿಕೆಶಿಗೆ ಅವಕಾಶ ಕೊಡಬೇಕಾ ಎಂಬ ಬಗ್ಗೆ ವರಿಷ್ಠರು ನಿರ್ಧಾರ ಮಾಡುತ್ತಾರೆ. ಶೀಘ್ರದಲ್ಲೇ ಸಿಎಂ, ಡಿಸಿಎಂ ಇಬ್ಬರನ್ನೂ ಸಭೆ ಕರೆಯುವ ಸಾಧ್ಯತೆ ಇದೆ ಎಂದರು.

ಸಿದ್ದರಾಮಯ್ಯಗೆ ಕಾಂಗ್ರೆಸ್ ಪಕ್ಷ ಎಲ್ಲವನ್ನೂ ಕೊಟ್ಟಿದೆ. ಕಾಂಗ್ರೆಸ್ ಪಕ್ಷಕ್ಕೆ ಬಂದ ಮೇಲೆ ಸಿಎಂ, ವಿಪಕ್ಷ ನಾಯಕ ಆದರು. ಈಗ ನಮ್ಮ ಮನೆ ಯಜಮಾನ, ಪ್ರಶ್ನಾತೀತ ನಾಯಕ. ಅವರಿಗೆ ನಾಳೆಯೇ ಕೊಡಬೇಕು, ನಾಡಿದ್ದೇ ಕೊಡಬೇಕು ಅಂತ ಕೇಳಲು ಆಗಲ್ಲ. ಒಳ್ಳೆಯ ನಾಯಕತ್ವ, ಅವರಿಗೆ ಅವಕಾಶ ಕೊಡಲಿ ಎಂಬುದು ನಮ್ಮ ಅಭಿಪ್ರಾಯ. ಮುಂದಿನ ದಿನಗಳಲ್ಲಿ ಇದು ಪಕ್ಷ ಸಂಘಟನೆಗೆ ಅನುಕೂಲ

## ಕೋಗಿಲು: 26 ಮಂದಿ ಅರ್ಹರು

**ಬೆಂಗಳೂರು:** ಕೋಗಿಲು ಲೇಔಟ್ ಅಕ್ರಮ ಮನೆಗಳನ್ನು ತೆರವುಗೊಳಿಸಿದ ಪ್ರಕರಣದಲ್ಲಿ ಸದ್ಯಕ್ಕೆ 26 ನಿರಾಶ್ರಿತ ಕುಟುಂಬಗಳಿಗೆ ಮಾತ್ರ ಮನೆ ಕೊಡಲು ಅವಕಾಶವಿದೆ ಎಂದು ವಸತಿ ಸಚಿವ ಜಮೀರ್ ಅಹ್ಮದ್ ತಿಳಿಸಿದರು.

ಡಿಸಿಎಂ ಡಿ.ಕೆ ಶಿವಕುಮಾರ್ ಅವರನ್ನು ಗುರುವಾರ ಭೇಟಿಯಾಗಿ ಚರ್ಚಿಸಿದ ಬಳಿಕ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಅಕ್ರಮ ಮನೆಗಳು ತೆರವಾಗಿರುವವರ ಪೈಕಿ 26 ಜನರಿಗೆ ಮನೆ ಕೊಡಲು ಅವಕಾಶವಿದೆ. ಪರಿಶೀಲನೆ ವೇಳೆ 26 ನಿವಾಸಿಗಳ ದಾಖಲೆಗಳು ಮಾತ್ರ ಸರಿಯಾಗಿದೆ. ಇನ್ನೂ ಹಲವರ ಪರಿಶೀಲನೆ ಕಾರ್ಯ ನಡೆಯುತ್ತಿದೆ ಎಂದರು.

ಅಲ್ಲಿ ಒಟ್ಟು 161 ಮನೆಗಳನ್ನು ತೆರವು ಮಾಡಲಾಗಿದೆ. ಹೊರಗಿನವರಿಗೆ ಯಾವುದೇ ಕಾರಣಕ್ಕೂ ಮನೆ ನೀಡಲ್ಲ. 26 ಜನರ ದಾಖಲೆಗಳು ಸೂಕ್ತವಾಗಿವೆ. ಅವರಿಗೆ ಮನೆ ಹಂಚಿಕೆ ಮಾಡುತ್ತೇವೆ. ಸಿಎಂ ಈಗಾಗಲೇ ಸಭೆ ಮಾಡಿ ಮನೆ ನೀಡಲು ಸೂಚಿಸಿದ್ದಾರೆ ಎಂದರು.

**ಮಾನದಂಡಗಳು:** ಕರ್ನಾಟಕದ ಬೇರೆ ಭಾಗದಿಂದ ಬಂದಿದ್ದರೂ ಕೋಗಿಲು ಲೇಔಟ್‌ನಲ್ಲಿ ಕನಿಷ್ಠ ಐದು ವರ್ಷದಿಂದ ವಾಸ ಇರಬೇಕು. ಮಾತೃಭಾಷೆ ಬೇರೆ ಆಗಿದ್ದರೂ ಕರ್ನಾಟಕದವರಾಗಿರಬೇಕು.

## ಬಾಯ್ಲರ್ ಸ್ಫೋಟ: 7 ಮಂದಿ ಸಾವು

*** ಬೆಳಗಾವಿ ಇನಾಮ್‌ದಾರ್ ಸಕ್ಕರೆ ಕಾರ್ಖಾನೆಯಲ್ಲಿ ದುರ್ಘಟನೆ**

**ಬೆಳಗಾವಿ:** ಇಲ್ಲಿನ ಸಕ್ಕರೆ ಕಾರ್ಖಾನೆಯಲ್ಲಿ ಸಂಭವಿಸಿದ ಬಾಯ್ಲರ್ ಸ್ಫೋಟದಲ್ಲಿ ಮೃತಪಟ್ಟವರ ಸಂಖ್ಯೆ ಏಳಕ್ಕೆ ಏರಿದೆ. ಗುರುವಾರ ಮತ್ತೆ ನಾಲ್ವರು ಸಾವಿಗೀಡಾಗಿದ್ದಾರೆ.

ಬೈಲಹೊಂಗಲ ತಾಲ್ಲೂಕಿನ ಮರಕುಂಬಿ ಗ್ರಾಮದ ಬಳಿಯ ಇನಾಮ್‌ದಾರ್ ಸಕ್ಕರೆ ಕಾರ್ಖಾನೆಯಲ್ಲಿ ಬುಧವಾರ ಮಧ್ಯಾಹ್ನ ಸ್ಫೋಟ ಸಂಭವಿಸಿ ಮೂವರು ಮೃತಪಟ್ಟಿದ್ದರು. ಮೃತ ಮೂವರನ್ನು ಜಮಖಂಡಿಯ ಅಕ್ಷಯ ಚೋಪಡೆ (45), ನೇಸರಗಿಯ ದೀಪಕ್ ಮುನವಳ್ಳಿ (31), ಖಾನಾಪುರ ತಾಲ್ಲೂಕಿನ ಚಿಕ್ಕಮುನವಳ್ಳಿಯ ಸುದರ್ಶನ ಬನೋಶಿ (25) ಎಂದು ಗುರುತಿಸಲಾಗಿದೆ.

ಗೋಕಾಕ ತಾಲೂಕಿನ ಗೊಡಚಿನಮಲ್ಕಿ ಗ್ರಾಮದ ಭರತ್ ಬಸಪ್ಪ ಸಾರವಾಡಿ (27), ಗೋಕಾಕದ ರಾಘವೇಂದ್ರ ಗಿರಿಯಾಳ್ (35), ಅಥಣಿಯ ಮಂಜು ತೇರದಾಳ (35), ಬೈಲಹೊಂಗಲದ ಅರವಳ್ಳಿಯ ಮಂಜು ಕಾಜಗಾರ (28), ಬಾಗಲಕೋಟೆ ಜಿಲ್ಲೆಯ ಮರೇಗುದ್ದಿಯ ಗುರು ತಮ್ಮಣ್ಣವರ ಗಾಯಗೊಂಡಿದ್ದರು. ಈ ಪೈಕಿ ಚಿಕಿತ್ಸೆಗೆ ಸ್ಪಂದಿಸದೆ ಗುರುವಾರ ನಾಲ್ವರು ಸಾವಿಗೀಡಾಗಿದ್ದಾರೆ. ಮತ್ತೋರ್ವ ವ್ಯಕ್ತಿಯ ಸ್ಥಿತಿ ಗಂಭೀರ



ವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.


ಕಬ್ಬಿನ ರಸವನ್ನು ಕುದಿಸಲು ಬಳಸುವ 40 ಅಡಿ ಎತ್ತರದ ಪಾತ್ರೆಯ ದುರಸ್ತಿ ಕಾರ್ಯದ ಸಮಯದಲ್ಲಿ ಈ ಘಟನೆ ಸಂಭವಿಸಿದೆ. ಕಾರ್ಖಾನೆ ಅಧಿಕಾರಿಗಳ ಪ್ರಕಾರ, ದುರಸ್ತಿಗೆ ಮುಂಚಿತವಾಗಿ ಘಟಕವನ್ನು ಮುಚ್ಚಲಾಗಿತ್ತು. ಕಾರ್ಮಿಕರು ನಿರ್ವಹಣೆಗಾಗಿ ಕರ್ಪ್ಯೂ ಗೋಡೆಯಿಂದ ನಟ್ ಮತ್ತು ಬೋಲ್ಟ್‌ಗಳನ್ನು ತೆಗೆಯುತ್ತಿದ್ದಾಗ, ಬಿಸಿನೀರು ಇದ್ದಕ್ಕಿದ್ದಂತೆ ವಾಲ್ವ್ ಮೂಲಕ ಚಿಮ್ಮಿ ಕೆಳಗೆ ಕೆಲಸ ಮಾಡುತ್ತಿದ್ದವರ ಮೇಲೆ ಬಿದ್ದಿದೆ.

ಈ ನೀರು ಕಾರ್ಮಿಕರ ಮೇಲೆ ಬಿದ್ದಾಗ ಪುಟ 2ಕ್ಕೆ

# ಬಳ್ಳಾರಿ ಪ್ರಕರಣ: ಸಿಬಿಐಗೆ ವಹಿಸಲ್ಲ

## ರಾಜ್ಯದ ಪೊಲೀಸರಿಗೆ ತನಿಖೆ ಸಾಮರ್ಥ್ಯವಿದೆ: ಗೃಹಸಚಿವ ಪರಮೇಶ್ವರ್

**ಬೆಂಗಳೂರು:** ಬಳ್ಳಾರಿ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸುವ ಅಗತ್ಯವಿಲ್ಲ. ಪ್ರಕರಣವನ್ನು ತನಿಖೆ ಮಾಡುವ ಸಾಮರ್ಥ್ಯ ನಮ್ಮ ಪೊಲೀಸರಿಗೆ ಇದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹೇಳಿದರು.



ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮ್ಮ ಪೊಲೀಸರಿಗೆ ತನಿಖೆ ಮಾಡಲು ಆಗುವುದಿಲ್ಲ ಎಂಬ ಸಂದರ್ಭ ಬಂದರೆ ಸಿಬಿಐಗೆ ನೀಡುವ ಬಗ್ಗೆ ಮಾತನಾಡಬಹುದು. ಈಗಾಗಲೇ ಯಾವುದೇ ಪ್ರಕರಣಗಳನ್ನು ಸಿಬಿಐಗೆ ನೀಡುವುದಿಲ್ಲ ಎಂದು ಸಂಪುಟ ಸಭೆಯಲ್ಲಿ ತೀರ್ಮಾನ ಮಾಡಲಾಗಿದೆ. ಸಿಬಿಐಗೆ ಕೊಡುವ ಅಗತ್ಯತೆಯೂ ಇಲ್ಲ ಎಂದು ತಿರುಗೇಟು ನೀಡಿದರು.

ಹುಬ್ಬಳ್ಳಿ ಘಟನೆಯ ಬಗ್ಗೆ ಪೊಲೀಸ್ ಕಮಿಷನರ್ ಶಶಿಕುಮಾರ್ ಹೇಳಿಕೆ ನೀಡಿದ್ದಾರೆ. ಮಹಿಳೆಯನ್ನು ವಿವಸ್ತ್ರಗೊಳಿಸಿಲ್ಲ. ಅರೆಸ್ಟ್ ಮಾಡುವ ಸಂದರ್ಭದಲ್ಲಿ ಮಹಿಳೆಯೇ ಆ ರೀತಿ ಮಾಡಿಕೊಂಡಿದ್ದಾರೆ ಎನ್ನುವ ಸ್ಪಷ್ಟನೆಯನ್ನು ಕಮಿಷನರ್ ನೀಡಿದ್ದಾರೆ. ಕಮಿಷನರ್ ಸ್ಪಷ್ಟಪಡಿಸಿದ ಮೇಲೆ ಅದಕ್ಕಿಂತ ಇನ್ನೇನು ಬೇಕಾಗಿದೆ. ಎಲ್ಲದರಲ್ಲೂ ರಾಜಕೀಯ ಮಾಡುವುದು ಒಳ್ಳೆಯದಲ್ಲ. ಹೆಣ್ಣುಮಗಳ ವಿಚಾರವನ್ನು ಕೈಗೆತ್ತಿಕೊಂಡು ಬಿಜೆಪಿ ನಾಯಕರು ರಾಜಕೀಯ ಮಾಡುವುದು ಸರಿ ಕಾಣುವುದಿಲ್ಲ ಎಂದು ಹೇಳಿದರು.

ಯಾವ ಪಕ್ಷದವರನ್ನೂ ಅವರ ರಾಜಕೀಯ ಪಕ್ಷದ ಹಿನ್ನೆಲೆಯಲ್ಲಿ ಟಾರ್ಗೆಟ್ ಮಾಡುವುದಿಲ್ಲ. ಪುಟ 2ಕ್ಕೆ

### ಎಚ್‌ಡಿಕೆ ಹೇಳಿಕೆಗೆ ಅಸಮಾಧಾನ

**ಬೆಂಗಳೂರು:** ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಎರಡು ಬಾರಿ ರಾಜ್ಯದ ಮುಖ್ಯಮಂತ್ರಿ ಆಗಿದ್ದರು. ಕೇಂದ್ರದಲ್ಲಿ ಬೃಹತ್ ಕೈಗಾರಿಕೆ ಸಚಿವರಾಗಿದ್ದಾರೆ. ಆದರೆ, ನನ್ನ ಬಗ್ಗೆ ವೈಯಕ್ತಿಕವಾಗಿ ಹೇಳಿಕೆ ಕೊಟ್ಟಿದ್ದಾರೆ ಎಂದು ಸಚಿವ ಪರಮೇಶ್ವರ್ ಅಸಮಾಧಾನ ವ್ಯಕ್ತಪಡಿಸಿದರು.



ರಾಜ್ಯದಲ್ಲಿ ಕಾನೂನು ವ್ಯವಸ್ಥೆಯನ್ನು ಯಾವ ರೀತಿ ಆಡಳಿತ ಮಾಡಬೇಕು ಎಂಬ ಅರಿವು ನನಗಿದೆ ಎಂದು ಅವರಿಗೆ ಹೇಳಬಯಸುತ್ತೇನೆ. ಪುಟ 2ಕ್ಕೆ

**ಮೊದಲ ಪುಟದಿಂದ**

## ಬಿಜೆಪಿಯಲ್ಲಿ ಜೆಡಿಎಸ್ ಶೀಘ್ರ ವಿಲೀನ

ಕೆಲಸವನ್ನು ಬಿಜೆಪಿ ನಾಯಕರೇ ಸ್ವಾಗತಿಸುತ್ತಿದ್ದಾರೆ. ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲಾಗಿದೆ. ರಸ್ತೆಗಳನ್ನು ನಿರ್ಮಿಸಲಾಗುತ್ತಿದೆ. ಖಾತಾ ಪರಿವರ್ತನೆ, ಆಸ್ತಿ ದಾಖಲೆಗಳನ್ನು ಸರಿಪಡಿಸುತ್ತಿರುವುದನ್ನು ನೋಡಿದರೆ, ನಮಗೆ ಭವಿಷ್ಯವಿಲ್ಲ ಎಂದು ಬಿಜೆಪಿ ನಾಯಕರೇ ನಮ್ಮ ಬಳಿ ಹೇಳಿಕೊಂಡಿದ್ದಾರೆ ಎಂದರು. ಚಾಮರಾಜಪೇಟೆ ಬಹಳ ಇತಿಹಾಸವಿರುವ ಕ್ಷೇತ್ರ. ನಾವು ಎಲ್ಲರನ್ನು ಸಮಾನವಾಗಿ ತೆಗೆದುಕೊಂಡು ಹೋಗುವ ಕೆಲಸ ಮಾಡುತ್ತಿದ್ದೇವೆ. ಅನೇಕ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಸೇರ್ಪಡೆಯಾಗಲು ಬಯಸಿ ಹಲವರು ನಮ್ಮ ಸಂಪರ್ಕದಲ್ಲಿ ಇದ್ದಾರೆ. ಪಾಲಿಕೆ ಚುನಾವಣೆ ಒಳಗೆ ಅವರೆಲ್ಲರನ್ನೂ ಸೇರ್ಪಡೆ ಮಾಡಿಕೊಳ್ಳಲಾಗುವುದು ಎಂದು ತಿಳಿಸಿದರು.

## ಸಿಎಂ ಸಿದ್ದು ಮಾರ್ಗದರ್ಶನದಲ್ಲೇ ಮುಂದಿನ ಚುನಾವಣೆ: ಬಾಲಕೃಷ್ಣ

ಆಗಲಿದೆ ಎಂದು ಹೇಳಿದರು.

ಬಳ್ಳಾರಿ ಬ್ಯಾನರ್ ಗಲಾಟೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತ ಶೂಟೌಟ್ ಪ್ರಕರಣದ ಕುರಿತು ಪ್ರತಿಕ್ರಿಯಿಸಿದ ಅವರು, ಜನಾರ್ದನ ರೆಡ್ಡಿ ತುಂಬಾ ಬುದ್ಧಿವಂತರಿದ್ದಾರೆ, ಸುಮ್ಮನೆ ಅಪಪ್ರಚಾರ ಮಾಡಬಾರದು. ನಮ್ಮ ಕಾರ್ಯಕರ್ತರನ್ನ ನಾವೇ ಕೊಲ್ಲಲು ಆಗುತ್ತಾ? ಜನಾರ್ದನ ರೆಡ್ಡಿ ಕಡೆಯವರು ದೊಣ್ಣೆ, ಖಾರದ ಪುಡಿ ತಂದಾಗ ರಕ್ಷಣೆಗಾಗಿ ಗುಂಡು ಹಾರಿಸಿರಬಹುದು. ಈ ವೇಳೆ ಹೆಚ್ಚು ಕಡಿಮೆ ಆಗಿ ಗುಂಡು ತಗುಲಿರಬಹುದು. ಈ ಬಗ್ಗೆ ಇನ್ನೂ ತನಿಖೆ ಆಗುತ್ತಿದೆ. ಈಗಲೇ ಜನಾರ್ದನ ರೆಡ್ಡಿ ಅದನ್ನ ಎತ್ತಿಕಟ್ಟುವ ಕೆಲಸ ಮಾಡಬಾರದು. ನಮ್ಮ ಎಂಎಲ್ಎ ವಾಲ್ಮೀಕಿ ಕಾರ್ಯಕ್ರಮ ಮಾಡುವಾಗ ಇವರೇಕೆ ಆಚೆ ಬಂದರು? ಅವರ ಮನೆಯೊಳಗೆ ಹೋಗಿ ಇವರು ಬ್ಯಾನರ್ ಹಾಕಿದ್ದಾರೆ? ರಸ್ತೆಯಲ್ಲಿ ಬ್ಯಾನರ್ ಹಾಕಿದರೆ ಯಾಕೆ ಗಲಾಟೆ ಮಾಡಬೇಕು? ಈ ಎಲ್ಲಾ ಘಟನೆಗೆ ಜನಾರ್ದನ ರೆಡ್ಡಿಯೇ ನೇರ ಹೊಣೆ. ಜನಾರ್ದನ ರೆಡ್ಡಿ ಬಳ್ಳಾರಿಗೆ ಬರದೇ ಇದ್ದಾಗ ಎಲ್ಲವೂ ನೆಮ್ಮದಿಯಾಗಿತ್ತು. ಇವರು ಬಂದಮೇಲೆ ಈಗ ಬೆಂಕಿ ಹಾಕಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

## ಎಚ್‌ಡಿಕೆ ಹೇಳಿಕೆಗೆ ಅಸಮಾಧಾನ

38 ವರ್ಷ ರಾಜಕಾರಣದಲ್ಲಿದ್ದೇನೆ. ಅನೇಕ ಹುದ್ದೆಗಳಲ್ಲಿ ಕೆಲಸ ಮಾಡಿದ್ದೇನೆ. ಕುಮಾರಸ್ವಾಮಿ ಜೊತೆಗೂ ಕೆಲಸ ಮಾಡಿ ದ್ದೇನೆ. ಹಾಗಾಗಿ ನನ್ನ ಸಾಮಾರ್ಥ್ಯ

ಮತ್ತು ವ್ಯಕ್ತಿತ್ವ ಅವರಿಗೆ ಗೊತ್ತಿದೆ. ಅವರ ಹೇಳಿಕೆಯನ್ನು ಗಂಭೀರವಾಗಿ ತೆಗೆದುಕೊಳ್ಳುವುದಿಲ್ಲ ಎಂದರು.

ನಾನು ಸಹ ಕುಮಾರಸ್ವಾಮಿ ಅವರ ಬಗ್ಗೆ ನಾನು ಏನು ಬೇಕಾದರೂ ಮಾತನಾಡಬಹುದು. ಅವರು ಬಹಳ ಜವಾಬ್ದಾರಿಯುತವಾಗಿ ಹೇಳಿಕೆ ಕೊಟ್ಟಿದ್ದಾರೆ ಎಂದು ಭಾವಿಸುತ್ತೇನೆ. ಅದನ್ನು ಸ್ವೀಕಾರ ಮಾಡುತ್ತೇನೆ ಎಂದು ಹೇಳಿದರು.

## ಬಳ್ಳಾರಿ ಪ್ರಕರಣ: ಸಿಬಿಐಗೆ ವಹಿಸಲ್ಲ

ಪೊಲೀಸರು ಆ ರೀತಿ ಕೆಲಸ ಮಾಡಲು ಸಾಧ್ಯವಿಲ್ಲ. ಮಾಡಕೂಡದು. ಇದಕ್ಕೆ ಯಾವುದೇ ಅವಕಾಶಗಳನ್ನು ಕೊಡುವುದಿಲ್ಲ. ಯಾವುದೇ ರಾಜಕೀಯ ದುರುದ್ದೇಶದಿಂದ ಪೊಲೀಸರು ನಡೆದುಕೊಳ್ಳುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಅಕ್ರಮ ಬಾಂಗ್ಲಾ ವಲಸಿಗರನ್ನು ಹಿಡಿದು, ಗಡಿಪಾರು ಮಾಡಲಾಗುತ್ತಿದೆ. ಈಗಾಗಲೇ ಸಾಕಷ್ಟು ಪ್ರಕರಣಗಳನ್ನು ಮಾಡಿದ್ದೇವೆ. ಬಾಂಗ್ಲಾ ದೇಶದವರು ರಾಜ್ಯದಲ್ಲಿ ಅನಧಿಕೃತವಾಗಿ ಎಲ್ಲಿಯೇ ಇದ್ದರೂ ಪತ್ತೆ ಹಚ್ಚಿ, ಗಡಿಪಾರು ಮಾಡುತ್ತೇವೆ ಎಂದು ತಿಳಿಸಿದರು.

## ಡಿಕೆಶಿಗೆ ಅಸ್ಸಾಂ ಚುನಾವಣೆ ಹೊಣೆ: ಸದ್ಯಕ್ಕಿಲ್ಲ ನಾಯಕತ್ವ ಬದಲಾವಣೆ?

ಈ ಬಗ್ಗೆ ಗುರುವಾರ ಪ್ರತಿಕ್ರಿಯಿಸಿದ ಡಿಸಿಎಂ ಡಿ.ಕೆ.ಶಿವಕುಮಾರ್, ಕಾಂಗ್ರೆಸ್ಸಿಗನಾಗಿ, ಪಕ್ಷಕ್ಕಾಗಿ ಕೆಲಸ ಮಾಡುವುದಾಗಿ ಹೇಳಿದರು. ಕಾಂಗ್ರೆಸ್ಸಿಗನಾಗಿ, ನಾನು ಪಕ್ಷಕ್ಕಾಗಿ ಕೆಲಸ ಮಾಡಬೇಕು. ಅಸ್ಸಾಂ ಅನ್ನು ನೋಡಿಕೊಳ್ಳಲು ಹೈಕಮಾಂಡ್ ನನಗೆ ಹೇಳಿದ್ದಾರೆ. ನಾನು ಹೋಗುತ್ತೇನೆ ಎಂದು ತಿಳಿಸಿದ್ದಾರೆ.

## ಬಿ–ಖಾತೆ ಆಸ್ತಿಗೂ ಎ–ಖಾತಾ

ಎ ಖಾತಾ ಆಸ್ತಿಗಳಾಗಿ ಪರಿವರ್ತಿಸಿಕೊಳ್ಳಲು ಅವಕಾಶ ಸಿಗಲಿದೆ ಎಂದು ಸಚಿವರು ತಿಳಿಸಿದರು.

ಎ ಖಾತೆ ನೀಡಲು ದಂಡದ ಪ್ರಮಾಣ ಇನ್ನೂ ನಿಗದಿ ಮಾಡಿಲ್ಲ. ಈಗಾಗಲೇ ಜಿಬಿಎ ವ್ಯಾಪ್ತಿಯಲ್ಲಿ ಆಸ್ತಿಯ ಮಾರ್ಗಸೂಚಿ ದರದ ಶೇ.5ರಷ್ಟು ದಂಡ ಕಟ್ಟಿ ಎ ಖಾತಾ ಪಡೆಯಲು ಅವಕಾಶ ಕೊಟ್ಟಿದೆ. ಆದರೆ ಶೇ.5ರಷ್ಟು ದಂಡಕ್ಕೆ ಆಕ್ಷೇಪ ವ್ಯಕ್ತವಾಗಿತ್ತು. ಅಲ್ಲದೆ, ಹೆಚ್ಚು ಅರ್ಜಿ ಸಲ್ಲಿಕೆಯೂ ಆಗಿಲ್ಲ. ಹಾಗಾಗಿ ಶೇ.5 ದಂಡದ ಪ್ರಮಾಣ ಇಳಿಕೆ ಬಗ್ಗೆ ಸರ್ಕಾರ ಮಟ್ಟದಲ್ಲಿ ಚರ್ಚೆ ಆಗುತ್ತಿದೆ ಎನ್ನಲಾಗಿದೆ.

# ಅಂಬೇಡ್ಕರ್ ಪ್ರತಿಮೆ ತಾಲೂಕು ಕಛೇರಿ ಆವರಣದಲ್ಲಿ ನಿರ್ಮಿಸಿ



ಗುಂಡ್ಲುಪೇಟೆ ಪಟ್ಟಣದಲ್ಲಿ ಡಾ. ಬಿ.ಆರ್ ಅಂಬೇಡ್ಕರ್ ಪ್ರತಿಮೆ ನಿರ್ಮಾಣ ಮಾಡಲು ದಿನಾಂಕ 10 ರಂದು ಗುದ್ದಲಿ ಪೂಜೆ ನೆರವೇರಿಸುವ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ. ಅಂಬೇಡ್ಕರ್ ಪ್ರತಿಮೆಯು ಪಟ್ಟಣದಲ್ಲಿ ನಿರ್ಮಾಣ ಆಗುತ್ತಿರುವುದು ಸಂತೋಷದ ವಿಚಾರವೇ ಆದರೆ ಪ್ರತಿಮೆ ನಿರ್ಮಾಣಕ್ಕೆ ಡಾ. ಅಂಬೇಡ್ಕರ್ ಭವನದ ಹತ್ತಿರ ಜಾಗ ಗುರುತಿಸಿರುವುದು ಸರಿಯಾದ ನಿರ್ಧಾರವಲ್ಲ ಆದ್ದರಿಂದ ಬಾಬಾಸಾಹೇಬರ ಪ್ರತಿಮೆಯನ್ನು ತಾಲ್ಲೋಕು ಕಛೇರಿಯ ಆವರಣದಲ್ಲಿ ನಿರ್ಮಾಣ ಮಾಡುವುದು ಸೂಕ್ತವಾಗಿದೆ ಎಂದು ತಾಲ್ಲೋಕಿನ ದಲಿತ ಮುಖಂಡರಾದ ಅಗತಗೌಡನಹಳ್ಳಿ ಬಸವರಾಜು ರವರು ಅಭಿಪ್ರಾಯಪಟ್ಟರು. ಇಂದು ಗುಂಡ್ಲುಪೇಟೆಯ ಪ್ರವಾಸಿಮಂದಿರದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಅವರು ಬಾಬಾಸಾಹೇಬರ ಪ್ರತಿಮೆಯನ್ನು ನಿರ್ಮಿಸುವ ಒಳ್ಳೆಯ ಕೆಲಸ ಮಾಡುತ್ತಿದ್ದೀರ ಆದರೆ ಪಟ್ಟಣದ ಕೇಂದ್ರಭಾಗವಾದ ತಾಲ್ಲೋಕು ಕಛೇರಿಯ ಮುಂಭಾಗ ನಿರ್ಮಿಸಿ ಅವರಿಗೆ ಗೌರವ ಸಲ್ಲಿಸುವ ಕೆಲಸ ಮಾಡದೇ ಊರಾಚೆ ಜನ ಸಂಪರ್ಕವಿಲ್ಲದ ಕಡೆ ನಿರ್ಮಿಸಲು ಹೊರಟಿರೋದು ಸರಿಯಾದ ನಿರ್ಧಾರವಲ್ಲ. ಯಾರನ್ನೂ ವಿಶ್ವಾಸಕ್ಕೆ ತೆಗದುಕೊಳ್ಳದೇ ಅವರ ಅಭಿಪ್ರಾಯವನ್ನೂ ಕೇಳದೆ ಹೊರೆಯಾಲ ಗೋಪಾಲ್ ಮತ್ತು ಸ್ನೇಹಿತರು ಹೀಗೆ ಆತುರಾತುರವಾಗಿ ಗುದ್ದಲಿಪೂಜೆ ಮಾಡಲು ಹೊರಟಿರೋದು ಸರಿಯಲ್ಲ. ಶಾಸಕರು ದಲಿತ ಮುಖಂಡರ ಸಭೆ ಕರೆದು ಚರ್ಚಿಸಿ ಹೇಗೆ ನಗರದ ಜಿಲ್ಲಾಧಿಕಾರಿಗಳ ಕಛೇರಿ ಮುಂಭಾಗ ಅಂಬೇಡ್ಕರ್ ರವರ ಭವ್ಯವಾದ ಪ್ರತಿಮೆಯನ್ನು ನಿರ್ಮಿಸಲಾಗಿದಿಯೋ ಅದೇ ತರ ಗುಂಡ್ಲುಪೇಟೆಯಲ್ಲೂ ತಾಲ್ಲೋಕು ಕಛೇರಿಯ ಮುಂಭಾಗದಲ್ಲಿ ನಿರ್ಮಿಸಲು ಕ್ರಮವಹಿಸಬೇಕು ಎಂದು ಹೇಳಿದರು. ಮತ್ತೊಬ್ಬ ಯುವ ಮುಖಂಡರಾದ ಡಾ.ನವೀನ್ ಮೌರ್ಯರವರು ಮಾತನಾಡಿ ಪರಮಪೂಜ್ಯ ಬಾಬಾಸಾಹೇಬ್ ಡಾ. ಅಂಬೇಡ್ಕರ್ ರವರ ಪ್ರತಿಮೆ ನಿರ್ಮಾಣವಾಗುತ್ತಿರೋದು ಖುಷಿಯ ಸಂಗತಿಯೇ ಆದರೆ ಆಯ್ದುಕೊಂಡ ಸ್ಥಳ ಅಷ್ಟು ಸೂಕ್ತವಲ್ಲ ಕತ್ತಲಾದರೆ ಜನರ ಸುಳಿವೇ ಇಲ್ಲದೇ ಕೇವಲ ಕುಡುಕರ ಅಡ್ಡವಾಗಿರುವ ಊರಾಚೆ ನಿರ್ಮಾಣ ಆಗುವುದು ಬಾಬಾಸಾಹೇಬರಿಗೆ ಗೌರವ ಸಲ್ಲಿಸದಂತಾಗುವುದಿಲ್ಲ. ಅಲ್ಲಿ ಸೂಕ್ತವಾದ ರಕ್ಷಣೆಯೂ ಇಲ್ಲ ಹಾಗಾಗಿ ಇಂತಹ ಸ್ಥಳದಲ್ಲಿ ನಿರ್ಮಿಸಿದರೆ ಯಾರಾದರೂ ಕಿಡಿಗೇಡಿಗಳು ಪ್ರತಿಮೆಗೆ ಹಾನಿ ಮಾಡುವ ಸಂಭವವೇ ಹೆಚ್ಚು ಹಾಗೇನಾದರೂ ಆದರೆ ಆಗುವ ಪರಿಣಾಮಗಳಿಗೆ ಯಾರು ಹೊಣೆಯಾಗುತ್ತಾರೆ?? ಆದ್ದರಿಂದ ಜನರ ಸುಳಿವೆಯೇ ಇಲ್ಲದ ಕಡೆ ಪ್ರತಿಮೆ ನಿರ್ಮಿಸುವುದಕ್ಕಿಂತ ನಿತ್ಯ ಸಾವಿರಾರು ಜನರು ಬರುವಂತಹ ತಾಲ್ಲೋಕು ಕಛೇರಿ ಮುಂಬಾಗ ಪ್ರತಿಮೆ ನಿರ್ಮಿಸಿದರೆ ಬಾಬಾಸಾಹೇಬರಿಗೆ ಗೌರವ ಸಲ್ಲಿಸಿದಂತಾಗುತ್ತದೆ. ಈ ಬಗ್ಗೆ ಸಂಬಂಧಪಟ್ಟವರು ಕ್ರಮವಹಿಸಬೇಕು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಮುಖಂಡರುಗಳಾದ ಬುಹಜನ ಸಮಾಜಪಕ್ಷದ ಜಿಲ್ಲಾ ಉಪಾಧ್ಯಕ್ಷರಾದ ಕಿಲಗೆರೆ ಬಸವಣ್ಣ, ನಾಗುಸ್ವಾಮಿ, ಮಹೇಶ್ ಕಿರಣ್, ಬೇರಂಬಾಡಿ ಮಲ್ಲಿಕ್, ಶ್ಯಾನಾಡ್ರಹಳ್ಳಿ ರಾಜೇಂದ್ರ, ಕಬ್ಬಹಳ್ಳಿ ರೇವಣ್ಣ , ರಾಘವಾಪುರ ನವೀನ್, ಶಿವು ವೀರನಪುರ, ಹರೀಶ್ ರಾಘವಾಪುರ. ದೇವರಾಜ್ ಜೆ ಸ್ವಾಮಿ. ಬೆಳವಾಡಿ ಮಧು ರಾಜು ಚೌಡಹಳ್ಳಿ ಕುಮಾರ್. ನಂಜುಂಡ ಸ್ವಾಮಿ ಸೋಮು ಮುಂಟೀಪುರ ಮುಂತಾದವರು ಹಾಜರಿದ್ದರು.

### ಹುಬ್ಬಳ್ಳಿಯಲ್ಲಿ ಬಿಜೆಪಿ ಕಾರ್ಯಕರ್ತೆ ಮಹಿಳೆಯೊಬ್ಬರ ವಿವಸ್ತ್ರ ಪ್ರಕರಣ

# ಬಿಜೆಪಿ ಕೈವಾಡ: ಎಂ.ಲಕ್ಷ್ಮಣ್



ಮೈಸೂರು: ಹುಬ್ಬಳ್ಳಿಯಲ್ಲಿ ಬಿಜೆಪಿ ಕಾರ್ಯಕರ್ತೆ ಮಹಿಳೆಯೊಬ್ಬರು ವಿವಸ್ತ್ರಗೊಂಡು ಹೈ ಡ್ರಾಮ ಸೃಷ್ಟಿಸಿದ ಪ್ರಕರಣದ ಹಿಂದೆ ಬಿಜೆಪಿ ನಾಯಕರ ಕೈವಾಡವಿದೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆರೋಪಿಸಿದರು.

ನಗರದ ಕಾಂಗ್ರೆಸ್ ಕಚೇರಿಯಲ್ಲಿ ಗುರುವಾರ ಸುದ್ದಿಗೋಷ್ಠಿ ನಡೆಸಿದ ಅವರು, ಹುಬ್ಬಳ್ಳಿಯಲ್ಲಿ ತನ್ನ ಬಟ್ಟೆಯನ್ನು ತಾನೆ ಬಿಚ್ಚಿಕೊಂಡು ನಾಟಕವಾಡಿದ ಬಿಜೆಪಿ ಕಾರ್ಯಕರ್ತೆ ಸುಜಾತ ಹಂಡಿ ಮೇಲೆ ಹುಬ್ಬಳ್ಳಿಯ 9 ಪೊಲೀಸ್ ಠಾಣೆಗಳಲ್ಲಿ ಕೊಲೆ, ಹನಿ ಟ್ರಾಪ್, ಬೆದರಿಕೆ, ಮೋಸ ಸೇರಿದಂತೆ 47 ಪ್ರಕರಣಗಳು ದಾಖಲಾಗಿವೆ. ಈಕೆ ಮೇಲೆ ರೌಡಿ ಶೀಟ್ ತೆರೆಯಲಾಗಿದೆ. ಈಕೆ ಒಬ್ಬ ಕ್ರಿಮಿನಲ್ ಹಿನ್ನ ಲೆಯುಳ್ಳ ಮಹಿಳೆ. ಈ ಘಟನೆಯ ಹಿಂದೆ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಕೈವಾಡ ಇದೆ ಎಂದು ಹೇಳಿದರು.

ಓಟ್ ಚೋರಿ ಅಭಿಯಾನ ನಡೆಯುತ್ತಿದ್ದ ವೇಳೆ ಸುಜಾತಾ ಹಂಡಿ ಎಂಬ ಮಹಿಳೆ ಅಧಿಕಾರಿಗಳೊಟ್ಟಿಗೆ ಹೋಗಿ ಮತದಾರರ ಪಟ್ಟಿಯಿಂದ ಕೆಲವರನ್ನು ತೆಗೆಸುವ ಜೆಲಸ ಮಾಡುತ್ತಿದ್ದಳು. ಇದನ್ನು ಅಲ್ಲಿನ ಕಾಂಗ್ರೆಸ್ ಕಾರ್ಪೋರೇಟರ್ ಪ್ರಶ್ನಿಸಿದ್ದಕ್ಕೆ ಅವರ ಮೇಲೆಯೇ ತನ್ನ ಬೆಂಬಲಿಗರನ್ನು ಕಟ್ಟಿಕೊಂಡು ಹಲ್ಲೆ ನಡೆಸಿದ್ದಾಳೆ. ಈ ವೇಳೆ ಪ್ರಕರಣ ದಾಖಲಿಸಿಕೊಂಡ ಪೊಲೀಸರು ಆಕೆಯ ಮನೆಗೆ 17 ಬಾರಿ ಹೋಗಿ ಪೊಲೀಸ್ ಠಾಣೆಗೆ ಬರುವಂತೆ ಕರೆದಿದ್ದಾರೆ. ಆದರೂ ಆಕೆ ಬಂದಿಲ್ಲ. ನಂತರ ಈಕೆ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಅವರನ್ನು ಭೇಟಿ ಮಾಡಿದ್ದಾಳೆ. ಅವರ ಸೂಚನೆಯಂತೆ ಪೊಲೀಸರು ಈಕೆಯನ್ನು ಬಂಧಿಸಲು ಮನೆಗೆ ಹೋದ ಸಂದ ರ್ಭದಲ್ಲಿ ತನ್ನ ಬಟ್ಟೆಯನ್ನು ತಾನೆ ಬಿಚ್ಚುಕೊಂಡು ನಾಟಕವಾಡಿ ಹೈ ಡ್ರಾಮಾ ಸೃಷ್ಟಿಸಿ ಪೊಲೀಸರ ಮೇಲೆ ಆರೋಪಿಸುತ್ತಿದ್ದಾಳೆ ಎಂದು ಹೇಳಿದರು.

ಈಕೆ ತನ್ನ ತಮ್ಮನ ಕೈಯಲ್ಲಿ ತನ್ನ ವೀಡಿಯೋ ಮಾಡಿಸಿಕೊಂಡು ವೈರಲ್ ಮಾಡಿದ್ದಾಳೆ. ಬಿಜೆಪಿ ಎಂದರೆ ಕ್ರಿಮಿನಲ್ ಪಕ್ಷ, ತಮ್ಮ ಕ್ರಿಮಿನಲ್ ಬುದ್ಧಿಯಿಂದಲೇ ಇಂತಹ ಮಹಿಳಾಮಣಿಗಳನ್ನು ಪಕ್ಷದಲ್ಲಿಟ್ಟುಕೊಂಡಿದೆ. ಇಂತಹ ನಾಟಕ ಮಾಡಿಸಿ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಮುಂದಾಗಿರುವ ಬಿಜೆಪಿ ನಾಯಕತಿಗೆ ನಾಚಿಕೆಯಾಗಬೇಕು ಎಂದು ವಾಗ್ದಾಳಿ ನಡೆಸಿದರು.

ಈಕೆಯ ಎಲ್ಲಾ ನಡವಳಿಕೆಗಳ ಬಗ್ಗೆ ಪೊಲೀಸರ ಬಳಿ ದಾಖಲೆ ಇದೆ. ಇವರ ನಾಟಕ ಬಯಲಾಗಲಿದೆ. ನಮ್ಮ ಪಕ್ಷ ಅಧಿಕಾರದಲ್ಲಿದ್ದರೂ ಓಟ್ ಚೋರಿ ಮಾಡಲು ಬಿಜೆಪಿ ಕಾರ್ಯಕರ್ತರು ಪ್ರಯತ್ನಿಸಿರುವುದನ್ನು ನೋಡಿದರೆ ನಮಗೆ ಬೇಸರ ವಾಗುತ್ತದೆ ಎಂದು ಸರ್ಕಾರದ ವಿರುದ್ಧ ಅಸಮಧಾನ ವ್ಯಕ್ತಪಡಿಸಿದರು.

ಬಳ್ಳಾರಿ ಘಟನೆ ಹಿಂದೆ ವಿ.ಸೋಮಣ್ಣ: ಬಳ್ಳಾರಿಗೆ ಕೇಂದ್ರ ಸಚಿವ ವಿ.ಸೋಮಣ್ಣ ಭೇಟಿ ನೀಡಿ ಬಂದ ನಂತರ ಬಳ್ಳಾರಿಯಲ್ಲಿ ಗಲಾಟೆ ಪ್ರಾರಂಭ ಆಗಿದೆ. ಹಾಗಾಗಿ ವಿ.ಸೋಮಣ್ಣ ಅವರಿಗೆ ಬ್ರೈನ್ ಮ್ಯಾಪಿಂಗ್ ಮಾಡಬೇಕೆಂದು ಒತ್ತಾಯಿಸಿದರು.

ಕೇಂದ್ರದ ಗೃಹ ಸಚಿವ ಅಮಿತ್ ಶಾ ವಿ.ಸೋಮಣ್ಣಗೆ ರಾಜ್ಯದಲ್ಲಿ ನೀವು ಸುಮ್ಮನಿದ್ದರೆ ಆಗಲ್ಲ. ಹೆಣಗಳು ಉರಳಬೇಕು, ಆ ರೀತಿಯ ವಾತಾವರಣ ಸೃಷ್ಟಿ ಮಾಡಬೇಕೆಂದಿದ್ದಾರೆ. ಅವರ ಸೂಚನೆಯಂತೆ ಬಳ್ಳಾರಿಗೆ ಬಂದ ವಿ.ಸೋಮಣ್ಣ, ಜನಾರ್ಧನ ರೆಡ್ಡಿ, ಶ್ರೀರಾಮುಲುರನ್ನು ಭೇಟಿ ಮಾಡಿ ಅಮಿತ್ ಶಾ ಸೂಚನೆಯಂತೆ ನಡೆದುಕೊಳ್ಳಿ ಎಂದು ಹೇಳಿದ್ದಾರೆ. ನಂತರ ಬಳ್ಳಾರಿಯಲ್ಲಿ ಗಲಾಟೆ ಆಗಿದೆ. ಇದರ ಸತ್ಯಾ ಸತ್ಯತೆ ಬಯಲಾಗಬೇಕು ಎಂದರೆ ವಿ.ಸೋಮಣ್ಣ ಅವರನ್ನು ಬ್ರೈನ್ ಮ್ಯಾಪಿಂಗ್ ಮಾಡಬೇಕು ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಗ್ರಾಮಾಂತರ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಕಾಂಗ್ರೆಸ್ ಮುಖಂಡರಾದ ಬಿ.ಎಂ.ರಾಮು, ಗಿರೀಶ್, ಹೇಮಂತ್ , ಮಾಧ್ಯಮ ವಕ್ತಾರ ಮಹೇಶ್ ಉಪಸ್ಥಿತರಿದ್ದರು.

## ಸುಳ್ಳು ಹೇಳುವುದರಲ್ಲಿ ಎಚ್‌ಡಿಕೆ ಪಿ.ಎಚ್.ಡಿ

ಮೈಸೂರು: ಬಿಜೆಪಿಯವರು ಸುಳ್ಳು ಹೇಳುವುದರಲ್ಲಿ 3–4 ಪಿ.ಎಚ್.ಡಿ ಮಾಡಿದ್ದರೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ 5–6 ಪಿ.ಎಚ್.ಡಿ. ಮಾಡಿದ್ದಾರೆ ಎಂದು ಎಂ.ಲಕ್ಷ್ಮಣ್ ವಾಗ್ದಾಳಿ ನಡೆಸಿದರು.

ಬಳ್ಳಾರಿ ಘಟನೆ ಕುರಿತು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹತಾಶರಾಗಿ ಮಾತನಾಡುತ್ತಿದ್ದಾರೆ. ಅವರು ನಾಮಕಾವಸ್ಥೆಗೆ ಸಚಿವರಾಗಿದ್ದಾರೆ. ಅವರು ಇದೂವರೆಗೆ ಒಂದೇ ಒಂದು ಯೋಜನೆ ತರಲು ಆಗಿಲ್ಲ, ಮಾಡಲು ಕೆಲಸವಿಲ್ಲದೆ ಏನೇನೋ ಹೇಳಿಕೆ ನೀಡುತ್ತಿದ್ದಾರೆ ಎಂದು ಎಂ.ಲಕ್ಷ್ಮಣ್ ಹರಿಹಾಯ್ದರು. ಎರಡು ಬಾರಿ ಪೋಸ್ಟ್ ಮಾರ್ಟಮ್ ಮಾಡಿದ್ದಾರೆ ಎಂದು ಕುಮಾರಸ್ವಾಮಿ ಆರೋಪಿಸಿದ್ದಾರೆ.ಎರಡು ಬಾರಿ ಪೋಸ್ಟ್ ಮಾರ್ಟಮ್ ಮಾಡುವುದೇ ಇಲ್ಲವೆ? ಊತಿರುವ ಹೆಣ ತೆಗದು ಪೋಸ್ಟ್ ಮಾರ್ಟಮ್ ಮಾಡುವುದಿಲ್ಲವೇ? ಸುಮ್ಮನೆ ಇಲ್ಲದ ಸುಳ್ಳುಗಳನ್ನು ಹೇಳಬಾರದು ಎಂದು ಹೇಳಿದರು.

ಎರಡು ವರ್ಷದ ಕಾಂಗ್ರೆಸ್ ಆಡಳಿತದಲ್ಲಿ 2800 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಕುಮಾರಸ್ವಾಮಿ ಹೇಳಿದ್ದಾರೆ. ರೈತರ ಆತ್ಮಹತ್ಯೆ ನಡೆಯಬಾರದು, ಬಿಜೆಪಿ ಮತ್ತು ಜೆಡಿಎಸ್ ಆಡಳಿತದ 2018 ರಿಂದ 2023 ರ ಆಡಳಿತದಲ್ಲಿ ಎನ್.ಸಿ.ಆರ್.ಬಿ ಪ್ರಕಾರ 5341 ರೈತರು ಆತ್ಮಹತ್ಯೆ ಮಾಡಿಕೊಂಡಿರಲಿಲ್ಲವೆ ಎಂದು ತಿರುಗೇಟು ನೀಡಿದರು.

## ಯದುವೀರ್ ಶ್ವೇತಪತ್ರ ಹೊರಡಿಸುವಂತೆ ಒತ್ತಾಯ

ಮೈಸೂರು: ಅರಸು ದಾಖಲೆ ಮುರಿದ ಸಿದ್ದರಾಮಯ್ಯ ಅವರ ಸಾಧನೆ ಶೂನ್ಯ ಎಂದಿರುವ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ 20 ತಿಂಗಳಲ್ಲಿ ಎಷ್ಟು ಹಣ ತಂದಿದ್ದಾರೆ ಎಂಬ ಶ್ವೇತಪತ್ರ ಹೊರಡಿಸುವಂತೆ ಎಂ.ಲಕ್ಷ್ಮಣ್ ಒತ್ತಾಯಿ ಸಿದರು.

ಯೂನಿಟಿ ಮಾಲ್ ಗೆ ತಡೆ ತಂದಿದ್ದೀರ. ಆಗ ಬೇಕಾದ ಯೋಜನೆಗೆ ತಡೆ ನೀಡುತ್ತಿದ್ದೀರ. ನೀವೇ ಶಂಕುಸ್ಥಾಪನೆ ಮಾಡಿ ಆ ಯೋಜನೆ ಮುಗಿಸಲು ನೀವೇ ಕಲ್ಲು ಹಾಕಿದ್ದೀರಿ. ಸಿದ್ದರಾಮಯ್ಯ ಅವರು ಸೆಪ್ಟೆಂಬರ್‌ನಿಂದ ಇಲ್ಲಿವರೆಗೆ ಮೈಸೂರು ನಗರಕ್ಕೆ 3097 ಕೋಟಿ ಮೈಸೂರು ನಗರ ಅಭಿವೃದ್ಧಿ ಕೊಟ್ಟರೆ, ಮೈಸೂರು ಜಿಲ್ಲೆ ಅಭಿವೃದ್ಧಿಗೆ 3 ಸಾವಿರ ಕೋಟಿ ಕೊಟ್ಟಿದ್ದಾರೆ. ಮೈಸೂರು ವಿಮಾನ ನಿಲ್ದಾಣಕ್ಕೆ 300 ಕೋಟಿ ಕೊಟ್ಟಿದ್ದಾರೆ. ಪ್ರತಾಪ್ ಸಿಂಹ ಅತಿವೇಗದ ಸುಳ್ಳುಗಾರ ಈಗ ಸುಳ್ಳು ಹೇಳುವುದನ್ನು ಯದುವೀರ್ ಅವರು ಮೈಗೂಡಿಸಿಕೊಳ್ಳುತ್ತಿದ್ದಾರೆ.ಎಂದು ಟೀಕಿಸಿದರು.

ಹುಣಸೂರಿನಲ್ಲಿ ತಂಬಾಕಿಗೆ 250 ರೂಪಾಯಿ, ಆಂಧ್ರಪ್ರದೇಶದಲ್ಲಿ 450 ರೂಪಾಯಿ ಕೊಡುತ್ತಿದ್ದಾರೆ. ಕಾರ್ಖಾನೆ ಮತ್ತು ಕಂಪನಿಗಳು ರೈತರಿಗೆ ಮೋಸ ಮಾಡುತ್ತಿದ್ದಾರೆ. ಗಾಂಧಿ ಕಂಡರೆ ಆಗಲ್ಲ, ಗೋಡ್ಸೆ ಸಂಸ್ಕೃತಿಯವರು. ನರೇಗಾ ಕೊಂದರು. ಈ ಯೋಜನೆಯಿಂದ 1.6 ಕೋಟಿ ಜನರಿಗೆ ಕೆಲಸ ಸಿಗುತ್ತಿತ್ತು. ಈ ಯೋಜನೆ ಸಂಪೂರ್ಣ ಮುಗಿಸಿ ಬಿಡುತ್ತಿದ್ದಾರೆ. ಯುಪಿಎ ಸರ್ಕಾರದ 27 ಯೋಜನೆ ಬದಲಾಯಿಸಿದ್ದಾರೆ ಎಂದು ವಿವರಿಸಿದರು.

# ಸಂಸ್ಕೃತಿ, ಸಂಸ್ಕಾರದಿಂದ ಸುಶಿಕ್ಷಿತ ಸಮಾಜ ಸೃಷ್ಟಿ: ಬಿ.ದಿನೇಶ್




ಮೈಸೂರು : ಶಿಕ್ಷಣದೊಂದಿಗೆ ಉತ್ತಮ ಸಂಸ್ಕೃತಿ, ಸಂಸ್ಕಾರದಿಂದ ಮಾತ್ರ ಸುಶಿಕ್ಷಿತ ಸಮಾಜ ಸೃಷ್ಟಿಸಲು ಸಾಧ್ಯವೆಂದು ಶ್ರೀ ಜಯದೇವ ಹೃದ್ರೋಗ ಮತ್ತು ವಿಜ್ಞಾನ ಸಂಶೋಧನಾ ಸಂಸ್ಥೆ ನಿರ್ದೇಶಕ ಬಿ. ದಿನೇಶ್ ಅಭಿಪ್ರಾಯಪಟ್ಟರು

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಯ ವತಿಯಿಂದ ಗುರುವಾರ ವಿವಿಯ ಕಾವೇರಿ ಸಭಾಂಗಣದಲ್ಲಿ ರಾಷ್ಟ್ರೀಯ ಐಕ್ಯತಾ ಸಪ್ತಾಹ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಸಾಂಸ್ಕೃತಿಕ ಏಕತಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು. ನಮ್ಮ ದೇಶದಲ್ಲಿ ನಾನಾ ಭಾಷೆ, ಆಚಾರ, ವಿಚಾರ, ಸಂಸ್ಕೃತಿ ಇದ್ದರೂ ಈ ಎಲ್ಲಾ ವೈವಿಧ್ಯತೆಗಳ ನಡುವೆ ಏಕತೆ ಸಾಧ್ಯವಾಗಿದೆ. ಇದಕ್ಕೆ ನಮ್ಮ ನಾಡಿನ ಶೈಕ್ಷಣಿಕ ವ್ಯವಸ್ಥೆ, ಸಂಸ್ಕೃತಿ, ಆಚಾರ ವಿಚಾರಗಳಿಗಿರುವ ಭದ್ರ ಬುನಾದಿಯೇ ಕಾರಣವಾಗಿದೆ ಎಂದರು. ನಾನು 48 ವರ್ಷಗಳ ಕಾಲ ಅವಿಭಕ್ತ ಕುಟುಂಭದಲ್ಲಿ ಬೆಳೆದು ಬಂದವನು. ಇಲ್ಲಿಂದ ಒಳ್ಳೆಯ ವ್ಯಕ್ತಿತ್ವ ರೂಪುಗೊಂಡಿರುವುದನ್ನು ಕಂಡಿದ್ದೇನೆ. ಈ ವ್ಯವಸ್ಥೆಯು ಪರಸ್ಪರ ಹೊಂದಾಣಿಕೆ, ಎಲ್ಲರೂ ನಮ್ಮವರೇ, ನಾವೆಲ್ಲರೂ ಒಂದು ಎಂದು ಬಾಳುವ ಸಹ ಬಾಳ್ವೆಯ ತೋಟವೇ ಆಗಿತ್ತು. ಇದು ನಮ್ಮ ಸಂಸ್ಕೃತಿಯ ಹಿರಿಮೆ ಯಾಗಿದೆ. ಆದರೆ ಇತ್ತೀಚೆಗಿನ ಸಮಾಜ ದಲ್ಲಿ ಈ ರೀತಿಯ ವ್ಯವಸ್ಥೆಗಳ ಕೊರತೆ ಕಾಣುತ್ತಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದರು.ಈಗಿನ ಸಮಾಜದಲ್ಲಿ ಭಾಷೆ, ಧರ್ಮ, ವರ್ಗ ಬೇಧಗಳು ಕಾಣುತ್ತಿದ್ದೇವೆ. ಶಿಕ್ಷಿತರಲ್ಲಿಯೇ ಈ ರೀತಿಯ ಆಚರಣೆ ಹೆಚ್ಚಾಗಿರುವುದು ಆತಂಕಕಾರಿಯಾಗಿದೆ ಎಂದರು ಎಲ್ಲಾ ಕಾಯಿಲೆಗಳಿಗೂ ಒತ್ತಡವೇ ಮೂಲವಾಗಿದೆ. ಹಾಗಾಗಿ ವ್ಯಕ್ತಿಗೆ ಸಮಚಿತ್ತತೆ ಬೇಕಿದೆ. ಅಲ್ಲದೇ ಆಹಾರ ಕ್ರಮದ ಬಗ್ಗೆ ಹೆಚ್ಚು ತಲೆ ಬಿಸಿ ಮಾಡಿಕೊಳ್ಳದೇ ಚಿಕ್ಕವಯಸ್ಸಿನಿಂದ ನಮ್ಮ ಮನೆಯಲ್ಲಿ ಯಾವ ಆಹಾರ ಪದ್ಧತಿಯನ್ನು ಅನುಸರಿಸಿಕೊಂಡು ಬರಲಾಗಿದೆ. ಅದೇ ಕ್ರಮವನ್ನು ಮುಂದುವರಿಸಬೇಕು. ಏಕೆಂದರೆ ನಮ್ಮಲ್ಲಿರುವ ಜೀನ್‌ಗಳು ನಾವು ಹುಟ್ಟಿ ಬೆಳೆದ ಪರಿಸರದಲ್ಲಿ ಬೆಳೆಯುವ ಆಹಾರ ಪದಾರ್ಥಗಳ ಬಳಕೆಗೆ ಹೊಂದಿಕೊಳ್ಳುವ ಗುಣ ಹೊಂದಿರುತ್ತದೆ ಎಂದರು. ಕರಾಮುವಿವಿ ಕುಲಪತಿ ಶರಣಪ್ಪ ವಿ. ಹಲಸೆ, ಕುಲಸಚಿವ ಪ್ರೊ.ಎಸ್.ಕೆ. ನವೀನ್‌ಕುಮಾರ್, ಸಂಯೋಜನಾಧಿಕಾರಿಗಳಾದ ಡಾ.ಟಿ.ಪಿ.ಶಶಿಕುಮಾರ್, ಡಾ.ಕೆ.ಎಸ್. ವೀರೇಂದ್ರಕುಮಾರ್, ಶೈಕ್ಷಣಿಕ ಡೀನ್ ಪ್ರೊ.ಎಂ. ರಾಮನಾಥಂ ನಾಯುಡು ಹಾಗೂ ಇತರರು ಇದ್ದರು.

## ಮಾರ್ಚ್ ತಿಂಗಳಲಿ ಶಿಬಿರ :

**ಕರಾಮುವಿವಿಯೊಂದಿಗೆ ಒಡಂಬಡಿಕೆ ಮಾಡಿಕೊಂಡು ಇಲ್ಲಿನ ನೌಕರರಿಗೆ ಉಚಿತ ಹೃದ್ರೋಗ ತಪಾಸಣೆ, ವಾರ್ಷಿಕ ಶಿಬಿರ ಮಾಡಲು ಕ್ರಮವಹಿಸಲಾಗುವುದು. ತೀರಾ ಅಸಾಹಾಯಕ ಸ್ಥಿತಿಯಲ್ಲಿರುವ ಸಿಬ್ಬಂದಿಗಳಿಗೆ ಉಚಿತವಾಗಿ ಚಿಕಿತ್ಸೆ ಕೊಡಿಸಲು ಪ್ರಯತ್ನಿಸಲಾಗುವುದು. ಮುಂಬರುವ ಮಾರ್ಚ್ ತಿಂಗಳಲ್ಲಿ ಸಿಬ್ಬಂದಿಗಳಿಗೆ ಉಚಿತ ತಪಾಸಣೆ ಶಿಬಿರ ಆಯೋಜಿಸಲಾಗುವುದು ಎಂದು ತಿಳಿಸಿದರು.**

**ಮೊದಲ ಪುಟದಿಂದ**

## ಮಹಿಳಾ ಆಯೋಗ ಎಂಟ್ರಿ

ಇಲಾಖಾತ್ಮಕ ಮತ್ತು ಕ್ರಿಮಿನಲ್ ಕ್ರಮ ಕೈಗೊಳ್ಳಿ. ಸಂತ್ರಸ್ತ ಮಹಿಳೆಗೆ ಕಾನೂನು ಪ್ರಕಾರ ವೈದ್ಯಕೀಯ ನೆರವು, ಮಾನಸಿಕ ಬೆಂಬಲ, ಪುನರ್ವಸತಿ ಮತ್ತು ಪರಿಹಾರ ಒದಗಿಸಿ ಎಂದು ಸೂಚಿಸಿದ್ದು, ಹೀಗೆ ಕ್ರಮ ಕೈಗೊಂಡ ಬಗ್ಗೆ ವಿವರವಾದ ಮಾಹಿತಿಯನ್ನು 5 ದಿನಗಳೊಳಗೆ ಸಲ್ಲಿಸುವಂತೆ ಆಯೋಗ ಸೂಚಿಸಿದೆ. ಹುಬ್ಬಳ್ಳಿ ಕೇಶ್ವಾಪುರ ಪೊಲೀಸ್ ಠಾಣೆಯ ಪೊಲೀಸರ ವಿರುದ್ಧ ಮಹಿಳೆಯೊಬ್ಬರನ್ನು ವಿವಸ್ತ್ರಗೊಳಿಸಿ ಹಲ್ಲೆ ನಡೆಸಿದ್ದಾರೆ ಎಂಬ ಗಂಭೀರ ಆರೋಪವಿದೆ. ಮಹಿಳೆಯನ್ನು ಅರೆಬೆತ್ತಲೆಯ ಸ್ಥಿತಿಯಲ್ಲಿ ಪೊಲೀಸ್ ವಾಹನದೊಳಗೆ ಎಳೆದೊಯ್ಯುತ್ತಿರುವ ವೀಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆದ ಬೆನ್ನಲ್ಲೇ ರಾಷ್ಟ್ರೀಯ ಮಹಿಳಾ ಆಯೋಗ ಮಧ್ಯಪ್ರವೇಶಿಸಿದೆ.

## ಕೋಗಿಲು: 26 ಮಂದಿ ಅರ್ಹರು

ಒಂದಕ್ಕಿಂತ ಹೆಚ್ಚಿನ ಅರ್ಜಿ ಸಲ್ಲಿಸಿದ್ದಲ್ಲಿ ರೇಷನ್ ಕಾರ್ಡ್ ಪರಿಗಣನೆ. ವೋಟರ್ ಐಡಿ, ರೇಷನ್ ಕಾರ್ಡ್, ಮಕ್ಕಳ ಶಾಲಾ ದಾಖಲಾತಿ ಪತ್ರ ಪರಿಗಣನೆ.

## ಬಾಯ್ಲರ್ ಸ್ಫೋಟ: 7 ಮಂದಿ ಸಾವು

ಅವರು ನೋವಿನಿಂದ ಕಿರುಚುತ್ತಿದ್ದರು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಸಹೋದ್ಯೋಗಿಗಳು ತಕ್ಷಣ ಆಡಳಿತ ಮಂಡಳಿಗೆ ಮಾಹಿತಿ ನೀಡಿದ್ದಾರೆ. ಆಂಬ್ಯುಲೆನ್ಸ್ ವ್ಯವಸ್ಥೆ ಮಾಡಿ ಗಾಯಾಳುಗಳನ್ನು ಹತ್ತಿರದ ಆಸ್ಪತ್ರೆಗೆ ಸಾಗಿಸಲಾಗಿದೆ. ಆಸ್ಪತ್ರೆಗೆ ಸಾಗಿಸುವ ದಾರಿಯಲ್ಲಿಯೇ ಮೂವರು ಕಾರ್ಮಿಕರು ಮೃತಪಟ್ಟಿದ್ದರು.

ಆಸ್ಪತ್ರೆಗೆ ದಾಖಲಾಗಿದ್ದ ಕಾರ್ಮಿಕರಿಗೆ ಗಂಭೀರ ಸುಟ್ಟಗಾಯಗಳಾಗಿದ್ದು, ಆರಂಭದಲ್ಲಿ ಸ್ಥಳೀಯವಾಗಿ ಚಿಕಿತ್ಸೆ ನೀಡಿ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಬೆಳಗಾವಿಯ ಖಾಸಗಿ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಸುರಕ್ಷತಾ ಮುನ್ನೆಚ್ಚರಿಕೆಗಳ ಹೊರತಾಗಿಯೂ ಬಿಸಿನೀರು ಹೇಗೆ ಸೋರಿಕೆಯಾಯಿತು ಎಂಬುದನ್ನು ಕಂಡುಹಿಡಿಯಲು ತನಿಖೆ ನಡೆಯುತ್ತಿದೆ. ಮುರ್ಗೋಡ್ ಪೊಲೀಸ್ ಠಾಣೆಯ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

## ಕಾನೂನು ಹೋರಾಟ

**ಮಾಡಿದ ಹುಬ್ಬಳ್ಳಿಯಲ್ಲಿ ಮಹಿಳೆ ವಿವಸ್ತ್ರ ಪ್ರಕರಣದ ಬಗ್ಗೆ ಗಂಭೀರ ಚರ್ಚೆ ನಡೆಯಿತು. ಕ್ಯಾಬಿನೆಟ್‌ನಲ್ಲಿ ಸಿಎಂ, ಡಿಸಿಎಂ, ಸಚಿವರಿಗೆ ಘಟನೆ ಬಗ್ಗೆ ಗೃಹ ಸಚಿವ ಪರಮೇಶ್ವರ್ ಸಂಪೂರ್ಣ ವರದಿ ನೀಡಿದರು ಎನ್ನಲಾಗಿದೆ.**

## ಕಾಂಗ್ರೆಸ್ ವ್ಯಕ್ತಿಗಾಗಿ ಅಲ್ಲ

ಎಲ್ಲರಿಗೂ ಒಂದೇ ಬಾರಿಗೆ ಅವಕಾಶಗಳು ಸಿಗುವುದಿಲ್ಲ. ನಾವು ಈಗಾಗಲೇ ಮಂಡಳಿಗಳು ಮತ್ತು ನಿಗಮಗಳಿಗೆ ಅಧ್ಯಕ್ಷರನ್ನು ನೇಮಿಸಿದ್ದೇವೆ. ನಿರ್ದೇಶಕರ ನೇಮಕಾತಿ ಬಾಕಿ ಇದೆ. ಶೇಕಡಾ 85ರಷ್ಟು ಪ್ರಕ್ರಿಯೆ ಮುಗಿದಿದ್ದರೂ, ಉಳಿ ದವು ಇದೆ ಎಂದು ಹೇಳಿದರು.

ಪ್ರಿಯಾಂಕ್ ಖರ್ಗೆ ತಮ್ಮ ತಂದೆ, ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಉದಾಹರಣೆಯನ್ನು ಉಲ್ಲೇಖಿಸಿದರು. ರಾಜಕೀಯದಲ್ಲಿ ತಾಳ್ಮೆ ಇರಬೇಕು. ಕಠಿಣ ಪರಿಶ್ರಮ ಮತ್ತು ತಾಳ್ಮೆಗೆ ಖರ್ಗೆಯವರಿಗಿಂತ ದೊಡ್ಡ ಉದಾಹರಣೆ ಇನ್ನೊಬ್ಬರಿಲ್ಲ ಎಂದರು.

**ಸಿ.ಎನ್.ಮಂಜೇಗೌಡ ಕರೆ**

# ಕ್ರೀಡೆ ಆರೋಗ್ಯ ಹೆಚ್ಚಿಸುವ ಕ್ಷೇತ್ರ



ಮೈಸೂರು: ಕ್ರೀಡೆಯಲ್ಲಿ ಭಾಗವಹಿಸುವುದರಿಂದ ಶರೀರದ ಶಕ್ತಿ ಹೆಚ್ಚಾಗುತ್ತದೆ. ಎಲ್ಲಾ ಅಂಗಗಳಿಗೂ ಆಮ್ಲಜನಕ ಸಿಗುವುದರ ಜೊತೆಗೆ ಆರೋಗ್ಯವು ಉತ್ತಮವಾಗಿ ಇರುತ್ತದೆ. ಕ್ರೀಡೆ ಎಂಬುದು ಶ್ರೇಷ್ಠವಾದ ಕ್ಷೇತ್ರವಾಗಿದೆ ಎಂದು ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಹೇಳಿದರು.

ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದ್ದ 2025–26 ನೇ ಸಾಲಿನ ಜಿಲ್ಲಾ ಮಟ್ಟದ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳನ್ನು ದೀಪ ಬೆಳಗುವುದರ ಮೂಲಕ ಉದ್ಘಾಟಿಸಿ ಮಾತನಾಡಿದರು.

ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಅಧಿಕಾರಿಗಳು ಕಾರ್ಯ ಕ್ಷಮತೆಯನ್ನು ಹೆಚ್ಚಿಸುವ ಸಲುವಾಗಿ ಸರ್ಕಾರಿ ನೌಕರರ ಕ್ರೀಡೆಯನ್ನು ಆಯೋಜಿಸಲಾಗಿದ್ದು, ಎಲ್ಲಾ ಅಧಿಕಾರಿಗಳು ಕ್ರೀಡೆಯಲ್ಲಿ ಭಾಗವಹಿಸಬೇಕು. ಎಂದು ಹೇಳಿದರು.

ಜಿಲ್ಲಾಧಿಕಾರಿಗಳಾದ ಜಿ. ಲಕ್ಷ್ಮಿಕಾಂತ್ ರೆಡ್ಡಿ ಮಾತನಾಡಿ, ಪ್ರತಿಯೊಬ್ಬ ಅಧಿಕಾರಿಗಳು ಕ್ರೀಡೆಯಲ್ಲಿ ಭಾಗವಹಿಸುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು, ಕ್ರೀಡಾ ಮನೋಭಾವವನ್ನು ಬೆಳೆಸಿಕೊಂಡರೆ ಮನಸ್ಸಿಗೂ ದೇಹಕ್ಕೂ ನೆಮ್ಮದಿ ದೊರೆಯುತ್ತದೆ. ನೌಕರರು ಅನುಭವಿಸುವ ಮಾನಸಿಕ ಒತ್ತಡವನ್ನು ಕಡಿಮೆ ಮಾಡುತ್ತದೆ. ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಡಾ.ಸಿ.ಬಿ.ಅರುಣ ಕುಮಾರ, ಜಿಲ್ಲಾ ಪಂಚಾಯತ್ ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಸ್.ಯುಕೇಶ್ ಕುಮಾರ್, ರಾಜ್ಯ ಉಪಾಧ್ಯಕ್ಷ ಜೆ.ಗೋವಿಂದರಾಜು, ರಾಜ್ಯ ಕಾರ್ಯದರ್ಶಿ ಎಂ.ಕೆ.ಗಣೇಶ್, ರಾಜ್ಯ ಪರಿಷತ್ ನ ಸದಸ್ಯ ಹಾಗೂ ರಾಜ್ಯ ಜಂಟಿ ಕಾರ್ಯದರ್ಶಿ ಡಿ.ಮಾಲೇಗೌಡ, ವಿಭಾಗೀಯ ಉಪಾಧ್ಯಕ್ಷ ಮಾಲಂಗಿ ಸುರೇಶ್, ರಾಜ್ಯ ಕಾರ್ಯದರ್ಶಿ ಜಯಪ್ಪ, ರಾಜ್ಯ ಸಂಘಟನಾ ಕಾರ್ಯದರ್ಶಿ ಮಹಾದೇವ, ರಾಜ್ಯ ಪರಿಷತ್ ನ ಸದಸ್ಯ ಎಸ್.ರಘು, ರೇವಣ್ಣ ಸೇರಿ ಮತ್ತಿತರರು ಉಪಸ್ಥಿತರಿದ್ದರು.

# ತೆರಿಗೆ ವಸೂಲಿ ಹೆಚ್ಚಿಸಿ, ಅನುದಾನ ತನ್ನಿ

## ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ ಹೇಳಿಕೆ | ಪಾಲಿಕೆ ಬಜೆಟ್ ಪೂರ್ವಭಾವಿ ಸಭೆ

ಮೈಸೂರು: ಇಲ್ಲಿನ ಮಹಾನಗರಪಾಲಿಕೆಯು ವರಮಾನ ಹೆಚ್ಚಿಸಿಕೊಳ್ಳಲು ಹಾಗೂ ಸಾರ್ವಜನಿಕರಿಗೆ ಮೂಲಸೌಲಭ್ಯ ಕಲ್ಪಿಸಲು ಕೈಗೊಳ್ಳಬಹುದಾದ ಹಲವು ಸಲಹೆಗಳನ್ನು ಮಾಜಿ ಮೇಯರ್‌ಗಳು, ಉಪಮೇಯರ್‌ಗಳು ಮತ್ತು ವಿವಿಧ ಕ್ಷೇತ್ರದ ಗಣ್ಯರು ನೀಡಿದರು.



2026?27ನೇ ಬಜೆಟ್ ಸಂಬಂಧ ಪಾಲಿಕೆಯ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ ಬುಧವಾರ ನಡೆದ ಸಮಾಲೋಚನಾ ಸಭೆಯಲ್ಲಿ ಮಾತನಾಡಿದ ಗಣ್ಯರು ಮಾರ್ಗದರ್ಶನ ಮಾಡಿದರು. ನಿರ್ಲಕ್ಷ್ಯ ವಹಿಸುತ್ತಿರುವುದೆಲ್ಲಿ ಎಂಬ ಅಂಶಗಳನ್ನೂ ತಿಳಿಸಿ ಕಿವಿಹಿಂಡಿದರು. ಆಡಳಿತ ಬಿಗಿಗೊಳಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವಂತೆ ಕೋರಿದರು. ಆಡಳಿತಾಧಿಕಾರಿಯೂ ಆಗಿರುವ ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್ ಮೊದಲಾದ ಅಧಿಕಾರಿಗಳು, ಹಿಂದಿನ ಜನಪ್ರತಿನಿಧಿಗಳ ಸಲಹೆ?ಸೂಚನೆಗಳನ್ನು ದಾಲಿಸಿಕೊಂಡರು.

ಜಾಲತಾಣದಲ್ಲೂ ತಿಳಿಸಿ: 'ಮುಂದಿನ ಬಜೆಟ್ ಸಿದ್ಧಪಡಿಸಲು ಸಲಹೆ ಕೇಳಲಾಗಿದೆ. ಪಾಲಿಕೆ ಜಾಲತಾಣದಲ್ಲಿ ಹಾಕಲಾಗಿರುವ ಗೂಗಲ್‌ಫಾರ್ಮ್ ಆನ್‌ಲೈನ್‌ನಲ್ಲೇ ತುಂಬಿ ಸಲಹೆ ನೀಡಲು ಸಾರ್ವಜನಿಕರಿಗೆ ಅವಕಾಶವಿದೆ' ಎಂದು ನಿತೇಶ್ ಪಾಟಲ ಹೇಳಿದರು. 'ಪ್ರತಿ ವಾರ್ಡ್‌ನಲ್ಲೂ ಅತಿ ಹೆಚ್ಚು ತೆರಿಗೆ, ಕರ ಬಾಕಿ ಉಳಿಸಿಕೊಂಡಿರುವವರ ಪಟ್ಟಿ ಸಿದ್ಧಪಡಿಸಲಾಗಿದೆ. ವಸೂಲಾತಿಗೆ ಕ್ರಮ ವಹಿಸಲಾಗುವುದು. ಮಾಸ್ಟರ್ ಪ್ಲಾನ್ ಅನ್ನು ಇದೇ ಮೊದಲಿಗೆ ಜಾಲತಾಣದಲ್ಲಿ ಹಾಕಲಾಗಿದೆ. ಅದನ್ನು ಸಾರ್ವಜನಿಕರು ವೀಕ್ಷಿಸಬಹುದಾಗಿದೆ' ಎಂದು ಹೇಳಿದರು. ತೆರಿಗೆ ಸರಿಯಾಗಿ ವಸೂಲಿ ಮಾಡಿ: ಮಾಜಿ ಮೇಯರ್ ಬಿ.ಎಲ್. ಭೈರಪ್ಪ ಮಾತನಾಡಿ, 'ಇಂದಿಗೂ ಹಲವು ಬಡಾವಣೆಗಳಲ್ಲಿ ಸರಿಯಾಗಿ ತೆರಿಗೆ ವಸೂಲಿ ಆಗುತ್ತಿಲ್ಲ. ಖಾತೆ, ಕಂದಾಯ ಆಂದೋಲನ ನಡೆಸಿದರೆ ವರಮಾನ ಏರಿಕೆ ಮಾಡಿಕೊಳ್ಳಬಹುದು. ನೀರಿನ ಕರ ವಸೂಲಾತಿಯಲ್ಲಿ ಅಧಿಕವಾದ ಬಡ್ಡಿ ಹಾಕಲಾಗಿದೆ. ಬಡ್ಡಿ ಮನ್ನಾ ಮಾಡಿದರೆ ಪಾವತಿಸುವುದಕ್ಕೆ ಬಹಳಷ್ಟು ಮಂದಿ ಸಿದ್ಧವಿದ್ದಾರೆ. ಇದರಿಂದಲೂ ವರಮಾನ ಬರುತ್ತದೆ' ಎಂದು ತಿಳಿಸಿದರು.

ಸಮರ್ಪಕವಾಗಿ ಆಗಬೇಕು: 'ಪಾಲಿಕೆ ಆಸ್ತಿಗಳಲ್ಲಿ ಬಾಡಿಗೆ ವಸೂಲಾತಿ ಸಮರ್ಪಕವಾಗಿ ಆಗಬೇಕು. ಆಸ್ತಿಗಳನ್ನು ಅಧೀನಕ್ಕೆ ತೆಗೆದುಕೊಂಡು ಅಲ್ಲಿ ಕೈಗೆಟಕುವ ಬಾಡಿಗೆ ವಿಧಿಸಬಹುದಾಗಿದೆ. ಉದ್ಯಾನ ನಿರ್ವಹಣೆ ಖಾಸಗಿಯವರಿಗೆ ಕೊಡಬೇಕು. ಸಿಎಸ್‌ಆರ್ ನಿಧಿ ಬಳಸಿಕೊಂಡು ಮೈದಾನವನ್ನು ಅಭಿವೃದ್ಧಿಪಡಿಸಬೇಕು' ಎಂದು ಸಲಹೆ ನೀಡಿದರು.

ಮಾಜಿ ಮೇಯರ್ ಲಿಂಗಪ್ಪ, 'ದೇವರಾಜ ಮಾರುಕಟ್ಟೆಯಲ್ಲಿ ವ್ಯಾಪಾರ ಮಾಡುತ್ತಿರುವವರಿಗೆ ಖಾತೆ ಮಾಡಿಕೊಟ್ಟು ಬಾಡಿಗೆ ಪರಿಷ್ಕರಿಸಬೇಕು. ಇದರಿಂದ ವರಮಾನ ಕ್ರೋಢೀಕರಣಕ್ಕೆ ಸಹಾಯ ಆಗುತ್ತದೆ' ಎಂದು ತಿಳಿಸಿದರು.

ಮಾಜಿ ಮೇಯರ್ ಟಿ.ಬಿ. ಚಿಕ್ಕಣ್ಣ, 'ವಾರ್ಡ್ ನಂ. 43 ಹಾಗೂ 45ರಲ್ಲಿ ಸಮರ್ಪಕ ಒಳಚರಂಡಿ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಬೇಕು' ಎಂದು ಕೋರಿದರು.

ಮಹಿಳೆಯರಿಗೆ ಆದ್ಯತೆ ಕೊಡಿ: ಮಾಜಿ ಉಪಮೇಯರ್‌ಗಳಾದ ಪುಷ್ಪವಲ್ಲಿ ಹಾಗೂ ರೂಪಾ, 'ಮಹಿಳೆಯರು ಮತ್ತು ಮಕ್ಕಳಿಗಾಗಿ ವಿಶೇಷ ಯೋಜನೆ ರೂಪಿಸಬೇಕು. ಪಿಂಕ್ ಆಟೊರಿಕ್ಷಾ ಯೋಜನೆ ಆರಂಭಿಸಬೇಕು. ಸ್ವಾವಲಂಬಿ ಜೀವನ ಕಂಡುಕೊಳ್ಳಲು ಬೇಕಾದ ತರಬೇತಿಗಳನ್ನು ನೀಡಬೇಕು' ಎಂದು ಕೋರಿದರು.

'ದೇವರಾಜ ಮಾರುಕಟ್ಟೆಯಲ್ಲಿರುವ ಅವ್ಯವಸ್ಥೆ ಸರಿಪಡಿಸಬೇಕು' ಎಂದು ಮಾಜಿ ಮೇಯರ್ ಮೋದಾಮಣಿ ಸಲಹೆ ನೀಡಿದರು. ಮಾಜಿ ಮೇಯರ್‌ಗಳಾದ ಪಿ. ವಿಶ್ವನಾಥ್, ಮಹದೇವಪ್ಪ, ದಕ್ಷಿಣಾಮೂರ್ತಿ, ಉದ್ಯಮಿ ಸುರೇಶ್‌ಕುಮಾರ್ ಜೈನ್ ಸಲಹೆ ನೀಡಿದರು. ಮುಖ್ಯ ಲೆಕ್ಕಾಧಿಕಾರಿ ಶ್ವೇತಾ, ಅಧಿಕಾರಿಗಳಾದ ಕುಸುಮಾಕುಮಾರಿ, ಜಿ.ಸೋಮಶೇಖರ್ ಪಾಲ್ಗೊಂಡಿದ್ದರು.

**ಪರಿಷ್ಕರಣೆಗೆ ಕ್ರಮ ವಹಿಸಿ:**

ಮಾಜಿ ಮೇಯರ್ ಸಂದೇಶ್ ಸ್ವಾಮಿ, 'ಪಾಲಿಕೆಗೆ ಸೇರಿದ ಎರಡೂವರೆ ಸಾವಿರಕ್ಕೂ ಹೆಚ್ಚು ಮಳಿಗೆಗಳನ್ನು ಬಾಡಿಗೆಗೆ ಕೊಡಲಾಗಿದೆ. ಅವುಗಳ ಬಾಡಿಗೆ ಪರಿಷ್ಕರಣೆ ಆಗಿಲ್ಲ. ಕೆಲವೆಡೆ ಸಂಗ್ರಹಿಸುತ್ತಲೂ ಇಲ್ಲ. ಇದರಿಂದ ವರಮಾನಕ್ಕೆ ತೊಡಕಾಗುತ್ತಿದೆ' ಎಂದು ದೂರಿದರು.

'ಸ್ವಚ್ಛತೆಯ ವಿಷಯದಲ್ಲಿ ನಿರ್ಲಕ್ಷ್ಯ ವಹಿಸುತ್ತಿರುವುದು ಏಕೆ? ವರ್ತುಲ ರಸ್ತೆ ಬದಿಯಲ್ಲಿ ಸ್ವಚ್ಛತೆ ಸರಿಯಾಗಿ ಆಗುತ್ತಿಲ್ಲ. ಇದರಿಂದ ಮೈಸೂರಿಗೆ ಕೆಟ್ಟ ಹೆಸರು ಬರುತ್ತಿದೆ. ಸಂಪನ್ಮೂಲ ಸಂಗ್ರಹಿಸಲು ಆದ್ಯತೆ ಕೊಡಬೇಕು. ಖಾತೆ ಮಾಡಿಕೊಡಲು ?20ಸಾವಿರ, ? 30ಸಾವಿರ ಲಂಚ ಕೇಳುವ ದೂರುಗಳಿವೆ. ಇದಕ್ಕೆ ಕಡಿವಾಣ ಹಾಕಬೇಕು. ನರಸಿಂಹರಾಜ ಕ್ಷೇತ್ರದಲ್ಲಿ ಮೂಲಸೌಕರ್ಯ ಕಲ್ಪಿಸಬೇಕು' ಎಂದು ಒತ್ತಾಯಿಸಿದರು.

**ಇಂದೋರ್ ಮಾದರಿ ಅನುಸರಿಸಿ:**

ಮಾಜಿ ಮೇಯರ್ ಶಿವಕುಮಾರ್ ಮಾತನಾಡಿ, 'ಮೈಸೂರನ್ನು ನಂ.1 ಸ್ವಚ್ಛ ನಗರಿಯಾಗಿಸಲು ಕ್ರಮ ಕೈಗೊಳ್ಳಬೇಕು. ಇಂದೋರ್ ಮಾದರಿಯಲ್ಲಿ ಕಮಾಂಡ್ ಅಂಡ್ ಕಂಟ್ರೋಲ್ ಸೆಂಟರ್ ನಿರ್ಮಾಣ, ನಿರ್ವಹಣೆಗೆ ಕ್ರಿಯಾತ್ಮಕ ಕಾರ್ಯಗಳನ್ನು ಅಳವಡಿಸಿಕೊಳ್ಳಬೇಕು. ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಸಮನ್ವಯ ಮಾಡಬಹುದು. ಮಾಹಾರಾಜರ ಕಾಲದಿಂದಲೂ ಮೈಸೂರು ಮಾದರಿ ನಗರವಾಗಿದೆ. ಸ್ವಚ್ಛತೆಗೆ ಆದ್ಯತೆ ಕೊಡಬೇಕು' ಎಂದು ಕೋರಿದರು.

**ಜನಸ್ನೇಹಿ ಪಾಲಿಕೆಯನ್ನಾಗಿಸಿ: ಅಯೂಬ್**

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ, ಮಾಜಿ ಮೇಯರ್ ಅಯೂಬ್ ಖಾನ್ ಮಾತನಾಡಿ, 'ಜನಸ್ನೇಹಿ ಪಾಲಿಕೆಯಾಗಿಸಲು ಕ್ರಮ ಕೈಗೊಳ್ಳಬೇಕು. ಸರ್ಕಾರವು ಮೈಸೂರನ್ನು ಗ್ರೇಡ್?1 ಮಹಾನಗರಪಾಲಿಕೆಯನ್ನಾಗಿ ಶೀಘ್ರದಲ್ಲೇ ಅಧಿಸೂಚನೆ ಹೊರಡಿಸಬಹುದು. ಆಗ, ಪಾಲಿಕೆಯ ವಿಸ್ತೀರ್ಣವು 338 ಚ.ಕಿ.ಮೀ. ಆಗುತ್ತದೆ. ಹೀಗಿರುವಾಗ, ನೀವು ಬಜೆಟ್ ಸಿದ್ಧಪಡಿಸುತ್ತಿರುವುದು ಈಗಿನ ಪಾಲಿಕೆಗೋ, ಗ್ರೇಡ್?1 ಪಾಲಿಕೆಗೋ ಎಂಬುದನ್ನು ಸ್ಪಷ್ಟಪಡಿಸಬೇಕು' ಎಂದರು.

ಲೋಕಾಯುಕ್ತ ದಾಳಿ ಬಗ್ಗೆ ಪ್ರಸ್ತಾಪಿಸಿ, 'ಪಾಲಿಕೆ ಅಧಿಕಾರಿಗಳ ಕಾರ್ಯವೈಖರಿ ಕುರಿತು ಲೋಕಾಯುಕ್ತ ಪೊಲೀಸರು ಬಂದು ಹೇಳಿಕೊಡುವಂತಹ ಪರಿಸ್ಥಿತಿ ಬಂದಿದೆ' ಎಂದರು.

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೈಸೂರಿನ ಅಭಿವೃದ್ಧಿಗೆ ಅನುದಾನದ ಸುರಿಮಳೆ ಮಾಡಿದ್ದಾರೆ. ಅದನ್ನು ಬಳಸಿಕೊಳ್ಳಬೇಕು. ಒಂದೇ ದಿನದಲ್ಲೇ ಖಾತೆ ಮಾಡಿಕೊಡಬೇಕು' ಎಂದು ಒತ್ತಾಯಿಸಿದರು.

**'ಗ್ರೇಟರ್ ಅಲ್ಲ, ಗ್ರೇಡ್?1 ಮಹಾನಗರಪಾಲಿಕೆ'**

ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್ ಮಾತನಾಡಿ, 'ಚುನಾಯಿತ ಪ್ರತಿನಿಧಿಗಳು ಇಲ್ಲದಿರುವ ಕಾರಣ 15ನೇ ಹಣಕಾಸು ಆಯೋಗದಿಂದ ತಲಾ 63 ಕೋಟಿ ಅನುದಾನ ಎರಡು ವರ್ಷಗಳಿಂದ ಬಂದಿಲ್ಲ' ಎಂದು ಪ್ರತಿಕ್ರಿಯಿಸಿದರು. 'ಗ್ರೇಟರ್ ಮೈಸೂರು ರಚಿಸಲಾಗುತ್ತದೆ ಎಂದು ಪ್ರಚಾರ ಆಗಿದೆ. ಆದರೆ, ಮಾಡುತ್ತಿರುವುದು ಗ್ರೇಡ್?1 ಮೈಸೂರು ಮಹಾನಗರಪಾಲಿಕೆ' ಎಂದು ಸ್ಪಷ್ಟಪಡಿಸಿದರು. 'ನಗರದಲ್ಲಿ ಪೊಲೀಸ್ ಇಲಾಖೆಯ 50 ಸಿಸಿ ಟಿವಿ ಕ್ಯಾಮೆರಾ ಇವೆ. ಪಾಲಿಕೆಯಿಂದ ಮತ್ತೆ 50 ಅಳವಡಿಸಿದರೆ, ತ್ಯಾಜ್ಯ ಚೆಲ್ಲುವವರ ವಿರುದ್ಧ ಕ್ರಮ ಕೈಗೊಳ್ಳಬಹುದಾಗಿದೆ. ವೈಟ್ ಟಾಪಿಂಗ್ ರಸ್ತೆ ನಿರ್ಮಾಣಕ್ಕೆಂದು 400 ಕೋಟಿ, ವಿಶೇಷ ಅನುದಾನವಾಗಿ 250 ದೊರೆತಿದೆ' ಎಂದು ತಿಳಿಸಿದರು.

# ರಾಮೋತ್ಸವ: ಜ.17ರಂದು ಮ್ಯಾರಥಾನ್. ಹೆಸರು ನೋಂದಾಯಿಸಿಕೊಳ್ಳಿ

ರಾಮನಗರ: ಡಿಕೆಎಸ್ ಚಾರಿಟಬಲ್ ಇನ್ಸ್‌ಟಿಟ್ಯೂಟ್ ಟ್ರಸ್ಟ್, ಕನಕರಪುರ ಮತ್ತು ವಿವಿಧಸಂಘ–ಸಂಸ್ಥೆಗಳು ಹಾಗೂ ಸಾರ್ವಜನಿಕರ ಸಹಕಾರದಲ್ಲಿ ರಾಮನಗರದಲ್ಲಿ ಹಮ್ಮಿಕೊಂಡಿರುವ ರಾಮೋತ್ಸವದ ಅಂಗವಾಗಿ ಜ.17ರಂದು ಮ್ಯಾರಥಾನ್ ಹಮ್ಮಿಕೊಳ್ಳಲಾಗಿದೆ ಎಂದು ಶಾಸಕ ಇಕ್ಬಾಲ್ ಹುಸೇನ್ ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಅಂದು ಬೆಳಿಗ್ಗೆ 6 ಗಂಟೆಗೆ 16 ವರ್ಷಕ್ಕೂ ಮೇಲ್ಪಟ್ಟ ಪುರುಷರಿಗೆ 5ಕೆ (5 ಕಿಮಿ) ಮತ್ತು 10ಕೆ (10 ಕಿಮಿ) ಎರಡು ವಿಭಾಗಗಳಲ್ಲಿ ಮ್ಯಾರಥಾನ್ ಆರಂಭವಾಗಲಿದೆ. ಅದೇ ದಿನ ಬೆಳಿಗ್ಗೆ 7 ಗಂಟೆಗೆ 16 ವರ್ಷ ಮೇಲ್ಪಟ್ಟ ಮಹಿಳೆಯರಿಗೆ 5ಕೆ (5 ಕಿಮಿ) ವಿಭಾಗದ ಮ್ಯಾರಥಾನ್ ಆರಂಭವಾಗಲಿದೆ. ಎರಡೂ ಮ್ಯಾರಥಾನ್‌ಗಳು ನಗರದ ಶ್ರೀ ಆಂಜನೇಯಸ್ವಾಮಿ ಆರ್ಚ್‌ಬಳಿಯಿಂದ ಆರಂಭವಾಗಲಿದೆ.

**ಜ.10ರೊಳಗೆ ಹೆಸರು ನೋಂದಾಯಿಸಿಕೊಳ್ಳಿ:**

ಮ್ಯಾರಥಾನ್‌ನಲ್ಲಿ ಭಾಗವಹಿಸುವ ಆಸಕ್ತರು, ತಮ್ಮ ಹೆಸರುಗಳನ್ನು ಜ.10ರ ಸಂಜೆ 5 ಗಂಟೆಯೊಳಗಾಗಿ ಈ ಮೊಬೈಲ್ ಸಂಖ್ಯೆಗಳಿಗೆ ಕರೆ ಮಾಡಿ ನೋಂದಾಯಿಸಿಕೊಳ್ಳಬಹುದಾಗಿದೆ. ಚೇತನ್‌ಕುಮಾರ್ (9945233336), ಶಿವರಾಜು ಆರ್ (990904666), ಪ್ರಕಾಶ್ (6360192056), ಗೋಪಾಲ್ ಬಿ (9902474555), ಪರಮೇಶ್ ಎಂ.ಬಿ. (9739494256), ಸುಹಾಸ್ (9980707143), ರಾಮು (7892215917), ಗೋವಿಂದರಾಜು (9844050406), ಚಂದ್ರಪ್ಪ (9900103789). ಸ್ಪರ್ಧಿಗಳು ಬೆಳಿಗ್ಗೆ 6 ಗಂಟೆಗೆ ಸರಿಯಾಗಿ ಹಾಜರರಿಬೇಕು. ಕೌಂಟರ್‌ನಿಂದ ಟೀ ಶರ್ಟ್ ಮತ್ತು ಬಿಪ್ ಸಂಖ್ಯೆಯನ್ನು ಪಡೆಯಬೇಕು. ಭಾಗವಹಿಸಿ ಸ್ಪರ್ಧೆಯನ್ನು ಪೂರ್ಣಗೊಳಿಸುವ ಸ್ಪರ್ಧಿಗಳಿಗೆ ಮೆಡಲ್ ನೀಡಲಾಗುವುದು. ಮ್ಯಾರಥಾನ್ ಮುಗಿದ ನಂತರ ಸ್ಪರ್ಧಿಗಳಿಗೆ ಲಘು ಉಪಹಾರದ ವ್ಯವಸ್ಥೆ ಮಾಡಲಾಗುವುದು. ಭಾಗವಹಿಸುವ ಎಲ್ಲಾ ಸ್ಪರ್ಧಿಗಳಿಗೂ ಸಮಾಧಾನಕರ ಬಹುಮಾನ ನೀಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

**ಮ್ಯಾರಥಾನ್ ಮಾರ್ಗ ಯಾವುದು?**

10ಕೆ ವಿಭಾಗದ ಮಾರ್ಗ: ಶ್ರೀರಾಮದೇವರ ಬೆಟ್ಟದ ಆಂಜನೇಯಸ್ವಾಮಿ ಆರ್ಚ್ ಬಳಿಯಿಂದ ಬೆಂಗಳೂರು ಮೈಸೂರು ಹೆದ್ದಾರಿಯಲ್ಲೇ ಮೈಸೂರು ಕಡೆ ಸಾಗಿ ಎಪಿಎಂಸಿ ಯಾರ್ಡ್ ವೃತ್ತದಲ್ಲಿ ಕೋರ್ಟ್ ರಸ್ತೆ ಕಡೆಗೆ ಸಾಗಬೇಕು. ಮುಖ್ಯರಸ್ತೆ, ಎಂ.ಜಿ.ರಸ್ತೆ, ಜೂನಿಯರ್ ಕಾಲೇಜು ರಸ್ತೆಯಲ್ಲಿ ಸಾಗಿ ಮತ್ತೆ ಆಂಜನೇಯಸ್ವಾಮಿ ಆರ್ಚ್ ತಲುಪಬೇಕು. 5ಕೆ ವಿಭಾಗದ ಮಾರ್ಗ: ಆಂಜನೇಯಸ್ವಾಮಿ ಆರ್ಚ್ ಬಳಿಯಿಂದ ಬೆಂಗಳೂರು ಮೈಸೂರು ಹೆದ್ದಾರಿ ರಸ್ತೆಯಲ್ಲಿ ಮೈಸೂರು ಕಡೆಗೆ ಸಾಗಿ ಐಜೂರು ವೃತ್ತದಲ್ಲಿ ಎಡಕ್ಕೆ ತಿರುಗಿ ಹಳೇ ಬಸ್ ನಿಲ್ದಾಣದ ಮೂಲಕ ಸಾಗಬೇಕಾಗಿದೆ. 5ಕೆ ಮಾರ್ಗದ ಬಗ್ಗೆ ಇನ್ನು ಸ್ಪಷ್ಟನೆ ಸಿಗಬೇಕಾಗಿದೆ.

# ನಿಮಗೆ ಟಿಕೇಟ್ ಯಾಕೆ ತಪ್ಪಿತು ಸ್ಪಷ್ಟಪಡಿಸಿ: ಪ್ರೇಮ್‌ಕುಮಾರ್

ಮೈಸೂರು: ಲೋಕಸಭೆಯಲ್ಲಿ ತಮಗೆ ಯಾಕೆ ಟಿಕೆಟ್ ಕೈ ತಪ್ಪಿತು, ರಾಜ್ಯ ಚುನಾವಣೆಗೆ ನಿಮಗೆ ಟಿಕೆಟ್ ಕೊಡುವವರು ಯಾರು ಎಂಬುವುದನ್ನು ಮಾಜಿ ಸಂಸದ ಪ್ರತಾಪ್ ಸಿಂಹ ಸ್ಪಷ್ಟಪಡಿಸುವಂತೆ ಬಿಜೆಪಿ ಮುಖಂಡ ಮೈ.ಕಾ.ಪ್ರೇಮ್‌ಕುಮಾರ್ ಆಗ್ರಹಿಸಿದರು.

ಪ್ರತಾಪ್‌ಸಿಂಹ ಅವರನ್ನು ರಾಷ್ಟ್ರ ರಾಜಕಾರಣದಿಂದ ಹೈಕಮಾಂಡ್ ಹೊರ ಹಾಕಿರುವುದರಿಂದ, ರಾಜ್ಯ ರಾಜಕಾರಣಕ್ಕೆ ಇವರು ಅವಶ್ಯಕತೇಯೇ ?ರಾಜ್ಯ ರಾಜಕಾರಣಕ್ಕೆ ಬರುವ ಸಲುವಾಗಿಯೇ ನನಗೆ ಲೋಕಸಭಾ ಟಿಕೆಟ್ ನೀಡಿಲ್ಲ ಎಂದು ಪ್ರತಾಪ್ ಸಿಂಹ ಎಲ್ಲ ಕಡೆ ಹೇಳಿಕೊಳ್ಳುತ್ತಿದ್ದಾರೆ. ಬಿಜೆಪಿ ಹೈಕಮಾಂಡ್ ಆಗಲೀ, ಹಿರಿಯ ನಾಯಕರಾಗಲೀ ಎಲ್ಲಿ ಹೇಳಿದ್ದಾರೆ, ಅಂತಹ ವರದಿ ಎಲ್ಲಿದೆ ಎಂದು ಸುದ್ದಿಗೋಷ್ಠಿಯಲ್ಲಿ ಪ್ರಶ್ನಿಸಿದರು.

ಚಾಮರಾಜ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಂದು ತಾವೇ ಬಹಿರಂಗವಾಗಿ ಘೋಷಿಸಿಕೊಂಡಿದ್ದಾರೆ. ಹೀಗೆ ತಾವೇ ಘೋಷಿಸಿಕೊಳ್ಳಲು ಪಕ್ಷದಲ್ಲಿ ಅವಕಾಶ ಇದೆಯೇ? ಸ್ವಘೋಷಿತ ಅಭ್ಯರ್ಥಿ ಪ್ರತಾಪ್ ಸಿಂಹ ತಮ್ಮ ಘೋಷಣೆಗೆ ಹೈಕಮಾಂಡ್ ಬೆಂಬಲ ಇದೆ ಎನ್ನುವುದನ್ನು ಸಾಬೀತುಪಡಿಸುವರೇ?ಎರಡು ಬಾರಿ ಸಂಸದರಾಗಿದ್ದ ಪ್ರತಾಪ್‌ಸಿಂಹ ಅವರು, ತಮ್ಮ ಕಚೇರಿಗೆ ಬಂದಂತಹ ಕಾರ್ಯಕರ್ತರನ್ನು ಅವಮಾನಿಸಿ ಕಳುಹಿಸುತ್ತಿದ್ದೀರಿ ಈಗ ಕಾರ್ಯಕರ್ತರ ನೆನಪಾಯಿತೇ? ಎಂದು ಕಿಡಿಕಾರಿದರು.

ರಾಜ್ಯದ ಎಲ್ಲ ಜಿಲ್ಲೆಗಳಿಂದಲೂ ಚುನಾವಣೆಗೆ ಸ್ಪರ್ಧಿಸಲು ತಮಗೆ ಆಹ್ವಾನ ಬರುತ್ತಿದೆ ಎಂದು ಹೇಳಿಕೊಳ್ಳುವ ಪ್ರತಾಪ್ ಸಿಂಹ ಅವರು ಮೈಸೂರು ಜಿಲ್ಲೆಯ, ಒಕ್ಕಲಿಗರ ಪ್ರಾಬಲ್ಯವಿರುವ ಕ್ಷೇತ್ರವನ್ನೇ ಆಯ್ಕೆ ಮಾಡಿಕೊಂಡಿದ್ದು ಏಕೆ? ಬೇರೆ ಕ್ಷೇತ್ರಗಳಲ್ಲಿ ನಿಂತರೆ ಠೇವಣಿ ಕಳೆದುಕೊಳ್ಳುತ್ತೇನೆ ಎನ್ನುವ ಭಯವೇ? ಕಳೆದ ಲೋಕಸಭಾ ಚುನಾವಣೆಯಲ್ಲಿ ಯದುವೀರ್ ಒಡೆಯರ್ ಅವರ ಪರ ಪ್ರಚಾರಕ್ಕೆ ಅಸಹಕಾರ ತೋರಿಸಿದರು ಎಂದು ದೂರಿದರು.

ಸಂಸತ್ ಅಧಿವೇಶನದ ವೇಳೆಯಲ್ಲಿ ತಾವು ನೀಡಿದ ಪಾಸ್ ಬಳಸಿಕೊಂಡು ಯುವಕರು ಸ್ಮೋಕ್ ಬಾಂಬ್ ಸಿಡಿಸಿದರು. ಆ ಪ್ರಕರಣ ಏನಾಯಿತು. ಕತ್ತಲೆ ಜಗತ್ತು ಎನ್ನುವ ಪುಸ್ತಕದ ಮೇಲೆ ತಡೆಯಾಜ್ಞೆ ಏಕೆ ತಂದಿದ್ದಾರೆ? ಹೊರಜಗತ್ತಿಗೆ ಗೊತ್ತಾಗಬಾರದ ಯಾವ ವಿಷಯ ಅದರಲ್ಲಿತ್ತು? ಬಹಿರಂಗ ಚರ್ಚೆಯ ಮುಖಾಂತರವೇ ಅದನ್ನು ಎದುರಿಸಬಹುದಿತ್ತಲ್ಲವೇ ಎಂದು ಕಿಡಿಕಾರಿದರು. ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಮುಖಂಡ ಕುಂಬಾರಕೊಪ್ಪಲು ಕುಮಾರಗೌಡ ಇದ್ದರು.




# ಸಹಕಾರ ಸಂಘದ ಕ್ಯಾಲೆಂಡರ್ ಬಿಡುಗಡೆ



ಮೈಸೂರು: ಮೈಸೂರು ಮಹಾನಗರಪಾಲಿಕೆ ನೌಕರರ ಸಹಕಾರ ಸಂಘದ ವಿಶೇಷವಾದ ದಿನದರ್ಶಿಕೆಯನ್ನು ಗುರುವಾರ ಬಿಡುಗಡೆ ಮಾಡಲಾಯಿತು.

ದಿನದರ್ಶೀಕೆಯಲ್ಲಿ ವಿಶ್ವತೇವ ಭೂಮಿ ದಿನ, ವಿಶ್ವ ಅರಣ್ಯ ದಿನ, ವಿಶ್ವ ಪರಂಪರೆ ದಿನ, ವಿಶ್ವ ಪರ್ವತ ದಿನ, ವಿಶ್ವ ಪರಿಸರ ದಿನ, ವಿಶ್ವ ಹುಲಿ ದಿನ, ವಿಶ್ವ ಆನೆಗಳ ದಿನ, ಪೌರ ಕಾರ್ಮಿಕರ ದಿನ, ಮೈಸೂರು ದಸರಾ ಮೊದಲಾದ ಚಿತ್ರಗಳು ಗಮನ ಸೆಳೆದವು. ಸಂಘದ ಅಧ್ಯಕ್ಷ ಎಸ್.ಯಶೋಧರ, ಉಪಾಧ್ಯಕ್ಷೆ ಕೆ.ಸುಮಂಗಳ, ಖಜಾಂಚಿ ನಸುಲ್ಲಾ, ನಿರ್ದೇಶಕರಾದ ಬಿ.ಪ್ರಸಾದ್, ಎಸ್.ಮೈತ್ರಿ, ಎನ್.ಮಂಜುನಾಥ್, ಎಚ್.ಎಂ.ಶಿವಪ್ರಸಾದ್, ವಿ. ರಾಜೇಶ್ವರಿ ಬಾಯಿ, ಎಂ.ಬಸವಣ್ಣ, ಡಿ.ಸುರೇಂದ್ರಕುಮಾರ್, ಕೆ.ವಿಶ್ವನಾಥ್, ಬಿ.ರಾಜು, ಕಾರ್ಯದರ್ಶಿ ಎನ್.ಶಿವಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

# ಕ್ರೈಸ್ತ ಸಮುದಾಯದ ಅಭಿವೃದ್ಧಿಗೆ ಒತ್ತು



ಚಾಮರಾಜನಗರ, ಕ್ರೈಸ್ತ ಸಮುದಾಯದ ಅಭಿವೃದ್ಧಿಗೆ ಆದ್ಯತೆ ನೀಡಲಾಗಿದೆ ಎಂದು ಎಂಎಸ್‌ಐಎಲ್ ಅಧ್ಯಕ್ಷರು, ಶಾಸಕ ಸಿ.ಪುಟ್ಟರಂಗಶೆಟ್ಟಿ ಹೇಳಿದರು.

ತಾಲೂಕಿನ ಸರಗೂರಿನ ಸಂತ ಜೋಸೆಫರ ದೇವಾಲಯದ ಪಕ್ಕದಲ್ಲಿ ಶೌಚಾಲಯ ನಿರ್ಮಾಣಕ್ಕೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿ, ಶೌಚಾಲಯ ನಿರ್ಮಾಣಕ್ಕೆ ಶೌಚಾಲಯ ನಿರ್ಮಾಣಕ್ಕೆ ಶಾಸಕರ ಅನುದಾನದಲ್ಲಿ 5 ಲಕ್ಷ ರೂ. ಮಂಜೂರು ಮಾಡಲಾಗಿದೆ. ತಾಲೂ ಕಿನ ಚರ್ಚ್‌ಗಳ ಅಭಿವೃದ್ಧಿ ಗೆ ಅನುದಾನ ನೀಡಲಾಗಿದೆ. ಮಾಡಿ ಮುಂದಿನ ದಿನಗಳಲ್ಲಿ ಕ್ರೈಸ್ತ ಅಭಿವೃದ್ಧಿ ಗೆ ಒತ್ತು ನೀಡಲಾಗುವುದು ಎಂದರು. ಈ ಸಂದರ್ಭದಲ್ಲಿ ಫಾಧರ್ ಅಂತೋಣಿ ಸ್ವಾಮಿ, ಗ್ರಾ.ಪಂ.ಸದಸ್ಯರಾದ ಜಕಾವುಲ್ಲಾ ಷರೀಫ್, ಯಾಷನ್, ಸುರೇಶ್, ಮುಸ್ಲಿಂ ಮುಖಂಡ ನಸ್ರುವುಲ್ಲಾ ಷರೀಫ್, ಲಿಂಗರಾಜು, ಜೋಸೆಫ್, ಆರ್.ನಾಗರಾಜು, ಆರ್ಶೀವಾದ್, ಎಸ್.ಆರ್.ನಾಗರಾಜು, ಎಸ್.ವಿ.ಬಾಲಸುಬ್ರಹ್ಮಣ್ಯಂ ಗಾನ ಗಂಧರ್ವ ಕಲಾ ವೇದಿಕೆ ಪ್ರಧಾನ ಕಾರ್ಯದರ್ಶಿ ಎನ್. ಜೋಸೆಫ್, ಎಸ್.ಪಿ.ನಟರಾಜು ಹಾಜರಿದ್ದರು.

ಕರ್ನಾಟಕ ಸರ್ಕಾರ
ಕಾರ್ಯಪಾಲಕಇಂಜಿನಿಯರ್‌ರವರಕಛೇರಿ,
ಲೋಕೋಪಯೋಗಿ, ಇಲಾಖೆ ವಿಭಾಗ, ಮಂಡ್ಯ
ಸಂ: 13/2025–2026 ದಿನಾಂಕ: 06.01.2026
ಮಂಡ್ಯ ಜಿಲ್ಲೆಯ ಮಂಡ್ಯ ಜಿಲ್ಲೆಯ ಕಾಮಗಾರಿಗಳಿಗಾಗಿ ಟೆಂಡರ್ ಪ್ರಕಟಣೆ
ಐಟಂವಾರು ದರದ ಟೆಂಡರುಗಳ ಕಾಮಗಾರಿಗಳಿಗಾಗಿ ಅರ್ಹ ಗುತ್ತಿಗೆದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ KW-1/2ರ ರೀತಿ ದ್ವಿಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮುಖಾಂತರ ಕಾಮಗಾರಿಗಳ ಟೆಂಡರ್‌ಗಾಗಿ ಭಾಗವಹಿಸಬಹುದು. ಟೆಂಡರ್ ದಾಖಲಾತಿಗಳನ್ನು ದಿನಾಂಕ: 07.01.2026 ರಿಂದ ಇ–ಪೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ವಿಚಾರಣೆ ದಿನಾಂಕ: 14.01.2026 ಸಂಜೆ 4.00 ಘಂಟೆವರೆಗೆ, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 16.01.2026 ಸಂಜೆ 4.30 ಘಂಟೆವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 17.01.2026 ಸಂಜೆ 4.31 ಘಂಟೆ ನಂತರ ಅಥವಾ ನಂತರದ ಕೆಲಸದ ದಿನಗಳು, ಆರ್ಥಿಕ ಬಿಡ್ ತೆರೆಯುವ ದಿನಾಂಕ: 19.01.2026 ಬೆಳಿಗ್ಗೆ 11.00 ಗಂಟೆಗೆ ಅಥವಾ ನಂತರದ ಕೆಲಸದ ದಿನಗಳು. ಟೆಂಡರ್ ಪ್ರಕ್ರಿಯೆ ಬೆಲೆ ಇ–ಪೋರ್ಟಲ್‌ರಂತೆ. ಕಾಲಮಿತಿ: ಮಳೆಗಾಲ ಸೇರಿ 2/3 ತಿಂಗಳು ಒಟ್ಟು 2 (ಎರಡು) ಕಾಮಗಾರಿಗಳ ಪೈಕಿ ಕಾಮಗಾರಿಗಳ ಪೈಕಿ ಗರಿಷ್ಠ ಅಂದಾಜು ಮೊತ್ತ ರೂ.29.00 ಲಕ್ಷಗಳು ಕನಿಷ್ಠ ಅಂದಾಜು ಮೊತ್ತ ರೂ.6.00 ಲಕ್ಷಗಳು ಇ.ಎಂ.ಡಿ. ಬೆಲೆ ಇ–ಪೋರ್ಟಲ್‌ರಂತೆ, ಕೆಲಸಗಳ ವಿವರ, ಅಂದಾಜು ಮೊತ್ತ, ಇ.ಎಂ.ಡಿ., ಮೊತ್ತ ಮುಂತಾದ ಮಾಹಿತಿಗಳನ್ನು ಸದರಿ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು.
**ಟಿಪ್ಪಣಿ: 1)** ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯ ಮುಂದೂಡುವಿಕೆ /ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. **2)** ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.
ಸಹಿ/– ಕಾ.ಇಂ.,ಲೋ.ಇ., ವಿಭಾಗ, ಮಂಡ್ಯ

# ದಾಸಶ್ರೇಷ್ಠರ ಆರಾಧನಾ ಮಹೋತ್ಸವ

ಮೈಸೂರು: ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶನ ಕಲೆಗಳ ವಿಶ್ವವಿದ್ಯಾಲಯದಲ್ಲಿ ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ ಅಧ್ಯಕ್ಷತೆಯಲ್ಲಿ ದಕ್ಷಿಣ ಭಾರತೀಯ ಶಾಸ್ತ್ರೀಯ ಸಂಗೀತದ ಮೂವರು ಮಹಾನ್ ನಾಯಕರಾದ ತ್ಯಾಗರಾಜ, ಪುರಂದರದಾಸ ಹಾಗೂ ಕನಕದಾಸರ ಆರಾಧನಾ ಮಹೋತ್ಸವವನ್ನು ಭಕ್ತಿ, ಭಾವ ಸಂಗೀತ, ಸಂಭ್ರಮ ಮತ್ತು ಶಿಸ್ತಿನೊಂದಿಗೆ ಆಚರಿಸಲಾಯಿತು.

ಈ ಕಾರ್ಯಕ್ರಮವನ್ನು ವಿಶ್ವವಿದ್ಯಾಲಯದ ನೂತನ ಕ್ಯಾಂಪಸ್ ನಾಡನಹಳ್ಳಿಯ ಸರ್ದಾರ್ವಲ್ಲಭಬಾಯಿ ಪಟೇಲನಗರ ವಿಶ್ವ ವಿದ್ಯಾನಿಲಯದ ನೂತನ ಆವರಣದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ವಿದ್ವಾನ್ ಎಚ್.ಎಲ್.ಶಿವಶಂಕರ ಸ್ವಾಮಿ ಆಗಮಿಸಿದ್ದರು. ವಿವಿಯ ಮೌಲ್ಯಮಾಪನ ಕುಲಸಚಿವ ಎಂ.ಜಿ. ಮಂಜುನಾಥ್ ಕಾರ್ಯಕ್ರಮದ ಕುರಿತು ತಮ್ಮ ಭಾಷಣದಲ್ಲಿ ತ್ಯಾಗರಾಜರ ಸಂಗೀತ ಹಾಗೂ ಭಕ್ತಿ ಪರಂಪರೆಯ ಮಹತ್ವವನ್ನು ಕೇವಲ ಸಂಗೀತ ರಚನೆಗಳಲ್ಲ, ಅವು ಮಾನವ ಜೀವನಕ್ಕೆ ಮಾರ್ಗ ದರ್ಶಕವಾದ ಭಕ್ತಿಯ ಸಂದೇಶಗಳೆಂದು



ಅಭಿಪ್ರಾಯಪಟ್ಟರು. ಒಂದು ಸಂಸ್ಥೆಯ ಏಳಿಗೆಗೆ ಪ್ರಬಲ ನಾಯಕತ್ವ ಎಷ್ಟು ಮುಖ್ಯವೋ ಕಲೆಗೆ ಪ್ರೋತ್ಸಾಹವು ಅಷ್ಟೇ ಮುಖ್ಯ ನಮ್ಮ ವಿಶ್ವವಿದ್ಯಾನಿಲಯದ ಆಧಾರ ಸ್ಥಂಬದಂತಿದ್ದ ಕಲೆ ಮತ್ತು ಕಲಾವಿದರಿಗೆ ಸದಾ ಬೆನ್ನೆಲುಬಾಗಿ ನಿಂತಿರುವ ಮಾನ್ಯ ಕುಲಪತಿಗಳಾದ ನಾಗೇಶ್ ವಿ. ಬೆಟ್ಟಕೋಟೆಯವರು ತ್ಯಾಗರಾಜರ ಕೃತಿಗಳಲ್ಲಿ ಅಡಗಿರುವ ನಾದ ಯೋಗ ಮತ್ತು ಭಕ್ತಿ ತತ್ವ, ಪುರಂದರದಾಸರ ಸಂಗೀತ ಶಿಕ್ಷಣದ ಮಹತ್ವ, ಹಾಗೂ ಕನಕದಾಸರ ಸಾಮಾಜಿಕ ಸಮಾನತೆಯ ಸಂದೇಶಗಳ ಕುರಿತು ಹೇಳಿದರು. ಈ ಮೂವರು ವಾದ್ಯಯಕಾರರು ಭಾರತೀಯ ಸಂಗೀತ ಹಾಗೂ ಸಂಸ್ಕೃತಿಗೆ ನೀಡಿದ ಅಮೂಲ್ಯ ಕೊಡುಗೆ ಇಂದಿಗೂ ಪ್ರಾಸಂಗಿಕವಾಗಿದೆ ಎಂದು ಹೇಳಿದರು.

# ಬೋನಿಗೆ ಬಿದ್ದ ಚಿರತೆ : ನಿರಾಳರಾದ ಬೆಳವಾಡಿ ಗ್ರಾಮಸ್ಥರು

ಗುಂಡ್ಲುಪೇಟೆ : ತಾಲೂಕಿನ ಬೆಳವಾಡಿ ಗ್ರಾಮದಲ್ಲಿ ಜನ ಜಾನುವಾರುಗಳಿಗೆ ಉಪಟಳ ನೀಡುತ್ತಿದ್ದ ಚಿರತೆಯನ್ನು ಬೋನಿನಲ್ಲಿದ್ದ ನಾಯಿಯನ್ನು ಹಿಡಿಯಲು ಬಂದು ಬೋನಿಗೆ ಬಿದ್ದು ಸೆರೆಯಾಗಿದೆ.



ಆಗಿಂದಾಗ್ಗೆ ಬೆಳವಾಡಿ ಗ್ರಾಮದಂಚಿಗೆ ಆಗಮಿಸಿ ಜನ ಜಾನುವಾರುಗಳಿಗೆ ಉಪಟಳ ನೀಡುತ್ತಿದ್ದ ಚಿರತೆಯಿಂದ ಭಯ ಭೀತರಾಗಿದ್ದ ಗ್ರಾಮಸ್ಥರು ಚಿರತೆಯ ಸೆರೆಗೆ ಅರಣ್ಯ ಅಧಿಕಾರಿಗಳಿಗೆ ಮನವಿ ಮಾಡಿದ್ದರು. ಗ್ರಾಮಸ್ಥರ ಮನವಿಗೆ ಸ್ಪಂಧಿಸಿದ ಅರಣ್ಯಾಧಿಕಾರಿಗಳು ಹಾಗೂ ಸಿಬ್ಬಂದಿ ಚಿರತೆಯ ಸೆರೆಗೆ ದೊಡ್ಡಕೆರೆ ಬಳಿ ಬೋನಿಟ್ಟಿದ್ದರು. ಎಂದಿನಂತೆ ಗ್ರಾಮದತ್ತ ಆಗಮಿಸಿದ ಚಿರತೆ ಗುರುವಾರ ಬೆಳಗ್ಗೆ ದೊಡ್ಡಕೆರೆ ಬಳಿ ಇಡಲಾಗಿದ್ದ ಬೋನಿನಲ್ಲಿ ಕಟ್ಟಿ ಹಾಕಲಾಗಿದ್ದ ನಾಯಿಯನ್ನು ಹಿಡಿಯಲು ಹೋಗಿ ಬೋನಿಗೆ ಬಿದ್ದು ಸೆರೆಯಾಗಿದೆ. ಚಿರತೆಯ ಸೆರೆಯಿಂದ ಗ್ರಾಮಸ್ಥರು ನಿಟ್ಟುಸಿರು ಬಿಟ್ಟಿದ್ದಾರೆ.

**ಸುತ್ತೂರು ಜಾತ್ರೆ**

# ಪ್ರಚಾರ ರಥಕ್ಕೆ ಚಾಮರಾಜನಗರದಲ್ಲಿ ಭವ್ಯ ಸ್ವಾಗತ

ಚಾಮರಾಜನಗರ: ಸುತ್ತೂರು ಶ್ರೀಕ್ಷೇತ್ರದಲ್ಲಿ ಜ. 15 ರಿಂದ 20 ರವರೆಗೆ ಐದು ದಿನಗಳ ಕಾಲ ನಡೆಯುವ ಜಾತ್ರಾ ಮಹೋತ್ಸವದ ಪ್ರಚಾರ ರಥ ಇಂದು ಚಾಮರಾಜನಗರಕ್ಕೆ ಆಗಮಿಸಿದ್ದು, ಜೆಎಸ್‌ಎಸ್ ಕಾಲೇಜು ಅವರಣದಲ್ಲಿ ಸ್ವಾಗತಿಸಿ, ನಂತರ ಗಣ್ಯರು ಪ್ರಚಾರ ರಥಕ್ಕೆ ಪೂಜೆ ಸಲ್ಲಿಸಿ ಕಳುಹಿಸಿಕೊಟ್ಟರು.

ನಗರದ ಜೆಎಸ್‌ಎಸ್ ಕಾಲೇಜು ಅವರಣಕ್ಕೆ ಆಗಮಿಸುತ್ತಿದ್ದಂತೆ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯ ಸಂಯೋಜಕ ಆರ್.ಎಂ.ಸ್ವಾಮಿ ಬರ ಮಾಡಿಕೊಂಡು ವಿಶೇಷವಾಗಿ ಹೂವುಗಳಿಂದ ಅಲಂಕೃತಗೊಳಿಸಿ ಬಾಳೆಕಂದು ಕಟ್ಟಿ ಪೂಜೆ ಸಲ್ಲಿಸಿ, ಈಡುಗಾಯಿ ಹೊಡೆದು ಪ್ರಚಾರ ರಥಕ್ಕೆ ಚಾಲನೆ ನೀಡಿದರು. ಹರವೆ ಮಠ ಶ್ರೀ ಸರ್ಪಭೂಷಣಸ್ವಾಮೀಜಿ ಪ್ರಚಾರ ರಥದ ಮುಂಭಾಗದಲ್ಲಿದ್ದ ಶ್ರೀ ಶಿವರಾತ್ರಿ ಇಶ್ವರಶಿವ ಯೋಗಿಳ ಪುತ್ಥಳಿಗೆ ಪುಷ್ಪ ನಮನ ಸಲ್ಲಿಸಿದರು.

ಬಳಿಕ ಮಾತನಾಡಿದ ಸರ್ಪಭೂಷಣಸ್ವಾಮೀಜಿಗಳು ಸುತ್ತೂರು ಜಾತ್ರೆ ಎಂದರೆ ವಿಶೇಷ. ಗ್ರಾಮೀಣ ಸೊಗಡು ಹಾಗೂ ಎಲ್ಲಾ ಕ್ಷೇತ್ರಗಳ



ಗಣ್ಯರು ಜಾತ್ರೆಯಲ್ಲಿ ಭಾಗವಹಿಸುವುದು ವಿಶೇಷವಾಗಿದೆ. ಜಾತ್ರೆ ಮಹೋತ್ಸವ ಐದು ದಿನಗಳ ಕಾಲ ಮೈಸೂರು ಭಾಗದಲ್ಲಿ ಒಂದು ರೀತಿಯ ಹಬ್ಬದ ವಾತಾವರಣ ನಿರ್ಮಾಣವಾಗುತ್ತದೆ. ಜ. 15 ರಿಂದ ಆರಂಭವಾಗುವ ಜಾತ್ರೆಯಲ್ಲಿ ಮೊದಲ ದಿನ ಉತ್ಸವ ಮೂರ್ತಿ ಗದ್ದುಗೆಗೆ ಬಿಜಯಂಗೈಸುವುದು. ಜ. 16ರರಂದು ಹಾಲುರವಿ ಉತ್ಸವ, ಶ್ರೀ ಸೋಮೇಶ್ವರಸ್ವಾಮಿ ಕುಂಬಾಭಿಷೇಕ, ಶ್ರೀ ವೀರಭದ್ರೇಶ್ವರ ಕೊಂಡೋತ್ಸವ, ಜ. 17 ರಂದು ರಥೋತ್ಸವ, 18 ರಂದು ಮಹದೇಶ್ವರ ಕೊಂಡೊತ್ಸವ, ಲಕ್ಷ ದೀಪೋತ್ಸವ, ಶ್ರೀ ಮಹದೇಶ್ವರ ಮುತ್ತಿನ ಪಲ್ಲಕ್ಕಿ ಉತ್ಸವ, ಜ. 19 ರಂದು ತೆಪ್ಪೋತ್ಸವ, ಜ. 20 ರಂದು ಅನ್ನ ಬ್ರಹ್ಮೋತ್ಸವದೊಂದಿಗೆ ಜಾತ್ರೆ ಸಂಪನ್ನಗೊಳ್ಳಲಿದೆ. ಈ ಐದು ದಿನಗಳ ಕಾಲ ಸಾಮೂಹಿಕ ವಿವಾಹ, ಭಜನಾ ಮೇಳ, ಕುಸ್ತಿ ಪಂದ್ಯಾವಳಿ, ರಂಗೋಲಿ, ಸೋಬಾನೆ ಪದ, ಗಾಳಿಪಟ, ಚಿತ್ರಕಲೆ, ರಾಗಿ ಬೀಸುವ ಸ್ಪರ್ಧೆ, ವಸ್ತುಪ್ರದರ್ಶನ, ಪೌರಾಣ ಕ ನಾಟಕಗಳ ಪ್ರದರ್ಶನ ನಡೆಯುತ್ತಿದೆ. ಈ ಐದು ದಿನಗಳ ಜಾತ್ರೆ ಮಹೋ ತ್ಸವದಲ್ಲಿ ಪ್ರಸಾದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಭಕ್ತರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕೆಂದು ಕೋರುತ್ತೇವೆ. ಈ ಸಂದರ್ಭದಲ್ಲಿ ಕಾಡಾ ಅಧ್ಯಕ್ಷ ಪಿ. ಮರಿಸ್ವಾಮಿ, ಮಹಾಸಭಾ ಅಧ್ಯಕ್ಷ ಮೂಡ್ಲಪುರು ನಂದೀಶ್, ನಗರಸಭೆ ಸದಸ್ಯೆ ಲಕ್ಷ್ಮಮ್ಮ, ಚಾಮುಲ್ ನಿರ್ದೇಶಕ ಎಚ್.ಎಸ್. ಬಸವರಾಜು, ಡಾ. ಪರಮೇಶ್ವರಪ್ಪ, ಹೊಸೂರು ನಟೇಶ್, ಕಿಲಗೆರೆ ಚಂದ್ರಶೇಖರ್, ಡಿ. ನಾಗೇಂದ್ರ, ಬಿ.ಕೆ. ರವಿಕುಮಾರ್, ಆಲೂರು ಮಲ್ಲು, ಕೆ. ವೀರಭದ್ರಸ್ವಾಮಿ, ಮಲ್ಲಿಕಾರ್ಜುಸ್ವಾಮಿ, ಲಿಂಗರಾಜು ಆರ್.ಎಸ್. ಪ್ರಾಂಶುಪಾಲರಾದ ಮಹದೇವಸ್ವಾಮಿ, ದೇವರಾಜು, ಎಚ್.ಎಂ. ಉಮೇಶ್ ಅಧ್ಯಾಪಕರು, ಶಿಕ್ಷಕರು ಸಿಬ್ಬಂದಿಗಳು ಭಾಗವಹಿಸಿದ್ದರು.

# ಒಕ್ಕಲಿಗ ಉದ್ಯಮಿ ವತಿಯಿಂದ ಬೆಂಗಳೂರಿನಲ್ಲಿ ಎಫ್ಸಿ ಎಕ್ಸ್‌ಪೋ

## ಒಕ್ಕಲಿಗ ಉದ್ಯಮಿಗಳನ್ನು ಪ್ರೋತ್ಸಾಹಿಸಿ ಬೆಳೆಸುವ ಉದ್ದೇಶದ ಸಂಘಟನೆ | ಜ.9ರಿಂದ ಮೂರು ದಿನಗಳ ಕಾಲ ಎಕ್ಸ್‌ಪೋ



ರಾಮನಗರ: ಒಕ್ಕಲಿಗ ಉದ್ಯಮಿಗಳನ್ನು ಪ್ರೋತ್ಸಾಹಿಸಿ ಬೆಳೆಸುವ ನಿಟ್ಟಿನಲ್ಲಿ ಸಮುದಾಯದ ಪ್ರಗತಿಪರರು ಪರಸ್ಪರ ಸಹಕಾರದೊಂದಿಗೆ ಯುವ ಜನತೆಯನ್ನು ಉದ್ದಿಮೆದಾರರನ್ನಾಗಿ ಮಾಡುವ ಉದ್ದೇಶದೊಂದಿಗೆ ಫಸ್ಟ್ ಸರ್ಕಲ್ ಉದ್ಯಮಿ ಒಕ್ಕಲಿಗ ಎಂಬ ಸಂಘಟನೆ ಅಸ್ತಿತ್ವಕ್ಕೆ ಬಂದಿದೆ ಎಂದು ಸಂಘಟನೆಯ ಜಿಲ್ಲಾಧ್ಯಕ್ಷ ಪೂರ್ಣಚಂದ್ರ ಕೀಕರ್ ತಿಳಿಸಿದರು.

ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ಇದೇ ಜ.9,10ಮತ್ತು 11 ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿರುವ ಗಾಯತ್ರಿ ಗ್ರಾಂಡ್‌ಮತ್ತು ಗಾಯತ್ರಿ ವೃಕ್ಷದಲ್ಲಿ ಪಸ್ಟ್ ಸರ್ಕಲ್ ಉದ್ಯಮಿ ಒಕ್ಕಲಿಗ ಸಮಾವೇಶ–2026 ಅನ್ನು ಹಮ್ಮಿಕೊಳ್ಳಲಾಗಿದೆ. ಎಕ್ಸ್‌ಪೋದಲ್ಲಿ ಕೃಷಿ, ಆರೋಗ್ಯ, ಶಿಕ್ಷಣ, ಆಹಾರ–ಆತಿಥ್ಯ, ಮಾಧ್ಯಮ–ಮನರಂಜನೆ, ಸ್ಟಾರ್ಟ್ ಅಪರ್ ಮುಂತಾದ ವಿಷಯಗಳ ಬಗ್ಗೆ ಸುದೀರ್ಘ ಚರ್ಚೆ–ಸಂವಹನ ಏರ್ಪಡಿಸಿದೆ ಎಂದರು. ಐಆರ್‌ಎಸ್ ಅಧಿಕಾರಿಯಾದ ಜಯರಾಮ್ ರಾಯಪುರ ಮತ್ತು ಪಸ್ಟ್ ಸರ್ಕಲ್ ಅಧ್ಯಕ್ಷರ ಮಾರ್ಗದರ್ಶನದಲ್ಲಿ ಕಳೆದ ನಾಲ್ಕು ವ?ರ್ಗಗಳಲ್ಲಿ ಎಫ್ಸಿ ಸಂಘಟನೆಯು ಒಕ್ಕಲಿಗ ಉದ್ಯಮಿಗಳನ್ನು ಸಂಘಟಿಸುವ, ಪ್ರೋತ್ಸಾಹಿಸುವ ಹಾಗೂ ಯಶಸ್ವಿಗೊಳಿಸುವ ಸಲುವಾಗಿ ಕಾರ್ಯನಿರ್ವಹಿಸುತ್ತಿದೆ. ಒಕ್ಕಲಿಗರು ಕೇವಲ ಗ್ರಾಹಕರಾಗಿ ಉಳಿಯದೆ ಉತ್ಪಾದಕರು ಮತ್ತು ಮಾರಾಟಗಾರರನ್ನಾಗಿ ಬೆಳೆಸಿ ನವೋದ್ಯಮದಲ್ಲಿ ತೊಡಗಿಸುವ ದೃಷ್ಟಿಯಿಂದ ರಾಜ್ಯದಾದ್ಯಂತ ಕಾರ್ಯನಿರ್ವಹಿಸುತ್ತಿದೆ.

### ಇದು ನಾಲ್ಕನೇ ಎಕ್ಸ್‌ಪೋ

ಈಗಾಗಲೇ ಬೆಂಗಳೂರಿನಲ್ಲಿ ಮೂರು ಎಕ್ಸ್ಪೋಗಳನ್ನು ಹಾಗೂ ಮೈಸೂರು ಮತ್ತು ಕೋಲಾರದಲ್ಲಿ ಎರಡು ಹೂಡಿಕೆದಾರರ ಸಮ್ಮೇಳನ ಗಳನ್ನು ಯಶಸ್ವಿಯಾಗಿ ಮಾಡಿದ್ದು, ಇದೀಗ ನಾಲ್ಕನೇ ಆವೃತ್ತಿಯಲ್ಲಿ ಬೆಂಗಳೂರಿನ ಅರಮನೆ ಮೈದಾನದಲ್ಲಿ ಪಸ್ಟ್ ಸರ್ಕಲ್ ಉದ್ಯಮಿ ಒಕ್ಕಲಿಗ ಎಕ್ಸ್ಪೋ ನಡೆಯುತ್ತಿದೆ ಎಂದರು.

### ಎಕ್ಸ್‌ಪೋದಲ್ಲಿ ರೈತರು ಭಾಗವಹಿಸಲಿದ್ದಾರೆ

ಫರ್ಸ್ಟ್ ಸರ್ಕಲ್ ಉದ್ಯಮಿ ಒಕ್ಕಲಿಗ ಎಕ್ಸ್ಪೋನಲ್ಲಿ ಈಗಾಗಲೇ 200 ಕ್ಕೂ ಹೆಚ್ಚು ಪ್ರದರ್ಶನಕಾರರು ತಮ್ಮ ಮಳಿಗೆಗಳನ್ನು ತೆರೆಯಲು ಸ್ಥಳಾವಕಾಶ ಪಡೆದಿದ್ದಾರೆ. ಈ ಬಾರಿ ರೈತ ಸಂತೆಯಲ್ಲಿ 50 ಕ್ಕೂ ಹೆಚ್ಚು ರೈತರು ತಮ್ಮ ಪದಾರ್ಥಗಳನ್ನು ಮಾರಾಟ ಮಾಡಲಿದ್ದಾರೆ. ಮೂರು ದಿನಗಳು ನಡೆಯುವ ಸಮಾವೇಶಕ್ಕೆ ಎಲ್ಲ ಸ್ವಾಮೀಜಿಗಳು, ಉಪಮುಖ್ಯ ಮಂತ್ರಿಗಳು, ಎಲ್ಲ ಒಕ್ಕಲಿಗ ಮಂತ್ರಿಗಳು, ಮಾಜಿ ಮಂತ್ರಿಗಳು ಸಂಸದರು, ಮಾಜಿ ಸಂಸದರು, ಶಾಸಕರು, ಮಾಜಿ ಶಾಸಕರು, ಒಕ್ಕಲಿಗರ ಸಂಘದ ಎಲ್ಲ ಪದಾಧಿಕಾರಿ ಗಳು ಮತ್ತು ಎಲ್ಲ ಹಿರಿ–ಕಿರಿಯ ಒಕ್ಕಲಿಗ ಉದ್ಯಮಿಗಳು ಆಗಮಿಸಲಿದ್ದಾರೆ. ಕರ್ನಾಟಕದಾದ್ಯಂತ ಎಲ್ಲ ಜಿಲ್ಲೆಗಳಿಂದ ಒಟ್ಟು 60 ಸಾವಿರಕ್ಕೂ ಹೆಚ್ಚು ಉದ್ಯಮಿಗಳು ಆಗಮಿಸುವ ನಿರೀಕ್ಷೆಯಿದೆ ಎಂದು ಹೇಳಿದರು.

### ಒಕ್ಕಲಿಗರು ಉತ್ಪಾದಕರು, ಮಾರಾಟಗಾರರಾಗಬೇಕು

ಜಿಲ್ಲಾ ಸಂಚಾಲಕ ಪ್ರಸನ್ನ ಮಾತನಾಡಿ ಒಕ್ಕಲಿಗರು ಕೇವಲ ಗ್ರಾಹಕರಾಗಿ ಉಳಿಯದೆ, ಉತ್ಪಾದಕರು ಮತ್ತು ಮರಾರಾಟಗಾರರನ್ನಾಗಿ ಬೆಳೆಸುವುದು ಈ ಸಂಘಟನೆಯ ಉದ್ದೇಶ ಎಂದರು. ಉದ್ಯಮದಲ್ಲಿ ಮುಂದುವರೆದರೆ ಬೇರೆಲ್ಲ ಸಮುದಾಯಗಳು ಕೂಡಾ ಉದ್ಯಮದಲ್ಲಿ ಮುಂದೆ ಬಂದು ಕನ್ನಡಿಗರೆಲ್ಲರು ಉದ್ಯಮಶೀಲರಾಗಲು ಈ ಸಮಾವೇಶವು ನಾಂದಿಯಾಗಲಿದೆ. ಈ ಸಮಾವೇಶಕ್ಕೆ ಎಲ್ಲರೂ ಬಂದು ಭಾಗವಹಿಸಿ ಕನ್ನಡ ನಾಡನ್ನು ಉದ್ಯಮಶೀಲ ನಾಡಾಗುವಲ್ಲಿ ಮುಂದಿನ ಹೆಜ್ಜೆ ಇಡಲು ಪ್ರೋತ್ಸಾಹಿಸಲು ನೆರವಾಗಲಿದೆ, ಎಲ್ಲಾ ವರ್ಗದ ಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಎಕ್ಸಪೋನ ಪ್ರಯೋಜನ ಪಡೆಯ ಬೇಕು ಎಂದು ಮನವಿ ಮಾಡಿದರು. ಸುದ್ದಿಗೋಷ್ಟಿಯಲ್ಲಿ ಜಿಲ್ಲಾ ಖಜಾಂಚಿ ಬಿ.ರಾಮಕೃ?, ಪಸ್ಟ್ ಸರ್ಕಲ್‌ನ ಜಗದೀಶ್, ತಿಮ್ಮಸಂದ್ರಮಲ್ಲೇಶ್ ಇದ್ದರು.

# ನಾಳೆ ಲಯನ್ಸ್ ಸಮ್ಮೇಳನ

ಮೈಸೂರು: ಅಂತರರಾಷ್ಟ್ರೀಯ ಲಯನ್ಸ್ ಸಂಸ್ಥೆ ಜಿಲ್ಲೆ 317 ಜಿ ಪ್ರಾಂತ್ಯ – 8ರ ಪ್ರಾಂತೀಯ ಸಮ್ಮೇಳನವನ್ನು ಜ.10ರಂದು ಬೆಳಿಗ್ಗೆ 8.30ಕ್ಕೆ ನಗರದ ಅಕ್ಕಮಹಾದೇವಿ ರಸ್ತೆಯ ಬಿಲ್ಡರ್ಸ್ ಅಸೋಸಿಯೇಷನ್ ಸಭಾಂಗಣದಲ್ಲಿ ಪ್ರಾಂತೀಯ ಸಮ್ಮೇಳನ ಆಯೋಜಿಸಲಾಗಿದೆ ಎಂದು ಕಾರ್ಯಕ್ರಮ ಮುಖ್ಯ ಸಲಹೆಗಾರ ಎನ್.ಕೃಷ್ಣೇಗೌಡ ತಿಳಿಸಿದರು.

ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಿಗ್ಗೆ 10.30ಕ್ಕೆ ವೇದಿಕೆ ಕಾರ್ಯಕ್ರಮ ನಡೆಯಲಿದೆ. ನಿಸ್ವಾರ್ಥ ಸೇವಾ ಮನೋಭಾವ ಶೀರ್ಷಿಕೆಯಲ್ಲಿ ಸಮ್ಮೇಳನ ಆಯೋಜಿಸಲಾಗಿದ್ದು, ಮುಕ್ತ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಸಹ ಪ್ರಾಧ್ಯಾಪಕಿ ಜ್ಯೋತಿ ಶಂಕರ್ ಪ್ರಧಾನ ಭಾಷಣ ಮಾಡುವರು. ಆಶಾಕಿರಣ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಎಸ್.ಎನ್. ಮೋತಿ ಅತಿಥಿಯಾಗಿ ಭಾಗವಹಿಸುವರು ಎಂದು ಮಾಹಿತಿ ನೀಡಿದರು. ಪ್ರಾಂತೀಯ ಅಧ್ಯಕ್ಷ ಎಸ್.ವಾಸುಕಿ ಮಾತನಾಡಿ, ಸಮ್ಮೇಳನದಲ್ಲಿ ಸುಮಾರು ?3 ಲಕ್ಷ ಮೌಲ್ಯದ ಸೇವಾ ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಗುತ್ತದೆ ಎಂದರು. ಸುದ್ದಿಗೋಷ್ಠಿಯಲ್ಲಿ ಆತಿಥೇಯ ಸಮಿತಿ ಅಧ್ಯಕ್ಷ ಎನ್.ಆರ್.ಮಹಾದೇವ್, ಕಾರ್ಯದರ್ಶಿ ಸುರೇಶ್ ಕುಮಾರ್, ಜಿಲ್ಲಾ ಸಮಿತಿ ಹೆಚ್ಚುವರಿ ಕಾರ್ಯದರ್ಶಿ ನವೀನ್ ಸುಬ್ರಹ್ಮಣ್ಯಂ ಇದ್ದರು.

# ಇಂದು ತಿಮಕಾಪುರ ಅವರ ಕೃತಿಗಳ ಬಿಡುಗಡೆ

ಮೈಸೂರು: ವಸಂತ ಕುಮಾರ್ ತಿಮಕಾಪುರ ಅಭಿನಂದನಾ ಸಮಿತಿ ಹಾಗೂ ವಿಸ್ಮಯ ಬುಕ್ ಹೌಸ್ ಸಹಕಾರದಲ್ಲಿ ಜ.9ರಂದು ಸಂಜೆ 4ಕ್ಕೆ ನಗರದ ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ವಿಜ್ಞಾನ ವಸಂತ ಕುಮಾರ್ ತಿಮಕಾಪುರ ರಚನೆಯ ಕೃತಿಗಳ ಬಿಡುಗಡೆ ಮತ್ತು ವಸಂತೋತ್ಸವ ಸಮಾರಂಭ ಆಯೋಜಿಸಲಾಗಿದೆ ಎಂದು ಸಮಿತಿ ಅಧ್ಯಕ್ಷೆ ಪ್ರೊ.ಎಚ್.ಎಂ.ವಸಂತಮ್ಮ ತಿಳಿಸಿದರು.

ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ತಿಮಕಾಪುರ ಅವರ ಜನ್ಮದಿನವೂ ಹೌದು. ಸಾಮಾಜಿಕ ಉದ್ಯಮಿಯಾಗಿ ರೈತ ಪರ ಸಂಶೋಧನೆ, ಉತ್ಪನ್ನಗಳನ್ನು ಪರಿಚಯಿಸಿದ ಅವರನ್ನು ಗೌರವಿಸುವುದು ಮುಖ್ಯ ಉದ್ದೇಶ. ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಕಾರ್ಯಕ್ರಮ ಉದ್ಘಾಟಿಸುವರು ಎಂದರು.

ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ವಿಶ್ವ ಒಕ್ಕಲಿಗ ಮಠದ ನಿಶ್ಚಲಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ವಸಂತ ವಿಹಾರ ಕೃತಿಯನ್ನು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ಪ್ಲಾಂಟ್ ಡಾಕ್ಟರ್ ಕೃತಿಯನ್ನು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಅಧ್ಯಕ್ಷ ಪ್ರೊ.ಎ.ಎಚ್. ರಾಜಾಸಾಬ್ ಉದ್ಘಾಟಿಸುವರು. ಕೃತಿಗಳ ಕುರಿತು ಪ್ರೊ.ಸಿ.ನಾಗಣ್ಣ, ಪ್ರೊ. ಎಸ್.ಉಮೇಶ್ ಮಾತನಾಡುವರು. ಇಕ್ರಿಸ್ಯಾಟ್ ನಿವೃತ್ತ ಉಪ ಮಹಾನಿರ್ದೇಶಕ ಸಿ.ಎಲ್.ಲಕ್ಷ್ಮೀಪತಿ ಗೌಡ ಅಧ್ಯಕ್ಷತೆ ವಹಿಸುವರು ಎಂದರು. ಸುದ್ದಿಗೋಷ್ಠಿಯಲ್ಲಿ ಅಭಿನಂದನಾ ಸಮಿತಿ ಖಜಾಂಚಿ ಸ್ವಾಮಿನಾಥನ್, ಸದಸ್ಯರಾದ ವಸಂತ್ ಕುಮಾರ್, ಸೋಮಶೇಖರ್, ಉಮೇಶ್, ಹರೀಶ್, ಪ್ರಸಾದ್ ಇದ್ದರು.

# ಪ್ರತಿ ಗುರುವಾರ ಮಕ್ಕಳಿಗೆ ಭಗವದ್ಗೀತೆ ತರಬೇತಿ

ಮೈಸೂರು: ಇಲ್ಲಿನ ವಿಜಯನಗರ 3ನೇ ಹಂತದ ವೇದಶ್ರೀ ಫೌಂಡೇಶನ್‌ನಿಂದ ವಿಜಯನಗರದ ಭಾರತೀಯ ವಿದ್ಯಾ ಭವನ ವಿದ್ಯಾಲಯದಲ್ಲಿ 7ರಿಂದ 13 ವರ್ಷದ ಮಕ್ಕಳಿಗಾಗಿ ಪ್ರತಿ ಗುರುವಾರ ಸಂಜೆ 4.30ರಿಂದ 6ರವರೆಗೆ ಭಗವದ್ಗೀತೆ ತರಗತಿ ಆಯೋಜಿಸಲಾಗಿದೆ ಎಂದು ಸಂಸ್ಥೆಯ ವಿಕಾಸ್ ತಿಳಿಸಿದರು.

ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಕ್ಕಳನ್ನು ಭವಿಷ್ಯದ ಜವಾಬ್ದಾರಿಯುತ ನಾಗರಿಕರಾಗಲು ಸಹಕರಿಸುವುದು ಮತ್ತು ಮೌಲ್ಯಾಧಾರಿತ ವಿಷಯಗಳನ್ನು ಅವರಿಗೆ ತಿಳಿಸುವುದು ತರಗತಿಯ ಉದ್ದೇಶ. ಭಗವದ್ಗೀತೆ ಆಧಾರಿತ ಕ್ರೀಡೆ, ಗುಂಪು ಚಟುವಟಿಕೆ, ಕಥೆ ಮುಂತಾದವನ್ನು ಹಮ್ಮಿಕೊಳ್ಳಲಾಗುವುದು. ಮಾಸಿಕ ?300 ಶುಲ್ಕವಿದೆ. ಜ.8ರಂದು ಸಂಜೆ 7ಕ್ಕೆ ಉದ್ಘಾಟನೆ ನಡೆಯಲಿದೆ. ಮಾಹಿತಿಗೆ ಮೊ.ಸಂ.82176 41068 ಸಂಪರ್ಕಿಸಬಹುದು.

ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಲೋಹಿತ್ ಹಾಜರಿದ್ದರು.

# ವಿಶ್ವಕರ್ಮ ಪತ್ತಿನ ಸಹಕಾರ ಸಂಘದ ನೂತನ ಸದಸ್ಯತ್ವ ನೊಂದಣಿಗೆ ಮನವಿ

ಮೈಸೂರು: ನಗರದ ವಿಶ್ವಕರ್ಮ ಪತ್ತಿನ ಸಹಕಾರ ಸಂಘದಲ್ಲಿ ನೂತನ ಸದಸ್ಯತ್ವ ಅಭಿಯಾನ ಹಮ್ಮಿಕೊಂಡಿದ್ದು ತಾಲ್ಲೂಕು ಹಾಗೂ ನಗರದಲ್ಲಿ ವಾಸವಿರುವ ವಿಶ್ವಕರ್ಮ ಸಮುದಾಯದವರು ನೋಂದಣಿ ಮಾಡಿಕೊಳ್ಳುವ ಮೂಲಕ ಅಭಿವೃದ್ಧಿಗೊಳಿಸಬೇಕು ಎಂದು ಸಂಘದ ಅಧ್ಯಕ್ಷ ಜಯರಾಮಾಚಾರ್ ತಿಳಿಸಿದರು.

ಇಲ್ಲಿನ ಪತ್ರಕರ್ತರ ಭವನದಲ್ಲಿ ಬುಧವಾರ ಸಂಘದ ನೂತನ ಕ್ಯಾಲೆಂಡರ್ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಸಂಘದಲ್ಲಿ ಉಳಿತಾಯ, ಎಫ್.ಡಿ, ಪಿಗ್ಮಿ ಮುಂತಾದ ಖಾತೆಗಳನ್ನು ತೆರೆಯಬಹುದು. ಯಶಸ್ವಿನಿ ಆರೋಗ್ಯ ಸೌಲಭ್ಯವೂ ದೊರೆಯುತ್ತದೆ ಎಂದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ವಿಶ್ವಕರ್ಮ ಸಂಘದ ಅಧ್ಯಕ್ಷ ರಿಷಿ ವಿಶ್ವಕರ್ಮ, ಪತ್ತಿನ ಸಂಘದ ನಿರ್ದೇಶಕರಾದ ಕೆ.ಪಿ.ಶ್ರೀಕಾಂತ ಆಚಾರ್, ಪಿ.ಬಸವರಾಜು, ಆರ್.ಮಂಜುನಾಥ್, ಎ.ಎನ್.ನರಸಿಂಹಚಾರ್, ಜಿಲ್ಲಾ ವಿಶ್ವಕರ್ಮ ಸರ್ಕಾರಿ ನೌಕರರ ಸಂಘದ ಗೌರವಾಧ್ಯಕ್ಷ ಲೋಹಿತೇಶಚಾರ್, ಕಾಂಗ್ರೆಸ್ ಕುಶಲಕರ್ಮಿಗಳ ನಗರ ಘಟಕದ ಅಧ್ಯಕ್ಷ ಟಿಂಬರ್ ನಾಗರಾಜು, ಜಿಲ್ಲಾ ಘಟಕದ ಅಧ್ಯಕ್ಷ ಬನ್ನೂರು ನಾಗರಾಜಾಚಾರ್, ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ನಗರ ಘಟಕದ ಅಧ್ಯಕ್ಷ ಪಿ. ಸಿದ್ದಾಚಾರ್ ಇದ್ದರು.

# “ಹನುಮ ಭಕ್ತರ ಮೇಲೆ ಸುಳ್ಳು ಕೇಸು ದಾಖಲಿಸಿದಾಕ್ಷಣ ನಾವು ಹೆದರುವುದಿಲ್ಲ”

## ಮಾಜಿ ಶಾಸಕ ಸಿ ಎಸ್ ನಿರಂಜನ್ ಕುಮಾರ್ ಗುಡುಗು



ಗುಂಡ್ಲುಪೇಟೆ: ಶಾಂತಿಯುತವಾಗಿ ಹನುಮ ಜಯಂತಿ ಆಚರಿಸುತ್ತಿದ್ದ ಹನುಮ ಭಕ್ತರ ಮೇಲೆ ಶಾಸಕರ ಕುಮ್ಮಕ್ಕಿನಿಂದ ಪೊಲೀಸರು ಸುಳ್ಳು ಕೇಸು ದಾಖಲಿಸಿದಾಕ್ಷಣ ನಾವು ಹೆದರುವುದಿಲ್ಲ ಎಲ್ಲಾ ಹಿಂದೂಗಳು ಒಗ್ಗಟ್ಟಾಗಿ ಹಬ್ಬ ಆಚರುಸುವುದನ್ನು ಸಹಿಸದೇ ಇಂತಹ ಬೆದರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಗುಂಡ್ಲುಪೇಟೆ ವಿಧಾನಸಭೆಯ ಮಾಜಿ ಶಾಸಕರಾದ ಸಿ ಎಸ್ ನಿರಂಜನ್ ಕುಮಾರ್ ರವರು ಹೇಳಿದರು.

ಗುಂಡ್ಲುಪೇಟೆ ಪಟ್ಟಣದಲ್ಲಿ ಡಿ.27 ರಂದು ನಡೆದ ಹನುಮ ಜಯಂತಿ ಆಚರಣೆ ಸಮಿತಿ ಸದಸ್ಯರ ವಿರುದ್ಧ ಪೊಲೀಸ್ ಇಲಾಖೆ ದುರುದ್ದೇಶ ಪೂರಕವಾಗಿ ಎಫ್ ಐ ಆರ್ ದಾಖಲಿಸಿದೆ ಎಂದು ಆರೋಪಿಸಿ ಪಟ್ಟಣದ ಹನುಮ ಮಂದಿರ ದಿಂದ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

ಬಿಜೆಪಿ ಜಿಲ್ಲಾಧ್ಯಕ್ಷ ಸಿ ಎಸ್ ನಿರಂಜನ್ ಕುಮಾರ್ ನೇತೃತ್ವದಲ್ಲಿ ನಡೆದ ಪ್ರತಿಭಟನೆ ಹನುಮ ಮಂದಿರದಿಂದ ಸಾಗಿ ಹಳೆ ಪ್ರವಾಸಿ ಮಂದಿರ ವೃತ್ತದಿಂದ ಬಸವೇಶ್ವರ ಸರ್ಕಲ್ ಬಳಿ ತೆರಳಿದಾಗ ಪೊಲೀಸರು ಹಾಗೂ ಪ್ರತಿಭಟನ ಕಾರರ ನಡುವೆ ವಾಗ್ವಾದ ನಡೆಯಿತು ನಂತರ ಕೆಎಸ್ ಆರ್ ಟಿಸಿ ಸರ್ಕಲ್ ನಿಂದ ತಾಲ್ಲೂಕು ಕಚೇರಿ ಬಳಿ ತೆರಳಿ ಪ್ರತಿಭಟನೆ ನಡೆಸಿದರು. ಮರವಣಿಗೆಯುದ್ದಕ್ಕೂ “ಹಿಂದೂ ವಿರೋಧಿ ಶಾಸಕರಿಗೆ ದಿಕ್ಕಾರ” ಹನುಮನ ವಿರೋಧಿಗಳಿ ದಿಕ್ಕಾರ” , “ಸುಳ್ಳು ಕೇಸುಗಳನ್ನು ಈ ಕೂಡಲೇ ಹಿಂಪಡೆಯಬೇಕು” ಮುಂತಾದ ಘೋಷಣೆಗಳನ್ನು ಪ್ರತಿಭಟನಾಕಾರರು ಕೂಗುತ್ತಿದ್ದರು.

ನಂತರ ಮಾತನಾಡಿದ ನಿರಂಜನ್ ಕುಮಾರ್ ಕಾನೂನು ಉಲ್ಲಂಘನೆ ಮಾಡದೆ ಹನುಮ ಜಯಂತಿ ಆಚರಣೆ ಮಾಡಿದ ಭಕ್ತಾದಿಗಳ ವಿರುದ್ಧ ಮೊಕದ್ದಮೆ ದಾಖಲಿಸಿರುವುದು ಖಂಡನೀಯ, ಸರ್ಕಾರ ಹಿಂದೂ ಹಬ್ಬ ಆಚರಣೆಗಳನ್ನ ಹತ್ತಿಕ್ಕಲು ಹೊರಟಿದೆ ಇದು ಖಂಡನೀಯ, ಇಂತಹ ಹಿಂದೂ ವಿರೋಧಿ ಸರ್ಕಾರ ಮತ್ತೆಲ್ಲೂ ಇಲ್ಲ ಎಂದು ಕಿಡಿಕಾರಿದರು. ಹಿಂದುಳಿದ ಮುಖ್ಯಮಂತ್ರಿ ಎಂದು ತಮಗೆ ತಾವೇ ಪಟ್ಟಕಟ್ಟಿಕೊಂಡಿರುವವರು ಹಬ್ಬ ಆಚರಣೆಗಳನ್ನ ಹತ್ತಿಕ್ಕಲು ಹೊರಟಿದೆ, ಸಮುದಾಯಗಳ ನಡುವೆ ಬೆಂಕಿ ಹಚ್ಚುವ ಕೆಲಸವನ್ನ ಸರ್ಕಾರ ಹಾಗೂ ಶಾಸಕರು ಮಾಡಲೊರಟಿರುವುದು ಸರಿಯಲ್ಲ ಎಂದರು.

27 ರಂದು ನಡೆದ ಹನುಮ ಜಯಂತಿಯನ್ನ ಸರ್ವ ಸಮುದಾಯದ ಒಟ್ಟಿಗೆ ನಡೆಸಿದ್ದನ್ನ ಸಹಿಸಲಾಗದೆ ಸಮಿತಿಯವರ ಮೇಲೆ ಕೇಸ್ ದಾಖಲಿಸಿ ಬೆದರಿಸುವ ಕುತಂತ್ರಕ್ಕೆ ಸರ್ಕಾರ ಹಾಗೂ ಶಾಸಕರು ಮುಂದಾಗಿದ್ದಾರೆ 25 ವರ್ಷ ಆಡಳಿತ ಮಾಡಿದವರಿಗೆ ಹೆದರಿಲ್ಲಇನ್ನು ನೀವು ಕೂಸು ಮೊದಲ ಬಾರಿ ಗೆದ್ದಿದ್ದೀರ ನಿಮಗೆ ಹೆದರುತ್ತೆವೆಯೇ ಎಂದರು.

ಹನುಮ ಜಯಂತಿ ಯಶಕಂಡಿದ್ದು ಕೆಲವರಿಗೆ ಸಹಿಸಲಾಗದ ಬೆಂಕಿಗೆ ಕಾರಣವಾಗಿದೆ, ಅಂದಿನ ಕಾರ್ಯಕ್ರಮಕ್ಕೆ ಶಾಸಕರನ್ನೂ ಸಹ ಆಹ್ವಾನಿಸಲಾಗಿತ್ತು ಆದರೆ ಕೆಲವರು ಬಾರದೆ ವಿರೋಧಿ ನೀತಿ ಅನುಸರಿಸಿದರು, ಇವರು ಬಾರದಿದ್ದರೂ ಪರವಾಗಿಲ್ಲ ಆದ್ರೆ ತಮ್ಮ ಪಕ್ಷದ ಕಾರ್ಯಕರ್ತರನ್ನ ಆಚರಣೆಗೆ ತೆರಳದಂತೆ ತಡೆದಿದ್ದು ನಿಮ್ಮ ಒಳಮರ್ಮವನ್ನ ತೋರಿಸುತ್ತಿದೆ, ಕ್ಷೇತ್ರದಲ್ಲಿ ಜನರನ್ನ ಹೆದರಿಸುವ ಕೆಲಸಕ್ಕೆ ಮುಂದಾಗಿರುವ ನೀವು ದಬ್ಬಾಳಿಕೆ ನಡೆಸುತ್ತಿರುವುದು ಜನತೆಗೆ ಗೊತ್ತಿದೆ, ಹನುಮ ಭಕ್ತರ ಮೇಲೆ ದೌರ್ಜನ್ಯ ನಿಮ್ಮ ಅಸಹಾಯಕತೆ ತೋರಿಸುತ್ತಿದೆ, ನೀವು ಕೇಸ್ ಮಾಡಿಸಿದ ತಕ್ಷಣ ಇಂತಹ ಆಚರಣೆ ನಿಲ್ಲುವುದಿಲ್ಲ ಮುಂದಿನ ದಿನಗಳಲ್ಲಿ ಆಚರಣೆ ಇನ್ನೂ ವಿಜೃಂಭಣೆಯಿಂದ ಸಾಗಲಿದೆ ಎಂದರು. ಈ ಪ್ರತಿಭಟನೆಯಲ್ಲಿ ಬಿಜೆಪಿ ಮುಖಂಡರುಗಳಾದ ಜಿ ಡಿ ಎಲ್ ಸುರೇಶ್, ತಾಲ್ಲೋಕು ಮಂಡಲ ಅಧ್ಯಕ್ಷ ಮಹದೇವಪ್ರಸಾದ್, ಬಿಜೆಪಿ ಜಿಲ್ಲಾ ಉಪಾಧ್ಯಕ್ಷರಾದ ಎನ್ ಮಲ್ಲೇಶ್, ಜಿಲ್ಲಾ ಉಪಾಧ್ಯಕ್ಷರಾದ ಕನ್ನೇಗಾಲ ಸ್ವಾಮಿ, ಡಾ.ನವೀನ್ ಮೌರ್ಯ, ಪ್ರಣಯ್, ಕಮರಳ್ಳಿ ರವಿ, ದಲಿತ ಮುಖಂಡ ಅಗತಗೌಡನಹಳ್ಳಿ ಬಸವರಾಜು, ಕಬ್ಬಹಳ್ಳಿ ರೇವಣ್ಣ, ಎಸ್ ಸಿ ಮೋರ್ಚಾದ ತಾ. ಅಧ್ಯಕ್ಷ ನಾಗುಸ್ವಾಮಿ, ಶ್ಯಾನಾಡ್ರಹಳ್ಳಿ ರಾಜೇಂದ್ರ, ಹುಂಡೀಪುರ ಮಂಜು, ಸುನೀಲ್, ನಮೋಮಂಜು, ಪುರಸಭೆ ಸದಸ್ಯ ನಾಗೇಶ್, ಬೇರಂಬಾಡಿ ಮಲ್ಲಿಕ್, ಹುಂಡೀಪುರ ನಂಜಪ್ಪ, ಮಹೇಂದ್ರ, ವೀರನಪುರ ಶಿವು, ಸಾಗರ್ ಹಾಗೂ ನೂರಾರು ಮಂದಿ ಕಾರ್ಯಕರ್ತರು ಹಾಜರಿದ್ದರು.

# ನೂತನ ಎಸ್ಪಿಗೆ ಸನ್ಮಾನ



ಚಾಮರಾಜನಗರ, ನೂತನ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಿದ ಮುತ್ತುರಾಜು ಅವರನ್ನು

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಶಾಖೆ ವತಿಯಿಂದ ಸನ್ಮಾನಿಸಲಾಯಿತು.

ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಯಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷೆ ಸಿ. ಎನ್.ರೇಣುಕಾದೇವಿ ಅವರ ನೇತೃತ್ವದಲ್ಲಿ ನೂತನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅವರನ್ನು ಭೇಟಿ ಮಾಡಿ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ, ಖಜಾಂಚಿ ಶಿವಕುಮಾರಯ್ಯ, ಕಾರ್ಯಾಧ್ಯಕ್ಷ ಮಹಾದೇವಸ್ವಾಮಿ, ಹಿರಿಯ ಉಪಾಧ್ಯಕ್ಷ ಎಂ.ಡಿ.ಮಹದೇವಯ್ಯ, ಸಂಘದ ಪದಾಧಿಕಾರಿಗಳಾದ ಮಹೇಶ್ ಹೆಚ್.ಡಿ, ಸಿ.ಕೆ.ವಾಸು ಇತರರು ಹಾಜರಿದ್ದರು.

# ಕಾಮಗಾರಿಗಳಿಗೆ ಶಾಸಕ ಹೆಚ್ ಟಿ ಮಂಜು ಗುದ್ದಲಿ ಪೂಜೆ



ಕೆ.ಆರ್.ಪೇಟೆ.ತಾಲ್ಲೂಕಿನ ಮೊಸಳೇಕೊಪ್ಪಲು ಗ್ರಾಮದಲ್ಲಿ ಸಣ್ಣ ನೀರಾವರಿ ಇಲಾಖೆಯ ಸುಮಾರು ಎರಡೂವರೆ ಕೋಟಿ ರೂಪಾಯಿಗಳ ವಿಶೇಷ ಅನುಧಾನದಲ್ಲಿ ಕೈಗೊಳ್ಳಲಾಗುತ್ತಿರುವ ರಸ್ತೆ ಅಭಿವೃದ್ಧಿ ಮತ್ತು ಬಾಕ್ಸ್ ಚರಂಡಿ ನಿರ್ಮಾಣ ಹಾಗೂ ಹೈಮಾಸ್ಕ್ ಬೀದಿ ದೀಪ ನಿರ್ಮಾಣ ಕಾಮಗಾರಿಗಳಿಗೆ ಶಾಸಕ ಹೆಚ್.ಟಿ.ಮಂಜು ಅವರು ಭೂಮಿ ಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಶಾಸಕರು ರಾಜ್ಯ ಸರ್ಕಾರವು ಮಂಡ್ಯ ಜಿಲ್ಲೆಯ ಏಳು ತಾಲ್ಲೂಕುಗಳ ಪೈಕಿ 6 ತಾಲ್ಲೂಕುಗಳ ಶಾಸಕರ ಪ್ರದೇಶಾಭಿವೃದ್ಧಿ ಅನುಧಾನ ತಲಾ 50ಕೋಟಿ ಜೊತೆಗೆ ವಿಶೇಷ ಅನುಧಾನವಾಗಿ ನೂರಾರು ಕೋಟಿ ರೂಪಾಯಿಗಳನ್ನು ನೀಡಿದೆ. ಆದರೆ ಜೆಡಿಎಸ್ ಶಾಸಕ ಎಂಬ ಕಾರಣಕ್ಕಾಗಿ ಕೆ.ಆರ್.ಪೇಟೆ ಕ್ಷೇತ್ರಕ್ಕೆ ಕೇವಲ 25ಕೋಟಿ ಅನುಧಾನ ನೀಡಿ ತಾರತಮ್ಯ ಮಾಡುತ್ತಿದೆ ಇದರಿಂದ ನಮ್ಮ ಕೆ.ಆರ್.ಪೇಟೆ ತಾಲ್ಲೂಕಿನ ಅಭಿವೃದ್ಧಿಗೆ ಹಿನ್ನೆಡೆಯಾಗುತ್ತಿದೆ. ಜಿಲ್ಲೆಯ ಅಭಿವೃದ್ಧಿಗೆ ಬಗ್ಗೆ ಚರ್ಚೆ ನಡೆಸುವ ಸಭೆಗೆ ಮಂಡ್ಯ ಜಿಲ್ಲೆಯ ಶಾಸಕರ ಸಭೆ ಕರೆಯುವಾಗ ಮುಖ್ಯಮಂತ್ರಿಗಳು ಕಾಂಗ್ರೆಸ್ ಪಕ್ಷದ 6ಮಂದಿ ಶಾಸಕರನ್ನು ಮಾತ್ರ ಸಭೆಗೆ ಕರೆಯುತ್ತಾರೆ. ನನಗೆ ಆಹ್ವಾನವನ್ನೇ ನೀಡುವುದಿಲ್ಲ ಎಂದು ಶಾಸಕ ಹೆಚ್.ಟಿ.ಮಂಜು ಸಿಎಂ ವಿರುದ್ದ ಬೇಸರ ವ್ಯಕ್ತಪಡಿಸಿದರು. ಮುಂದಿನ ದಿನಗಳಲ್ಲಿ ಮಾನ್ಯ ಮುಖ್ಯಮಂತ್ರಿಗಳು ಈ ತಾರತಮ್ಯವನ್ನು ಹೋಗಲಾಡಿಸಿ ಎಲ್ಲಾ ತಾಲ್ಲೂಕುಗಳಂತೆ ನಮ್ಮ ತಾಲ್ಲೂಕಿಗೂ ಅವರಷ್ಟೇ ಅನುಧಾನ ನೀಡಿ ಅಭಿವೃದ್ಧಿಗೆ ಸಹಕಾರ ನೀಡಬೇಕು. ನಮ್ಮ ಕುಮಾರಣ್ಣ, ಯಡಿಯೂರಪ್ಪ ಅವರು ಸಿಎಂ ಆಗಿದ್ದಾಗ ಆಡಳಿತ–ವಿರೋಧ ಪಕ್ಷದ ಎಲ್ಲಾ ಶಾಸಕರಿಗೂ ಒಂದೇ ರೀತಿಯ ಅನುಧಾನ ನೀಡುತ್ತಿದ್ದರು. ಯಾವುದೇ ತಾರತಮ್ಯ ಮಾಡುತ್ತಿರಲಿಲ್ಲ. ಆದರೆ ಈಗಿನ ಕಾಂಗ್ರೆಸ್ ಸರ್ಕಾರದ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ತಮ್ಮ ಪಕ್ಷದ ಘೋಷಿತ ಐದು ಗ್ಯಾರಂಟಿ ಯೋಜನೆಗಳಿಗೆ ಅನುಧಾನವನ್ನು ಹೆಚ್ಚು ಬಳಕೆ ಮಾಡುತ್ತಿದ್ದಾರೆ. ಇದರಿಂದ ರಾಜ್ಯದ ಮೂಲಭೂತ ಸೌಲಭ್ಯಗಳಿಗೆ ಅನುಧಾನದ ಕೊರತೆ ಎದುರಾಗಿದೆ. ಇದು ನಮ್ಮ ಕೆ.ಆರ್.ಪೇಟೆ ತಾಲ್ಲೂಕಿಗೂ ತುಂಬಾ ಹೊಡೆತ ಬಿದ್ದಿದೆ. ಮುಂದಿನ ದಿನಗಳಲ್ಲಿಯಾದರೂ ಮೂಲಭೂತ ಸೌಲಭ್ಯಗಳಾದ ಕೃಷಿ, ನೀರಾವರಿ, ರಸ್ತೆ, ಸೇತುವೆಗಳ ಅಭಿವೃದ್ಧಿ, ಕೆರೆ ಕಟ್ಟೆಗಳ ಅಭಿವೃದ್ಧಿಗೆ ಅನುಧಾನ ನೀಡಲಿ ಹಾಗೂ ಗ್ರಾಮೀಣ ಜನರಿಗೆ ಆಶ್ರಯ ಮನೆಗಳನ್ನು ನೀಡಲಿ ಎಂದು ಶಾಸಕ ಎಚ್.ಟಿ.ಮಂಜು ಸರ್ಕಾರವನ್ನು ಒತ್ತಾಯ ಮಾಡಿದರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

# ಸಂಘದ ಕಾರ್ಯದರ್ಶಿ ನೇಮಕ



ರಾಮನಗರ: ಬೆಂಗಳೂರು ದಕ್ಷಿಣ ಜಿಲ್ಲೆ (ರಾಮನಗರ) ಸರ್ಕಾರಿ ನೌಕರರ ಸಂಘದ ಜಿಲ್ಲಾ ಕಾರ್ಯದರ್ಶಿಯಾಗಿ ಸತೀಶ್‌ಪಾದ್ರಳ್ಳಿ ನೇಮಕವಾಗಿದ್ದಾರೆ ಎಂದು ಸಂಘದ ಜಿಲ್ಲಾಧ್ಯಕ್ಷ ಕೆ.ಸತೀಷ್ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸತೀಶ್ ಪಾದ್ರಳ್ಳಿ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಅವರಿಗೆ ನೂತನ ಅಧಿಕಾರವಹಿಸಲಾಗಿದೆ. ಎಲ್ಲರನ್ನು ವಿಶ್ವಾಸಕ್ಕೆ ಪಡೆದು, ಸೂಕ್ತ ಮಾರ್ಗದರ್ಶನದಲ್ಲಿ ವಹಿಸಿರುವ ಜವಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಲಿದ್ದಾರೆ ಎಂಬ ವಿಶ್ವಾಸವಿದೆ ಎಂದು ಶುಭ ಕೋರಿದರು.

ನೂತನ ಜಿಲ್ಲಾ ಕಾರ್ಯದರ್ಶಿ ಸತೀಶ್‌ಪಾದ್ರಳ್ಳಿ ಮಾತನಾಡಿ ನನ್ನ ಮೇಲೆ ವಿಶ್ವಾಸವಿಟ್ಟು ಹಿಂದಿನಿಂದಲೂ ನನಗೆ ಬೆನ್ನು ತಟ್ಟಿ ಮಾರ್ಗದರ್ಶನ ನೀಡುತ್ತಿರುವ ಸಂಘದ ಕ್ರಿಯಾಶೀಲ ಜಿಲ್ಲಾಧ್ಯಕ್ಷರಾದ ಕೆ.ಸತೀಶ್, ಖಜಾಂಚಿ ಜಗದೀಶ್, ರಾಜ್ಯ ಪರಿಷತ್ ಸದಸ್ಯ ಎಂ.ವಿ.ಯತೀಶ್, ಕಾನೂನು ಸಲಹೆಗಾರ ಶಿವಸ್ವಾಮಿ, ಹಿರಿಯ ಉಪಾಧ್ಯಕ್ಷ ಸಿ.ಭೈರಪ್ಪ, ಕಾರ್ಯಾಧ್ಯಕ್ಷ ಎಂ.ಪ್ರದೀಪ್, ಉಪಾಧ್ಯಕ್ಷ ದೀಪಕ್‌ಕುಮಾರ್ ಹಾಗೂ ಎಲ್ಲ ತಾಲ್ಲೂಕು ಅಧ್ಯಕ್ಷರುಗಳಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ನನಗೆ ನೀಡಿರುವ ಹೊಸ ಜವಾಬ್ದಾರಿ ಅಧಿಕಾರವಲ್ಲ, ಬದಲಿಗೆ ಅದು ಸೇವೆ ಮತ್ತು ಜವಬ್ದಾರಿ ಎಂದು ಭಾವಿಸಿದ್ದೇನೆ. ಎಲ್ಲರ ಸಹಕಾರದೊಂದಿಗೆ ಈ ಜವಾಬ್ದಾರಿಯನ್ನು ನಿಭಾಯಿಸುವುದಾಗಿ ತಿಳಿಸಿದ ಅವರು ಜಿಲ್ಲಾ ಸಂಘದ ಎಲ್ಲ ನಿರ್ದೇಶಕರಿಗೆ, ಸಮಸ್ತ ನೌಕರ ಬಳಗ ಹಾಗೂ ಶಿಕ್ಷಕರ ಬಳಗಕ್ಕೆ ಧನ್ಯವಾದಗಳನ್ನು ಸಲ್ಲಿಸಿದರು. ಈ ವೇಳೆ ಸಂಘದ ಜಿಲ್ಲಾಧ್ಯಕ್ಷ ಕೆ.ಸತೀಶ್, ಸಿಡಿಪಿಓ ಸುರೇಂದ್ರ, ಬೆಸ್ಕಾಂ ಇಂಜಿನಿಯರ್ ಪ್ರಭಾಕರ್, ನಿರ್ದೇಶಕ ರಾಘವೇಂದ್ರ, ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಅಧ್ಯಕ್ಷ ವಿಜಯ್‌ಕುಮಾರ್, ಉಪಾಧ್ಯಕ್ಷರಾದ ದರ್ಶನ್, ಶಂಕರಾನಂದ, ಜೈಪ್ರಕಾಶ್, ಎನ್.ಜೆ.ರಮೇಶ್, ಗಣೇಶ್, ಮೋಹನ್, ಪ್ರಭು, ಗಿರೀಶ್ ಸೇರಿದಂತೆ ಪದಾಧಿಕಾರಿಗಳು, ಸ್ನೇಹಿತರು ಸತೀಶ್‌ಪಾದ್ರಳ್ಳಿ ಅವರನ್ನು ಅಭಿನಂದಿಸಿ ಶುಭ ಕೋರಿದರು.

## 2 ಸಾವಿರಕ್ಕೂ ಹೆಚ್ಚು ಭೋವಿ ಕುಟುಂಬಗಳಿದ್ದರೂ 1,200 ಕುಟುಂಬಗಳನ್ನು ಮಾತ್ರ ನಿವೇಶನ

# ಅಂಕಿ ಅಂಶಗಳನ್ನು ಸರಿಪಡಿಸದಿದ್ದರೆ ಹೋರಾಟ



ಹನೂರು: ತಾಲೂಕಿನಲ್ಲಿ 2 ಸಾವಿರಕ್ಕೂ ಹೆಚ್ಚು ಭೋವಿ ಕುಟುಂಬಗಳಿದ್ದರೂ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ನಡೆದ ಸಮೀಕ್ಷೆಯಲ್ಲಿ 1,200 ಕುಟುಂಬಗಳನ್ನು ಮಾತ್ರ ನೋಂದಣಿ ಮಾಡಿದ್ದಾರೆ. ಮುಂದಿನ ದಿನಗಳಲ್ಲಿ ಅಂಕಿ ಅಂಶಗಳನ್ನು ಸರಿಪಡಿಸದಿದ್ದರೆ ಹೋರಾಟದ ಹಾದಿ ಹಿಡಿಯಬೇಕಾಗುತ್ತದೆ ಎಂದು ಭೋವಿ ಸಮಾಜದ ಜಿಲ್ಲಾ ಗೌರವಾಧ್ಯಕ್ಷ ಚಂಗವಾಡಿ ರಾಜು ತಿಳಿಸಿದರು.

ಹನೂರು ಪಟ್ಟಣದ ಶ್ರೀ ಮಲೆ ಮಹದೇಶ್ವರ ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಭೋವಿ ಸಮಾಜದ ಮುಖಂಡರ ಸಭೆಯಲ್ಲಿ ಅವರು ಮಾತನಾಡಿದರು.

ಹನೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹಲವು ಗ್ರಾಮಗಳಲ್ಲಿ ನಮ್ಮ ಸಮುದಾಯದವರು 2300 ಕುಟುಂಬಗಳಿವೆ. ಆದರೆ ಸಮೀಕ್ಷೆ ಸಂದರ್ಭದಲ್ಲಿ ಅಧಿಕಾರಿಗಳು ಸರಿಯಾಗಿ ಸಮೀಕ್ಷೆ ಮಾಡದೆ ಇರುವುದರಿಂದ ಅಂಕಿ ಅಂಶಗಳು ತಪ್ಪಾಗಿವೆ. ಇದರಿಂದ ರಾಜ್ಯ ಸರ್ಕಾರದಿಂದ ನಮ್ಮ ಸಮುದಾಯಗಳಿಗೆ ಸವಲತ್ತುಗಳು ಮರೀಚಿಕೆಯಾಗಲಿದೆ. ಈ ಹಿನ್ನೆಲೆ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಅಂಕಿ ಅಂಶಗಳನ್ನು ಸರಿಪಡಿಸಿ ನಮ್ಮ ಸಮುದಾಯಕ್ಕೆ ನ್ಯಾಯ ಒದಗಿಸಿ ಕೊಡಬೇಕು ಎಂದು ಆಗ್ರಹಿಸಿದರು .

ಹನೂರು ತಾಲೂಕಿನ ಮಂಗಲ, ಒಡೆಯರಪಾಳ್ಯ, ಹುತ್ತೂರು, ವೈಶಂಪಾಳ್ಯ ಹನೂರು ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಹುಲ್ಲೇಪುರ ಗ್ರಾಮಗಳಲ್ಲಿ ಇರುವ ನಮ್ಮ ಸಮುದಾಯದವರ ಪಟ್ಟಿಯನ್ನೇ ಕೈ ಬಿಟ್ಟಿದ್ದಾರೆ. ಒಂದು ತಾಲೂಕು ವ್ಯಾಪ್ತಿಯಲ್ಲಿಯೇ ಒಂದು ಸಾವಿರಕ್ಕೂ ಹೆಚ್ಚು ಕುಟುಂಬಗಳ ಸಮೀಕ್ಷೆಯನ್ನು ಕೈಬಿಟ್ಟಿದ್ದಾರೆ. ಜಿಲ್ಲೆಯಲ್ಲಿ ನಮ್ಮ ಅಂಕಿ ಅಂಶಗಳ ಪ್ರಕಾರ 6ರಿಂದ 7 ಸಾವಿರ ಕುಟುಂಬಗಳಿವೆ. ಆದರೆ ಸರ್ಕಾರದ ಅಂಕಿ ಅಂಶಗಳಲ್ಲಿ ಇದು ದಾಖಲಾಗಿಲ್ಲ ಒಟ್ಟಾರೆ ರಾಜ್ಯಾದ್ಯಂತ ನಮ್ಮ ಸಮುದಾಯದವರನ್ನು ಯಾವ ರೀತಿ ಸಮೀಕ್ಷೆ ಮಾಡಿದ್ದಾರೆ ಎಂಬುದೇ ಅರ್ಥವಾಗುತ್ತಿಲ್ಲ ಎಂದು ಪ್ರಶ್ನಿಸಿದರು. ಚಾಮರಾಜನಗರ ಜಿಲ್ಲೆಗೆ ಭೋವಿ ಅಭಿವೃದ್ಧಿ ನಿಗಮದ ರಾಜ್ಯಾಧ್ಯಕ್ಷ ರಾಮಪ್ಪ ರವರು ಶುಕ್ರವಾರ ಭೇಟಿ ನೀಡುತ್ತಿದ್ದಾರೆ. ಈ ಸಂದರ್ಭದಲ್ಲಿ ನಮ್ಮ ಸಮುದಾಯಕ್ಕೆ ಆಗಿರುವ ಅನ್ಯಾಯವನ್ನು ಅವರ ಗಮನಕ್ಕೆ ತಂದು ಸರಿಪಡಿಸೋಣ ಒಂದೊಮ್ಮೆ ಸಮಸ್ಯೆ ಬಗೆಹರಿಸದಿದ್ದರೆ ಮುಂದಿನ ಹೋರಾಟವನ್ನು ಯಾವ ರೀತಿ ಮಾಡಬೇಕು ಎಂಬುದರ ಬಗ್ಗೆ ಮುಂದಿನ ದಿನಗಳಲ್ಲಿ ಸಭೆ ಕರೆದು ತೀರ್ಮಾನಿಸೋಣ ಎಂದು ಸಮಾಜದ ಮುಖಂಡರು ತೀರ್ಮಾನಿಸಿದರು. ಇದೆ ವೇಳೆ ಭೋವಿ ಸಮಾಜದ ತಾಲೂಕು ಅಧ್ಯಕ್ಷ ರವಿಚಂದ್ರ, ಜಿಲ್ಲಾ ಕಾರ್ಯದರ್ಶಿ ಶಶಿಕುಮಾರ್,ಮುಖಂಡರುಗಳಾದ ವಿಲೇಜ್ ಕೃಷ್ಣ, ರಾಘವೇಂದ್ರ, ಚಂದ್ರ, ಕೃಷ್ಣ, ದೊಮ್ಮನಗದ್ದೆ ವೆಂಕಟಸ್ವಾಮಿ, ಹನೂರು ಚಿನ್ನರಾಜು,ಅಜ್ಜಿಪುರ ರಾಜೇಂದ್ರ, ಪೂಜಾರಿ ಭೋವಿ ದೊಡ್ಡಿ ಸಾಂಗ್ಲ್ಯ ಸೇರಿದಂತೆ ಇನ್ನಿತರರು ಹಾಜರಿದ್ದರು

# ಸರ್ಕಾರಿ ಶಾಲೆ ಮಕ್ಕಳಿಗೂ ನವೋದಯದಲ್ಲಿ ಶಿಕ್ಷಣ ದೊರೆಯಲಿ: ಜಿಲ್ಲಾಧಿಕಾರಿ ಕುಮಾರ್



**ಮಂಡ್ಯ:** 5 ನೇ ತರಗತಿಯೊಳಗೆ ವ್ಯಾಸಂಗ ಮಾಡುತ್ತಿರುವ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ನವೋದಯ ಪರೀಕ್ಷೆಯನ್ನು ಹೇಗೆ ಎದುರಿಸಬೇಕು ಎಂಬುದರ ಕುರಿತಾಗಿ ಪೂರ್ವ ಸಿದ್ಧತಾ ತರಬೇತಿ ನೀಡಿ. ಸರ್ಕಾರಿ ಶಾಲೆಯ ಮಕ್ಕಳನ್ನು ನವೋದಯ ಪರೀಕ್ಷೆಯ ಬರೆಯಲು ನೊಂದಾಯಿಸಿ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ಅವರು ಹೇಳಿದರು.

ಗುರುವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ನವೋದಯ ವಿದ್ಯಾಲಯ ನಿರ್ವಹಣಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಜಿಲ್ಲೆಯ ಶಿವಾರಗುಡ್ಡದಲ್ಲಿರುವ ನವೋದಯ ವಿದ್ಯಾಲಯ ಸಂಸ್ಥೆಯು 30 ಎಕ್ಕರೆ ವಿಸ್ತರಣೆದಲ್ಲಿದ್ದು ಪ್ರಸ್ತುತ 522 ವಿದ್ಯಾರ್ಥಿಗಳು ಸದರಿ ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ ಎಂದು ಹೇಳಿದರು.

ಸದರಿ ಸಂಸ್ಥೆಯಲ್ಲಿ 51 ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಮಕ್ಕಳಿಗೆ ಅಭ್ಯಾಸ ಮಾಡಲು ಸುಸಜ್ಜಿತವಾದ ಕಟ್ಟಡವಿದೆ. ಪಠ್ಯೇತರ ಚಟುವಟಿಕೆಗಳಿಗೂ ವಿಶೇಷವಾಗಿ ಒತ್ತು ನೀಡುತ್ತಾ ನವೋದಯ ಸಂಸ್ಥೆ ಬಂದಿದೆ. ಸದರಿ ಸಂಸ್ಥೆಯಲ್ಲಿ ಕೆಲ ವಿದ್ಯುತ್ ಕಂಬಗಳು ಹಳೆಯದಾಗಿದ್ದು ಸುರಕ್ಷತೆಯ ದೃಷ್ಟಿಯಿಂದ ಸಂಬಂಧಪಟ್ಟ ಅಧಿಕಾರಿಗಳು ಹಳೆಯ ಕಂಬಗಳನ್ನು ದುರಸ್ತಿ ಮಾಡಬೇಕು ಎಂದು ತಿಳಿಸಿದರು.

ಸದರಿ ಸಂಸ್ಥೆಯ ಪಕ್ಕದಲ್ಲಿಯೇ ಕಾವೇರಿ ನಾಲೆ ಹರಿಯುತ್ತಿದ್ದು ನಾಲೆಯ ಸುತ್ತ ಗಿಡ ಗಂಟೆಗಳು ಬೆಳೆದಿರುವುದರಿಂದ ಸೊಳ್ಳೆ ಮತ್ತು ಕೀಟಾಣುಗಳ ಸಂಖ್ಯೆ ಹೆಚ್ಚಳವಾಗುತ್ತಿದೆ ಮಕ್ಕಳ ಆರೋಗ್ಯ ದೃಷ್ಟಿಯಿಂದ ಸಂಬಂಧಪಟ್ಟ ಅಧಿಕಾರಿಗಳು ಶೀಘ್ರವಾಗಿ ನಾಲೆಯ ಸುತ್ತಲೂ ಬೆಳೆದಿರುವ ಗಿಡ ಗಂಟೆಗಳನ್ನು ತೆರವುಗೊಳಿಸಿ ಹಾಗೂ ಸದರಿ ಸಂಸ್ಥೆಯ ಡ್ರೈನೇಜ್ ಸಿಸ್ಟಮ್ ಹಳೆಯದಾಗಿದೆ ಶೀಘ್ರವೇ ದುರಸ್ಥಿ ಮಾಡಲು ಕ್ರಮ ಕೈಗೊಳ್ಳಿ ಎಂದು ಸೂಚಿಸಿದರು.

ನವೋದಯ ವಿದ್ಯಾಸಂಸ್ಥೆಯ ಆವರಣಗಳಲ್ಲಿ ಕಟ್ಟಡಗಳಿಗೆ ಹೊಂದಿಕೊಂಡಂತೆ ಗಿಡಮರಗಳು ಬೆಳೆದಿದ್ದು ಈಗಾಗಲೇ ಒಣಗಿರುವ ಮರಗಳನ್ನು ತೆರವು ಮಾಡಲು ಸೂಕ್ತ ಕ್ರಮ ಕೈಗೊಳ್ಳಿ. ಕಳೆದ ಕೆಲವು ವರ್ಷಗಳಿಗೆ ಹೋಲಿಸಿದರೆ ಜಿಲ್ಲೆಯಲ್ಲಿ ನವೋದಯ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಳವಾಗಿದೆ. ಸರ್ಕಾರಿ ಶಾಲೆಗಳ ಶಿಕ್ಷಕರು ವಿಶೇಷ ಮುತುವರ್ಜಿ ವಹಿಸಿ ಸರ್ಕಾರಿ ಶಾಲೆಯ ಮಕ್ಕಳು ನವೋದಯ ಪರೀಕ್ಷೆಯಲ್ಲಿ ನೋಂದಣಿಯಾಗುವಂತೆ ಕ್ರಮ ವಹಿಸಿ ಎಂದು ಹೇಳಿದರು.

ಶಿಕ್ಷಣದಲ್ಲಿ ಹಿಂದುಳಿದ ಹಾಗೂ ಮಾನಸಿಕವಾಗಿ ಕುಗ್ಗಿರುವ ಮಕ್ಕಳ ಪಟ್ಟಿಸಿದ್ಧಪಡಿಸಿ ನವೋದಯ ವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಲ್ಲಿ ಮಾನಸಿಕ ಕುಗ್ಗಿರುವ ಹಾಗೂ ಕಲಿಕೆಯಲ್ಲಿ ಹಿಂದುಳಿದ ಮಕ್ಕಳ ಪಟ್ಟಿಯನ್ನು ಸಿದ್ಧಪಡಿಸಿ ಸದರಿ ಮಕ್ಕಳಿಗೆ ಆತ್ಮಸ್ಥೈರ್ಯ ತುಂಬುವ ಕೆಲಸವಾಗಬೇಕು ಹಾಗೂ ಮನೋವೈದ್ಯರಿಂದ ಆಪ್ತ ಸಮಾಲೋಚನೆಯನ್ನು ನಡೆಸಿ ಎಂದು ಹೇಳಿದರು.

## ಆಕ್ಷೇಪಣೆಗೆ ಅವಕಾಶ

**ತುಮಕೂರು:** ಪ್ರವಾಸೋದ್ಯಮ ಇಲಾಖೆ ವತಿಯಿಂದ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಸಣ್ಣ ಉದ್ಯಮಿದಾರರನ್ನು ಉತ್ತೇಜಿಸಲು ಒಂದು ತಿಂಗಳ ಕೌಶಲ್ಯಾಭಿವೃದ್ಧಿ ತರಬೇತಿ ಹಾಗೂ ತರಬೇತಿ ಪಡೆದ ಅಭ್ಯರ್ಥಿಗಳಿಗೆ ಮೊಬೈಲ್ ಕ್ಯಾಂಟಿನ್ ನಡೆಸಲು 5ಲಕ್ಷ ರೂ.ಗಳ ಸಹಾಯಧನ ನೀಡುವ ಸಂಬಂಧ ಈಗಾಗಲೇ ಅರ್ಜಿ ಆಹ್ವಾನಿಸಲಾಗಿದ್ದು, ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಲಾಗಿದೆ.

ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಅಧ್ಯಕ್ಷರೂ ಆದ ಜಿಲ್ಲಾಧಿಕಾರಿಗಳು ಸ್ವೀಕೃತವಾದ ಅರ್ಜಿ ಮತ್ತು ದಾಖಲೆಗಳನ್ನು ಪರಿಶೀಲಿಸಿ ಅನುಮೋದಿಸಿದ್ದು, ಅನುಮೋದನೆಗೊಂಡಿರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳ ಅರ್ಹತಾ ಪಟ್ಟಿ, ಅನರ್ಹತಾ ಪಟ್ಟಿ, ಅಂತಿಮ ಪಟ್ಟಿ ಹಾಗೂ ಕಾಯ್ದಿರಿಸಿರುವ ಪಟ್ಟಿಯನ್ನು ಪ್ರವಾಸೋದ್ಯಮ ಇಲಾಖೆಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ.

ಈ ಪಟ್ಟಿಗೆ ಸಂಬಂಧಿಸಿದಂತೆ ಅಭ್ಯರ್ಥಿಗಳು ಏನಾದರೂ ಆಕ್ಷೇಪಣೆಗಳಿದ್ದಲ್ಲಿ ಜನವರಿ 13ರೊಳಗಾಗಿ ಸಹಾಯಕ ನಿರ್ದೇಶಕರ ಕಚೇರಿ, ಪ್ರವಾಸೋದ್ಯಮ ಇಲಾಖೆ, ತುಮಕೂರು ಇವರಿಗೆ ಲಿಖಿತ ರೂಪದಲ್ಲಿ ಸಲ್ಲಿಸಬಹುದಾಗಿದೆ ಎಂದು ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಗಣರಾಜ್ಯೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಿ

# ಗಣರಾಜ್ಯೋತ್ಸವದ ಆಚರಣೆ ಪ್ರತಿಯೊಬ್ಬರ ಜವಾಬ್ದಾರಿ, ಸಡಗರ ಮತ್ತು ಸಂಭ್ರಮದಿಂದ ಆಚರಿಸಿ: ಜಿಲ್ಲಾಧಿಕಾರಿ ಡಾ ಕುಮಾರ

**ಮಂಡ್ಯ :** ಜನವರಿ 26 ರಂದು ನಡೆಯಲಿರುವ ಗಣರಾಜ್ಯೋತ್ಸವ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಸಡಗರ ಮತ್ತು ಸಂಭ್ರಮದಿಂದ ಆಚರಿಸಿ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ಅವರು ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಗುರುವಾರ ಜನವರಿ 26 ರ ಗಣರಾಜ್ಯೋತ್ಸವ ಆಚರಣೆ ಕುರಿತು ಆಯೋಜಿಸಲಾಗಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಗಣರಾಜ್ಯೋತ್ಸವ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರ್ವಹಿಸಲು ಈಗಾಗಲೇ ವಿವಿಧ ಸಮಿತಿಗಳನ್ನು ರಚಿಸಲಾಗಿದೆ ಎಂದು ತಿಳಿಸಿದರು.

ಶಿಷ್ಟಾಚಾರದಂತೆ ಆಹ್ವಾನ ಪತ್ರಿಕೆಯನ್ನು ಮುದ್ರಿಸಿ ಸಂಬಂಧಪಟ್ಟ ಎಲ್ಲರಿಗೂ ಆಹ್ವಾನ ಪತ್ರಿಕೆಯನ್ನು ತಲುಪಿಸಬೇಕು. ಜಿಲ್ಲಾಧಿಕಾರಿಗಳ ಕಚೇರಿಗೆ ಸರ್ಕಾರಿ ಕಚೇರಿಗಳು ಶಾಲಾ-ಕಾಲೇಜುಗಳು ಹಾಗೂ ಕೋ ಆಪರೇಟಿವ್ ಸೊಸೈಟಿಗಳಲ್ಲಿ ಕಡ್ಡಾಯವಾಗಿ ಗಣರಾಜ್ಯೋತ್ಸವವನ್ನು ಆಯೋಜನೆ ಮಾಡಬೇಕು. ಸರ್ಕಾರಿ ಇಲಾಖೆಯ ಕಚೇರಿಗಳನ್ನು ದೀಪಾಲಂಕಾರ ಹಾಗೂ ತೋರಣಗಳಿಂದ ಶೃಂಗರಗೊಳಿಸಬೇಕು ಎಂದು ಹೇಳಿದರು.

**30 ತಂಡಗಳಿಂದ ಪಥ ಸಂಚಲನ**

ಗಣರಾಜ್ಯೋತ್ಸವದ ಅಂಗವಾಗಿ 30 ತಂಡಗಳಿಂದ ಪಥ ಸಂಚಲನವನ್ನು ನಡೆಸಲಾಗುವುದು. ಸಂಬಂಧಪಟ್ಟ ಅಧಿಕಾರಿಗಳು ಪಥ ಸಂಚಲನವನ್ನು ಅಚ್ಚುಕಟ್ಟಾಗಿ ಆಯೋಜನೆ ಮಾಡಿ. ಕಾರ್ಯಕ್ರಮಕ್ಕೂ ಮುಂದೆ ಮೂರು ದಿನಗಳ ಕಾಲ ಪ್ರಾಯೋಗಿಕ ಪಥ ಸಂಚಲನ ಮಾಡಿ. ಪ್ರಾಯೋಗಿಕ ಪಥ ಸಂಚಲನ ಮಾಡುವ ಸಂದರ್ಭದಲ್ಲಿ ಪಥ ಸಂಚಲನಗಾರರಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿ ಎಂದು ಹೇಳಿದರು.



ವೇದಿಕೆಯನ್ನು ಶಿಷ್ಟಾಚಾರ ದಂತೆ ನಿರ್ಮಿಸಿ ಹಾಗೂ ವೇದಿಕೆಗೆ ಸಂಬಂಧಪಟ್ಟಂತೆ ಸೌಂಡ್ ಸಿಸ್ಟಮ್, ಆಸನಗಳ ವ್ಯವಸ್ಥೆ ಹಾಗೂ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಿ. ಗಣರಾಜ್ಯೋತ್ಸವ ನಡೆಯುವ ದಿನದಂದು ಹೆಚ್ಚಿನ ಸಂಖ್ಯೆಯಲ್ಲಿ ಜನರು ಭಾಗವಹಿಸುವುದರಿಂದ ಮೈದಾನದಲ್ಲಿ ಧೂಳು ಹೇಳದಂತೆ ಸೂಕ್ತ ಕ್ರಮ ಕೈಗೊಳ್ಳಿ ಎಂದು ತಿಳಿಸಿದರು.

ಗಣರಾಜ್ಯೋತ್ಸವದ ದಿನದಂದು ಕಾರ್ಯಕ್ರಮಕ್ಕೆ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳು ಕಡ್ಡಾಯವಾಗಿ ಹಾಜರಿರಬೇಕು. ಅಧಿಕಾರಿಗಳಿಗೆ ನೀಡಿದ ಜವಾಬ್ದಾರಿಗಳನ್ನು ಅಚ್ಚುಕಟ್ಟಾಗಿ ಜವಾಬ್ದಾರಿಯುತವಾಗಿ ನಿರ್ವಹಿಸಬೇಕು ಎಂದು ಸೂಚಿಸಿದರು.

ಅಪರ ಜಿಲ್ಲಾಧಿಕಾರಿ ಬಿ.ಸಿ ಶಿವಾನಂದ ಮೂರ್ತಿ ಅವರು ಮಾತನಾಡಿ ಸದರಿ ವರ್ಷದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಶಾಲೆಗಳಿಂದ ಮೂರು ಹಾಗೂ ಕಾಲೇಜುಗಳಿಂದ ಒಂದು ಸಾಂಸ್ಕೃತಿಕ ಕಾರ್ಯಕ್ರಮವನ್ನು ನೀಡಲಾಗುವುದು ಮತ್ತು ವಿದ್ಯಾರ್ಥಿಗಳಿಂದ ನಾಡಗೀತೆ ಮತ್ತು ರಾಷ್ಟ್ರಗೀತೆ ಗಾಯನವನ್ನು ಪ್ರಸ್ತುತ ಪಡಿಸಲಾಗುವುದು. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಯಾವುದೇ ಲೋಪ ಉಂಟಾಗದಂತೆ ಸೂಕ್ತ ಕ್ರಮ ವಹಿಸಿ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಎಂದು ಹೇಳಿದರು.

ಸಭೆಯಲ್ಲಿ ಉಪವಿಭಾಗಾಧಿಕಾರಿ ಶಿವಮೂರ್ತಿ, ಪಶುಪಾಲನ ಇಲಾಖೆ ಉಪ ನಿರ್ದೇಶಕ ಶಿವಲಿಂಗಯ್ಯ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಕೆ.ಮೋಹನ್, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಸಿ ಚೆಲುವಯ್ಯ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಶ್ರೀನಿವಾಸ್, ಕ್ಷೇತ್ರ ಶಿಕ್ಷಣಾಧಿಕಾರಿ ಮಹದೇವ್ ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

## ಪರಿಶಿಷ್ಟರ ಆರ್ಥಿಕ ಅಭಿವೃದ್ಧಿ ಉತ್ತೇಜನ ಸಹಾಯ ಧನ ವಿತರಣೆ

# ಆಹಾರದ ಗುಣಮಟ್ಟ ಕಾಪಾಡಿಕೊಂಡು ಬ್ರಾಂಡಿಂಗ್ ಹೆಚ್ಚಿಸಿ: ಡಾ.ಕುಮಾರ



**ಮಂಡ್ಯ:** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಸಮುದಾಯದ ಜನರನ್ನು ಆರ್ಥಿಕವಾಗಿ ಸ್ವಾವಲಂಬಿಗಳಾಗಿಸಲು ಹಾಗೂ ಪ್ರವಾಸೋದ್ಯಮವನ್ನು ಉತ್ತೇಜಿಸಲು ಪ್ರವಾಸೋದ್ಯಮ ಇಲಾಖೆ ವತಿಯಿಂದ ಮೊಬೈಲ್ ಕ್ಯಾಂಟೀನ್ ಖರೀದಿಗೆ ರೂ 5 ಲಕ್ಷಗಳ ಸಹಾಯಧನ ವಿತರಣೆ ಯೋಜನೆಯನ್ನು ಜಾರಿಗೊಳಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ ಕುಮಾರ ಅವರು ಹೇಳಿದರು.

ಗುರುವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ 2024-25ನೇ ಸಾಲಿನ ಪ್ರವಾಸೋದ್ಯಮ ಇಲಾಖೆಯ ಮೊಬೈಲ್ ಕ್ಯಾಂಟೀನ್ ಖರೀದಿಗಾಗಿ ರೂ 5 ಲಕ್ಷಗಳ ಸಹಾಯಧನ ವಿತರಣೆ ಯೋಜನೆಯಡಿ ಸಹಾಯಧನ ಬಿಡುಗಡೆ ಮಾಡುವ ಸಂಬಂಧ ಆಯೋಜಿಸಲಾಗಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಸದರಿ ಯೋಜನೆಯಡಿ ಜಿಲ್ಲೆಯಲ್ಲಿ 11 ಜನರಿಗೆ ಸಹಾಯಧನವನ್ನು ನೀಡುವ ಗುರಿಯನ್ನು ಹೊಂದಲಾಗಿದೆ. ಈಗಾಗಲೇ ಆರು ಫಲಾನುಭವಿಗಳಿಗೆ ಮೊಬೈಲ್ ಕ್ಯಾಂಟೀನ್ ಯೋಜನೆಯಡಿ ಒಂದು ತಿಂಗಳ ಉದ್ಯಮಶೀಲತಾ ತರಬೇತಿಯನ್ನು ನೀಡಲಾಗಿದೆ ಎಂದರು.

ಉಳಿದ ಐದು ಜನರಿಗೆ ಎರಡನೇ ಹಂತದಲ್ಲಿ ತರಬೇತಿ ನೀಡಲು ಈಗಾಗಲೇ ಪ್ರಾರಂಭಿಸಲಾಗಿದೆ. ಸದರಿ ಆರು ಜನರು ಸಹಾಯಧನ ಪಡೆದು ದುರುಪಯೋಗ ಮಾಡಿಕೊಳ್ಳುವಂತಿಲ್ಲ. ಸಹಾಯಧನದ ಮೊತ್ತವನ್ನು ಸಂಪೂರ್ಣವಾಗಿ ಉದ್ಯಮಶೀಲತೆಗೆ ಬಳಸಿಕೊಳ್ಳಬೇಕು. ಕಳೆದ ಐದು ವರ್ಷಗಳ ಮಾಹಿತಿಯ ಆಧಾರದ ಮೇಲೆ ಜಿಲ್ಲೆಯಲ್ಲಿ ಹೆಚ್ಚು ಪ್ರವಾಸಿಗರು ಸೇರುವ ಸ್ಥಳಗಳ ಅನ್ವಯ ಅರ್ಹ ಆರು ಫಲಾನುಭವಿಗಳಿಗೆ ವಿವಿಧ ಪ್ರವಾಸಿ ಸ್ಥಳಗಳಲ್ಲಿ ಮೊಬೈಲ್ ಕ್ಯಾಂಟೀನ್ ಸ್ಥಾಪನೆ ಮಾಡಲು ಸೂಕ್ತ ಸ್ಥಳ ಗುರುತಿಸಿ ಎಂದು ಹೇಳಿದರು.

ಸಹಾಯಧನ ಪಡೆದ ಅರ್ಹ ಫಲಾನುಭವಿಗಳು ಪ್ರವಾಸೋದ್ಯಮ ಸ್ಥಳಗಳಲ್ಲಿ ಮೊಬೈಲ್ ಕ್ಯಾಂಟೀನ್ ಗಳನ್ನು ಇಟ್ಟು ಪ್ರವಾಸಿಗರಿಗೆ ಶುಚಿಯಾದ ರುಚಿಯಾದ ಗುಣಮಟ್ಟದ ಆಹಾರವನ್ನು ಪೂರೈಸಿ. ಶುಚಿಯಾದ ಗುಣಮಟ್ಟದ ಆಹಾರವನ್ನು ನೀಡುವುದರ ಜೊತೆಗೆ ನಿಮ್ಮ ಮೊಬೈಲ್ ಕ್ಯಾಂಟೀನ್ ಬ್ರಾಂಡಿಂಗ್ ಅನ್ನು ಹೆಚ್ಚಿಸಿ ಎಂದು ಸೂಚಿಸಿದರು.

ಅರ್ಹ ಫಲಾನುಭವಿಗಳು ಸಹಾಯಧನದಿಂದ ಖರೀದಿಸಿದ ವಾಹನಗಳನ್ನು ಇತರರಿಗೆ ವರ್ಗಾಯಿಸುವಂತಿಲ್ಲ. ಫಲಾನುಭವಿಗಳಿಗೆ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ ಮುಖಾಂತರ ಹೇಗೆ ಅನುಮತಿ ಪಡೆಯಬೇಕು ಎಂಬುದರ ಕುರಿತು ಸಂಬಂಧಪಟ್ಟ ಅಧಿಕಾರಿಗಳು ಮಾಹಿತಿ ನೀಡಬೇಕು ಎಂದು ಹೇಳಿದರು.

ಮೊಬೈಲ್ ಕ್ಯಾಂಟೀನ್ ಸಹಾಯಧನ ಯೋಜನೆಯಡಿ ಆಯ್ಕೆಯಾದ ಅರ್ಹ ಫಲಾನುಭವಿಗಳು ಆಹಾರ ಸೇವನೆಗೆ ಬರುವ ಪ್ರವಾಸಿಗರಿಗೆ ಗುಣಮಟ್ಟದ ಆಹಾರವನ್ನು ನೀಡಬೇಕು. ಬಳಸಿದ ಎಣ್ಣೆಗಳನ್ನು ಮತ್ತೆ ಬಳಸುವಂತಿಲ್ಲ. ಆಹಾರದ ಶುಚಿತ್ವ ಕಾಪಾಡುವುದರ ಜೊತೆ ಡ್ರೆಸ್ ಕೋಡ್ ಅನ್ನು ಅನುಸರಿಸಬೇಕು ಎಂದು ಹೇಳಿದರು. ಸಭೆಯಲ್ಲಿ ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕ ರಾಘವೇಂದ್ರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಕೆ.ಮೋಹನ್, ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ ಅಧಿಕಾರಿ ಸೇರಿದಂತೆ ವಿವಿಧ ಅಧಿಕಾರಿಗಳು ಉಪಸ್ಥಿತರಿದ್ದರು.

# ನಗರಸಭೆಗೆ ಸೇರಿಸುವ ಕಾರ್ಯ ಕ್ರಮವಬದ್ಧವಾಗಿಲ್ಲ: ಸುನಂದ

**ಮಂಡ್ಯ:** ಗೆಜ್ಜಲಗೆರೆ ಸೇರಿದಂತೆ ಮೂರು ಗ್ರಾ.ಪಂಗಳನ್ನು ಮದ್ದೂರು ನಗರಸಭೆಗೆ ಸೇರಿಸುವ ಕಾರ್ಯ ಕ್ರಮವಬದ್ಧವಾಗಿಲ್ಲ ಎಂದು ರೈತ ಹೋರಾಟಗಾರ್ತಿ ಸುನಂದ ಜಯರಾಂ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮದ್ದೂರು ಶಾಸಕರು ಮದ್ದೂರು ಪುರಸಭೆ, ಚಾಮನಹಳ್ಳಿ, ಸೋಮನಹಳ್ಳಿ, ಗೊರವಾಲೆ, ಗೆಜ್ಜಲಗೆರೆ ಗ್ರಾ.ಪಂ ವ್ಯಾಪ್ತಿಯ ಗ್ರಾಮಗಳಿಗೆ ಭೇಟಿ ನೀಡಿ ಗ್ರಾಮಸ್ಥರ ಅಭಿಪ್ರಾಯ ಸಂಗ್ರಹಿಸದೇ ಏಕಪಕ್ಷೀಯವಾಗಿ ನಗರಸಭೆಗೆ ಸೇರಿಸುವ ಕಾರ್ಯಕ್ಕೆ ಮುಂದಾಗಿದ್ದಾರೆ ಎಂದು ದೂರಿದರು.

ಈ ಸಂಬಂಧ ಗ್ರಾ.ಪಂಚಾಯಿತಿಗಳ ಸಾಮಾನ್ಯ ಸಭೆಯಲ್ಲಿಯೂ ವಿಷಯದ ಕಾರ್ಯಸೂಚಿ ತರಲಾಗಿಲ್ಲ. ಗ್ರಾಮಸ್ಥರು, ಗ್ರಾ.ಪಂ ಸದಸ್ಯರ ವಿರೋಧದ ನಡುವೆಯೂ ಅಬ್ದುಲ್ ನಜೀರ್ ಸಾಬ್, ಗಾಂಧೀಜಿ ಅವರುಗಳ ಕನಸಿನ ಪಂಚಾಯತ್ ರಾಜ್ ವ್ಯವಸ್ಥೆಗೆ ಧಕ್ಕೆ ತರುತ್ತಿದ್ದಾರೆ. ಗ್ರಾ.ಪಂ ಸದಸ್ಯರು ಹಾಗೂ ಗ್ರಾಮಸ್ಥರ ಹಕ್ಕು ಚ್ಯುತಿ ಮಾಡಿ, ನಾಗರೀಕತೆಯ ಕಾರಣ ಹೇಳಿ ತಾಲೂಕಿನ ಹಸಿರು ವಲಯವನ್ನು ಸರ್ವನಾಶ ಮಾಡಲು ಹೊರಟಿದ್ದಾರೆ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಸದರಿ ಗ್ರಾ.ಪಂಗಳನ್ನು ನಗರಸಭೆ ಸೇರಿಸದಂತೆ ತಾಲೂಕು ಮಟ್ಟದಲ್ಲಿ ಹೋರಾಟ ಮಾಡಲಾಗಿದೆ. ಅಂತೆಯೇ ಹೈಕೋರ್ಟ್‌ನಲ್ಲೂ ಪಿಐಎಲ್ ಸಲ್ಲಿಸಲಾಗಿದೆ. 18ದಿನಗಳಿಂದ ಗೆಜ್ಜಲಗೆರೆ ಗ್ರಾ.ಪಂ ಬಳಿ ಅನಿರ್ದಿಷ್ಟಾವಧಿ ಧರಣಿ ಮೂಲಕ ಹೋರಾಟ ಮಾಡುತ್ತಿರುವುದಾಗಿ ತಿಳಿಸಿದರು.

ಗ್ರಾಮಕ್ಕೆ ಬಂದು ಗ್ರಾಮಸ್ಥರನ್ನು ಭೇಟಿ ಮಾಡಿ ನಗರಸಭೆಯಿಂದ ಗ್ರಾ.ಪಂಗಳನ್ನು ಕೈಬಿಡುವುದಾಗಿ ಹೇಳಿದ ಶಾಸಕರು ಮಾತಿಗೆ ತಪ್ಪಿದ್ದಾರೆ. ನಗರಸಭೆಗೆ ಗ್ರಾ.ಪಂಗಳನ್ನು ಒಪ್ಪಿಗೆಯಿಲ್ಲದೇ ಸೇರಿಸುವ ಶಾಸಕರ ನಿರ್ಧಾರ ಖಂಡನಾರ್ಹವಾಗಿದ್ದು, ಆದ್ದರಿಂದ ಚಳುವಳಿ ಅನಿವಾರ್ಯವಾಗಿದೆ. ಗ್ರಾಮೀಣ ಭಾರತ ನಶಿಸಿ, ಅಭಿವೃದ್ಧಿ ಹೆಸರಿನಲ್ಲಿ ಹಳ್ಳಿಗಳನ್ನು ಹಾಳು ಮಾಡುವ ನಗರೀಕರಣದ ಹೆಸರಲ್ಲಿ ಹಳ್ಳಿಗಳ ಜನರಿಗೆ ಹಳ್ಳಿಗಳ ಜನರಿಗೆ ದ್ರೋಹ ಮಾಡಲಾಗುತ್ತಿದೆ ಎಂದು ಆರೋಪಿಸಿದರು.

ಗೋಷ್ಠಿಯಲ್ಲಿ ಗೆಜ್ಜಲಗೆರೆ ಗ್ರಾ.ಪಂ ಅಧ್ಯಕ್ಷೆ ಬಿ.ಎಸ್.ರಾಧೆ, ಎಪಿಎಂಸಿ ಮಾಜಿ ಅಧ್ಯಕ್ಷ ಜಿ.ಸ.ಮಹೇಂದ್ರ, ತಾ.ಪಂ ಮಾಜಿ ಅಧ್ಯಕ್ಷ ಇ.ಪಿ.ಯೋಗೇಶ್, ಜಿ.ಹೆಚ್.ವೀರಪ್ಪ, ಚಂದ್ರಶೇಖರ್, ಲಿಂಗಪ್ಪಾ, ಯಜಮಾನ್‌ಶಂಕರಪ್ಪ ಇದ್ದರು.




# ವೀಗನ್ | ವೇಗವಾಗಿ ಬೆಳೆಯುತ್ತಿರುವ ಆಹಾರ ಮತ್ತು ಫ್ಯಾಷನ್



| ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email : Swamynathann@gmail.com

ವೀಗನಿಸಂ ಎಂದರೆ ಕೇವಲ ತ್ಯಾಗವಲ್ಲ, ಅದೊಂದು ಸುಂದರವಾದ ಬದಲಾವಣೆ. ಆಹಾರದ ರುಚಿ ಮತ್ತು ಧರಿಸುವ ಬಟ್ಟೆಯ ಅಂದವನ್ನು ಬಿಟ್ಟುಕೊಡದೆಯೇ , ಪ್ರಾಣಿ ಹಿಂಸೆ ಮಾಡದೆ , ಹೇಗೆ ನೈತಿಕವಾಗಿ ಬದುಕಬಹುದು ಎಂಬುದನ್ನು ವೀಗನ್ ಜೀವನಶೈಲಿ ತೋರಿಸಿಕೊಡುತ್ತದೆ. ಇಂದು ವೀಗನ್ ಆಹಾರ ಕೇವಲ ಚಳುವಳಿಯಲ್ಲ, ಅದೊಂದು ಐಷಾರಾಮಿ ಮತ್ತು ಸೃಜನಶೀಲ ಅನುಭವವಾಗಿ ಬದಲಾಗಿದೆ.



**ವೀಗನ್ ಪಾಕಪದ್ಧತಿ:** ಶೆಫ್‌ಗಳ ಕೈಚಳಕದಲ್ಲಿ ಅರಳುತ್ತಿರುವ ರುಚಿ : ಇತ್ತೀಚಿನ ವರ್ಷಗಳಲ್ಲಿ ಆಹಾರ ಲೋಕದಲ್ಲಿ ದೊಡ್ಡ ಕ್ರಾಂತಿಯೊಂದು ನಡೆಯುತ್ತಿದೆ. ವಿಶ್ವದ ಖ್ಯಾತನಾಮ ಶೆಫ್‌ಗಳು (Celebrity Chefs) ಈ ಜೀವನಶೈಲಿಯನ್ನು ಅಪ್ಪಿಕೊಳ್ಳುವ ಮೂಲಕ ಇದಕ್ಕೆ ಹೊಸ ಆಯಾಮ ನೀಡಿದ್ದಾರೆ.

**ಪರ್ಯಾಯಗಳ ಅದ್ಭುತ ಲೋಕ:** ಮಾಕ್ ಮೀಟ್ (Mock Meat): ಹಲಸಿನ ಹಣ್ಣಿನಿಂದ ತಯಾರಿಸಿದ ಪದಾರ್ಥಗಳು ಮಾಂಸಾಹಾರಿಗಳನ್ನೂ ಸೆಳೆಯುತ್ತಿವೆ. ಅದರ ವಿನ್ಯಾಸವು ಚಿಕನ್ ಅಥವಾ ಮಟನ್‌ನಂತೆಯೇ ಇರುತ್ತದೆ. ಹಾಗೂ ಅದರ ರುಚಿಯೂ ಸಹ ಮಾಂಸಾಹಾರದಂತೆಯೇ ಇರುತ್ತದೆ .

**ಸಸ್ಯಜನ್ಯ ಹಾಲು:** ಸೋಯಾ ಹಾಲು, ಬಾದಾಮಿ ಹಾಲು, ತೆಂಗಿನ ಹಾಲು ಮತ್ತು ಓಟ್ಸ್ ಹಾಲುಗಳು ಕಾಫಿ-ಟೀ ರುಚಿಯನ್ನು ಹೆಚ್ಚಿಸಿವೆ.

**ಐಸ್ ಕ್ರೀಮ್:** ತೆಂಗಿನ ಹಾಲಿನಿಂದ ಮಾಡಿದ ಐಸ್ ಕ್ರೀಮ್‌ಗಳು ಹಾಲಿನ ಐಸ್ ಕ್ರೀಮ್‌ಗಿಂತಲೂ ಹೆಚ್ಚು ಕೆನೆಭರಿತ ಮತ್ತು ರುಚಿಕರವಾಗಿರುತ್ತವೆ.

ಶೆಫ್‌ಗಳು ಇಂದು ಕೇವಲ ಪ್ರಾಣಿಜನ್ಯ ಪದಾರ್ಥಗಳನ್ನು ಕೈಬಿಡುವುದಿಲ್ಲ; ಬದಲಿಗೆ ಸಸ್ಯಮೂಲದ ಪದಾರ್ಥಗಳ ನೈಜ ಪದಾರ್ಥಗಳನ್ನೇ ಬಳಸಿ ಹೇಗೆ ಹೋಟೆಲ್ ಶೈಲಿಯ ಪೌಷ್ಟಿಕ ಆಹಾರ ತಯಾರಿಸಬಹುದು ಎಂಬುದನ್ನು ಇವರು ತೋರಿಸಿಕೊಡುತ್ತಿದ್ದಾರೆ.

**ಕರ್ನಾಟಕದ ಸಾಂಪ್ರದಾಯಿಕ 'ವೀಗನ್' ರೆಸಿಪಿಗಳು :** ನಮ್ಮ ದೇಶದಲ್ಲಿ ವಿಶೇಷವಾಗಿ ಕರ್ನಾಟಕದ ಅಡುಗೆ ಪದ್ಧತಿಯು ಮೂಲತಃ ವೀಗನ್ ತತ್ವಗಳಿಗೆ ಹತ್ತಿರವಾಗಿದೆ. ನಾವು ತುಪ್ಪ ಅಥವಾ ಮೊಸರನ್ನು ಬಳಸದಿದ್ದರೆ ಇವು ಪರಿಪೂರ್ಣ ವೀಗನ್ ಖಾದ್ಯಗಳಾಗುತ್ತವೆ:

**ರಾಗಿ ಮುದ್ದೆ ಮತ್ತು ಸೊಪ್ಪು ಸಾರು:** ಇದರಲ್ಲಿ ಯಾವುದೇ ಪ್ರಾಣಿಜನ್ಯ ಉತ್ಪನ್ನಗಳಿಲ್ಲ. ಇದು ಶಕ್ತಿಯ ಭಂಡಾರ.

**ಅಕ್ಕಿ , ರಾಗಿ, ಜೋಳ, ಸಜ್ಜೆ ರೊಟ್ಟಿ ಮತ್ತು ಕಾಯಿ ಚಟ್ನಿ:** ಸಂಪೂರ್ಣವಾಗಿ ವೀಗನ್ ಮತ್ತು ಅತ್ಯಂತ ರುಚಿಕರ.

**ಹುರುಳಿ ಕಾಳಿನ ಸಾರು:** ಪ್ರೋಟೀನ್‌ನ ಭಂಡಾರವಾಗಿರುವ ಈ ಖಾದ್ಯವು ಪ್ರಾಚೀನ ಕಾಲದಿಂದಲೂ ಬಳಕೆಯಲ್ಲಿದೆ.

**ಗಸಗಸೆ ಪಾಯಸ:** ಹಾಲಿನ ಬದಲಿಗೆ ತೆಂಗಿನ ಹಾಲು ಮತ್ತು ಬೆಲ್ಲ ಬಳಸುವುದರಿಂದ ಇದು ಅತ್ಯುತ್ತಮ ವೀಗನ್ ಡೆಸರ್ಟ್ ಆಗುತ್ತದೆ.

**ಸಿಹಿತಿಂಡಿಗಳು:** ಎಣ್ಣೆಬೀಜಗಳಿಂದ ತಯಾರಿಸುವ ಕಡಲೆಕಾಯಿ ಉಂಡೆ (ಚಿಕ್ಕಿ) ಮತ್ತು ಎಳ್ಳುಂಡೆಗಳು ಅತ್ಯುತ್ತಮ ವೀಗನ್ ಸ್ನ್ಯಾಕ್ಸ್.

ಆರೋಗ್ಯ ಮತ್ತು ಪೌಷ್ಟಿಕಾಂಶದ ಸಮತೋಲನ : ಸಂಪೂರ್ಣ ಸಸ್ಯಮೂಲದ ಆಹಾರದಲ್ಲಿ ಪೌಷ್ಟಿಕಾಂಶದ ಕೊರತೆಯಾಗದಂತೆ ಸಮತೋಲನ ಕಾಯ್ದುಕೊಳ್ಳುವುದು ಹೇಗೆ?

**ಪ್ರೋಟೀನ್ (Protein):** ಬೇಳೆಕಾಳುಗಳು, ಸೋಯಾ ಉತ್ಪನ್ನಗಳು **(Tofu),** ಬೀಜಗಳು (ಬಾದಾಮಿ, ವಾಲ್‌ನಟ್), ಮತ್ತು ಸಿರಿಧಾನ್ಯಗಳಾದ ರಾಗಿ, ನವಣೆಯಲ್ಲಿ ಹೇರಳವಾದ ಪ್ರೋಟೀನ್ ಇರುತ್ತದೆ.

ವಿಟಮಿನ್ **B12 (Vitamin B12):** ಇದು ಸಸ್ಯಹಾರದಲ್ಲಿ ನೇರವಾಗಿ ಸಿಗುವುದು ಅಪರೂಪ. ಆದ್ದರಿಂದ ಃ12 ನಿಂದ ಬಲವರ್ಧಿತವಾದ **(Fortified)** ಸಸ್ಯಜನ್ಯ ಹಾಲು, ಅಥವಾ ನ್ಯೂಟ್ರಿಷನಲ್ ಯೀಸ್ಟ್ ಬಳಸಬೇಕು. ದೀರ್ಘಕಾಲದ ವೀಗನ್ ಜೀವನದಲ್ಲಿ ವೈದ್ಯರ ಸಲಹೆಯಂತೆ ಃ12 ಸಪ್ಲಿಮೆಂಟ್ಸ್ ತೆಗೆದುಕೊಳ್ಳುವುದು ಅತ್ಯಗತ್ಯ.

**ಗಮನಿಸ ಬೇಕಾದ ಅಂಶ :** ಆಹಾರ ಪದ್ಧತಿಯಲ್ಲಿ ಯಾವುದೇ ಪ್ರಮುಖ ಬದಲಾವಣೆಗಳನ್ನು ಮಾಡುವ ಮೊದಲು ನುರಿತ ವೈದ್ಯರ ಅಥವಾ ಪೌಷ್ಟಿಕತಜ್ಞರ ಸಲಹೆ ಪಡೆಯುವುದು ಅತ್ಯಗತ್ಯ.

**ಮನೆಯಲ್ಲೇ ತಯಾರಿಸುವ ಮೊಸರು:** ಒಂದು ಕಪ್ ನೆನೆಸಿದ ಶೇಂಗಾವನ್ನು ರುಬ್ಬಿ ಹಾಲು ತೆಗೆದು, ಕುದಿಸಿ, ಉಗುರು ಬೆಚ್ಚಗಾದಾಗ 2-3 ಹಸಿಮೆಣಸಿನಕಾಯಿಯ ತೊಟ್ಟುಗಳನ್ನು ಹಾಕಿದರೆ 8 ಗಂಟೆಯಲ್ಲಿ ರುಚಿಯಾದ ಶೇಂಗಾ ಮೊಸರು ಸಿದ್ಧವಾಗುತ್ತದೆ.

ನಮ್ಮಲ್ಲಿ ಮಾಡುವ ಅನ್ನ , ರಸಂ, ಸಾಂಬಾರ್, ಪಲ್ಯಗಳು , ಹುಳಿ, ಕೂಟುಗಳು, ತಿಂಡಿಗಳಾದ ಅವಲಕ್ಕಿ, ಉಪ್ಪಿಟ್ಟು, ಇಡ್ಲಿ, ದೋಸೆ, ಕಡುಬು, ಉಸಲಿಗಳು ಎಲ್ಲವೂ ವೇಗನ್ ಪದಾರ್ಥಗಳೇ . ಒಗ್ಗರಣೆಗೆ ತುಪ್ಪದ ಬದಲು, ಕಡಲೆಕಾಯಿ ಎಣ್ಣೆ ಅಥವಾ ಸಸ್ಯ ಜನ್ಯ ಎಣ್ಣೆಯನ್ನು



ಎಲ್ಲ ಸಾಂಪ್ರದಾಯಿಕ ಎಣ್ಣೆಯಲ್ಲಿ ಕರೆದ ತಿಂಡಿಗಳಾದ ಕೋಡುಬಳೆ , ಚಕ್ಕಲಿ , ನಿಪ್ಪಟ್ಟು , ಉಂಡೆಗಳು ಎಲ್ಲವೂ ಸಸ್ಯ ಜನ್ಯವೇ . ನಾವು ತಿನ್ನುವ ಬಹುತೇಕ ಊಟ ತಿಂಡಿಗಳು ಸಸ್ಯಜನ್ಯವೇ . ಹಾಗಾಗಿ , ವೀಗನ್ ಆಗುವುದು ತುಂಬಾ ಕಷ್ಟವೇನಿಲ್ಲ . ಅದಕ್ಕೆ ಇಚ್ಛಾ ಶಕ್ತಿ ಇರಬೇಕು ಅಷ್ಟೇ.

ಫ್ಯಾಷನ್ ಎನ್ನುವುದು ಕೇವಲ ವೈಯಕ್ತಿಕ ಅಭಿವ್ಯಕ್ತಿಯಲ್ಲ. ಪ್ರತಿಯೊಂದು ರೇಷ್ಮೆ ಸೀರೆ ಅಥವಾ ಚರ್ಮದ ಶೂಗಳ ಹಿಂದೆ ಒಂದು ಕ್ರೂರತೆಯ ಕಥೆ ಇರುತ್ತದೆ. ಆದ್ದರಿಂದ ವೀಗನ್ ಫ್ಯಾಷನ್ ಇಂದು ಮುಂಚೂಣಿಗೆ ಬಂದಿದೆ.

**ವೀಗನ್ ಫ್ಯಾಷನ್‌ನ ವಿಶೇಷತೆಗಳು:** ಹತ್ತಿ ಮತ್ತು ಸೆಣಬು: ಇವು 100% ಕ್ರೌರ್ಯ-ಮುಕ್ತ ಮತ್ತು ಪರಿಸರ ಸ್ನೇಹಿ.

**ಟೆನ್ಸೆಲ್ (ಟೆನ್ಸಿಲ್):** ಯೂಕಲಿಪ್ಟಸ್ ಮರದಿಂದ ಪಡೆಯಲಾದ ಈ ನಾರು ರೇಷ್ಮೆಯಂತಹ ಹೊಳಪು ಮತ್ತು ಮೃದುತ್ವವನ್ನು ನೀಡುತ್ತದೆ.

ಆಪಲ್ ಮತ್ತು ಕಾರ್ನ್ ಲೆದರ್: ಹಣ್ಣಿನ ತ್ಯಾಜ್ಯದಿಂದ ತಯಾರಿಸಿದ ಚರ್ಮದ ಪರ್ಯಾಯಗಳು ಈಗ ಚೀಲಗಳು ಮತ್ತು ಪಾದರಕ್ಷೆಗಳಲ್ಲಿ ಬಳಕೆಯಾಗುತ್ತಿವೆ.


**ವೀಗನ್ ಸಿಲ್ಕ್ (Vegan Silk):** ಟಾಟಾ ಸಮೂಹದ 'ತನೇರಾ' ಬ್ರ್ಯಾಂಡ್ ಬಿದಿರು, ಮತ್ತು ಮರದ ತಿರುಳಿನಿಂದ ತಯಾರಿಸಿದ ಸಸ್ಯಜನ್ಯ ರೇಷ್ಮೆ ಸೀರೆಗಳನ್ನು ಪರಿಚಯಿಸಿದೆ. ಯಾವುದೇ ರೇಷ್ಮೆ ಹುಳುಗಳನ್ನು ಕೊಲ್ಲದೆ ತಯಾರಿಸುವ ಈ ಸೀರೆಗಳು ಸುಸ್ಥಿರ ಅರಣ್ಯಗಳಿಂದ ಪಡೆದ ನೈಸರ್ಗಿಕ ಸಂಪನ್ಮೂಲಗಳಿಂದ ಮಾಡಲ್ಪಟ್ಟಿವೆ. ಇವು ಅತ್ಯಂತ ಹಗುರವಾಗಿದ್ದು, ಭಾರತದ ಹವಾಮಾನಕ್ಕೆ ಸೂಕ್ತವಾಗಿವೆ. ಇದು ಭಾರತದಲ್ಲಿ ಒಂದು ಫ್ಯಾಷನ್ ಟ್ರೆಂಡ್ ಆಗಿದೆ .

**ಬಾಳೆ ನಾರಿನ ರೇಷ್ಮೆ ತಯಾರಿಕೆ:** ಒಂದು ಕ್ರಾಂತಿ : ಭಾರತದ ತಮಿಳುನಾಡು ಮತ್ತು ಕೇರಳದಲ್ಲಿ ಬಾಳೆ ನಾರಿನ ರೇಷ್ಮೆ ಉತ್ಪಾದನೆ ಹೆಚ್ಚು. ಹಣ್ಣು ಬಿಟ್ಟ ನಂತರ ವ್ಯರ್ಥವಾಗುವ ಬಾಳೆ ಗಿಡದ ಕಾಂಡದಿಂದ ಮೃದುವಾದ ನಾರನ್ನು ತೆಗೆದು, ಶುದ್ಧೀಕರಿಸಿ, ನೈಸರ್ಗಿಕ ಬಣ್ಣಗಳನ್ನು ನೀಡಿ ನೂಲಾಗಿ ಪರಿವರ್ತಿಸಲಾಗುತ್ತದೆ. ಇದು ಸಂಪೂರ್ಣವಾಗಿ ಜೈವಿಕ ವಿಘಟನೀಯ **(Biodegradable)** ಮತ್ತು ರೇಷ್ಮೆಯಂತಹ ಹೊಳಪು ಹೊಂದಿದೆ.

**ಜೀವನಶೈಲಿಯ ಬದಲಾವಣೆಗೆ ಪ್ರಾಯೋಗಿಕ ಹಂತಗಳು :** ನೀವು ವೀಗನ್ ಆಗಲು ಬಯಸಿದರೆ ಈ ಸಣ್ಣ ಬದಲಾವಣೆಗಳನ್ನು ಮಾಡಿ:

1. ಜೇನುತುಪ್ಪದ ಬದಲಿಗೆ ಬೆಲ್ಲ ಅಥವಾ ಮೇಪಲ್ ಸಿರಪ್ ಬಳಸಿ.
2. ಬೆಣ್ಣೆಯ ಬದಲಿಗೆ ಆವಕಾಡೊ ಹಣ್ಣಿನ ಪೇಸ್ಟ್ ಅಥವಾ ಕಡಲೆಕಾಯಿ ಬೆಣ್ಣೆ ಬಳಸಿ.
3. ರೇಷ್ಮೆ ಮತ್ತು ಚರ್ಮದ ವಸ್ತುಗಳ ಖರೀದಿಯನ್ನು ನಿಲ್ಲಿಸಿ ಸಸ್ಯಜನ್ಯ ಆಯ್ಕೆಗಳನ್ನು ಮಾಡಿ .

ವೀಗನಿಸಂ ಕಠಿಣವಲ್ಲ, ಅದು ನಮ್ಮ ಹಳೆಯ ಸಂಪ್ರದಾಯದ ಆಧುನಿಕ ಮತ್ತು ಸಂವೇದನಾಶೀಲ ರೂಪವಾಗಿದೆ. ನಾವು ತಿನ್ನುವ ಪ್ರತಿ ತುತ್ತು ಆಹಾರವೂ ಭೂಮಿಯ ಮೇಲಿನ ಇನ್ನೊಂದು ಜೀವಿಗೆ ನೋವು



ಸಿನಿಮಾ ವರದಿ: ಬಿ.ಜಿ.ರವಿಕುಮಾರ್




# ಜಾಹೀರಾಯ್ತು ಲವ್ ಮಾಕ್ಟೇಲ್ 3 ಬಿಡುಗಡೆ ದಿನಾಂಕ!

ನಟನಾಗಿ ಹೆಸರಾಗಿದ್ದ ಡಾರ್ಲಿಂಗ್ ಕೃಷ್ಣ ಲವ್ ಮಾಕ್ಟೇಲ್ ಎಂಬ ಸಿನಿಮಾ ನಿರ್ದೇಶನ ಮಾಡುವ ಮೂಲಕ ಮೊದಲ ಹೆಜ್ಜೆಯಲ್ಲಿಯೇ ಗೆಲುವು ಕಂಡಿದ್ದರು. ಅದಾದ ನಂತರ ಬಂದಿದ್ದ ಎರಡನೇ ಆವೃತ್ತಿಯೂ ಗೆದ್ದಿತ್ತು. ಆ ಗೆಲುವಿನ ಪ್ರಭೆಯಲ್ಲಿ ಲವ್ ಮಾಕ್ಟೇಲ್ 3 ಚಿತ್ರಕ್ಕೆ ಚಾಲನೆ ನೀಡಿದ್ದ ಡಾರ್ಲಿಂಗ್ ಕೃಷ್ಣ, ಇತ್ತೀಚೆಗಷ್ಟೇ ಮೋಷನ್ ಪೋಸ್ಟರ್ ಲಾಂಚ್ ಮಾಡಿದ್ದರು. ಈ ಮೂಲಕ ಮೂರನೇ ಆವೃತ್ತಿ ನವಿರಾದ ಕುತೂಹಲವೊಂದಕ್ಕೆ ಚಾಲನೆ ನೀಡಿತ್ತು. ಇದೀಗ ಹೊಸ ವರ್ಷದ ಉಡುಗೊರೆ ಎಂಬಂತೆ ಈ ಚಿತ್ರದ ಬಿಡುಗಡೆ ದಿನಾಂಕವನ್ನು ಡಾಲಿಂಗ್ ಕೃಷ್ಣ ಘೋಶಿಸಿದ್ದಾರೆ. ಇದರೊಂದಿಗೆ ಲವ್ ಮಾಕ್ಟೇಲ್ 3 ಪ್ರೇಕ್ಷಕರ ಮುಂದೆ ಬರಲು ಇದೇ ಏಪ್ರಿಲ್ 10ರಂದು ಮುಹೂರ್ತ ನಿಗಧಿಯಾದಂತಾಗಿದೆ.

2020ರಲ್ಲಿ ಡಾರ್ಲಿಂಗ್ ಕೃಷ್ಣ ನಟಿಸಿ, ನಿರ್ದೇಶನ ಮಾಡಿದ್ದ ಲವ್ ಮಾಕ್ಟೇಲ್ ಚಿತ್ರ ತೆರೆಗಂಡಿತ್ತು. ನವಿರು ಪ್ರೇಮದೊಂದಿಗೆ ಹೊಸೆದುಕೊಂಡಿದ್ದ ಸೂಕ್ಷ್ಮ ಕಥನದ ಮೂಲಕ ಗೆದ್ದ ನಂತರ, ಲವ್ ಮಾಕ್ಟೇಲ್2 ಚಿತ್ರವನ್ನು ಕೃಷ್ಣ ರೂಪಿಸಿದ್ದರು. ಇದೀಗ ತೆರೆಗಾಣಲು ಸಜ್ಜಾಗಿರುವ ಲವ್ ಮಾಕ್ಟೇಲ್3 ಈ ಹಿಂದಿನ ಎರಡು ಆವೃತ್ತಿಗಳಿಗಿಂತಲೂ ಭಿನ್ನವಾಗಿರಲಿದೆ ಎಂಬ ವಿಚಾರವನ್ನಷ್ಟೇ ಕೃಷ್ಣ ಹಂಚಿಕೊಂಡಿದ್ದಾರೆ. ಕಥೆ, ನಿರೂಪಣೆ ಸೇರಿದಂತೆ ಎಲ್ಲದರಲ್ಲಿಯೂ ಲವ್ ಮಾಕ್ಟೇಲ್3 ಹೊಸ ಅನುಭೂತಿ ಕೊಡಲಿದೆ ಎಂಬ ಭರವಸೆ ಕೃಷ್ಣ ಅವರದ್ದು.


ಅಂದಹಾಗೆ, ಈ ಚಿತ್ರವನ್ನು ಡಾರ್ಲಿಂಗ್ ಕೃಷ್ಣ ಮತ್ತು ಮಿಲನಾ ನಾಗರಾಜ್ ಕ್ರಿಸ್‌ಮಿ ಬ್ಯಾನರಿನಡಿಯಲ್ಲಿ ನಿರ್ಮಾಣ ಮಾಡಿದ್ದಾರೆ. ನಕುಲ್ ಅಭಯಂಕರ್ ಸಂಗೀತ ನಿರ್ದೇಶನ, ಶ್ರೀ ಕ್ರೇಜಿ ಮೈಂಡ್ಸ್ ಛಾಯಾಗ್ರಹಣ ಮತ್ತು ಸಂಕಲ ಈ ಚಿತ್ರಕ್ಕಿದೆ. ಡಾರ್ಲಿಂಗ್ ಕೃಷ್ಣ, ಮಿಲನಾ ನಾಗರಾಜ್, ಸಂವೃತ, ಅಮೃತಾ ಅಯ್ಯಂಗಾರ್, ರಚೆಲ್ ಡೇವಿಡ್, ಅಭಿಲಾಶ್ ದಳಪತಿ, ಮುಂತಾದವರ ತಾರಾಗಣವಿದೆ. ಇದೀಗ ಎಲ್ಲ ಕೆಲಸ ಕಾರ್ಯಗಳನ್ನೂ ಮುಗಿಸಿಕೊಂಡಿರುವ ಚಿತ್ರತಂಡ, ಬೇಸಿಗೆ ರಜೆಯನ್ನು ಗಮನದಲ್ಲಿಟ್ಟುಕೊಂಡು ಏಪ್ರಿಲ್ 10ರಂದು ಪ್ರೇಕ್ಷಕರ ಮುಂದೆ ಬರಲು ತೀರ್ಮಾನಿಸಿದೆ.



ಸಂಕ್ರಾಂತಿ ನಂತರ ಶೂಟಿಂಗ್ ಆರಂಭ ಮಾಡಲಿರುವ ಹೊಸ ಕನ್ನಡ ಚಿತ್ರದಲ್ಲಿ ನಟಿ ಶ್ರುತಿ

# ಸುಪ್ರಿಯಾನ್ವಿ ಮೋಷನ್ ಪೋಸ್ಟರ್ ಅನಾವರಣ





ಕಿಚ್ಚ ಸುದೀಪ್ ಪತ್ನಿ ಪ್ರಿಯಾ ಸುದೀಪ್ ಹುಟ್ಟುಹಬ್ಬದ ಸಂಭ್ರಮದಲ್ಲಿದ್ದಾರೆ.

ಈ ಸಂಭ್ರಮದ ದಿನದಂದು ಅವರು ಹೊಸ ಹೆಜ್ಜೆ ಇಟ್ಟಿದ್ದಾರೆ. ಈಗಾಗಲೇ ನಿರ್ಮಾಪಕಿ ಹಾಗೂ ವಿತರಕಿಯಾಗಿರುವ ಪ್ರಿಯಾ ಸುದೀಪ್, ಪ್ರತಿಭಾನ್ವಿತ ಕಲಾವಿದರಿಗೆ ಅವಕಾಶ ಕೊಡಲು ಮುಂದಾಗಿದ್ದಾರೆ.

ಪ್ರಿಯಾ ಸುದೀಪ್ ಅವರು ಸುಪ್ರಿಯಾನ್ವಿ ಸ್ಟುಡಿಯೋ ಮೂಲಕ ಸಿನಿಮಾ ನಿರ್ಮಾಣ ಮಾಡುತ್ತಿರುವುದು ಗೊತ್ತೇ ಇದೆ . ಮ್ಯಾಂಗೋ ಪಚ್ಚ ಚಿತ್ರದ ಮೂಲಕ . ಸುದೀಪ್ ಅಕ್ಕನ ಮಗ ಸಂಚಿತ್ ಸಂಜೀವ್ ನಾಯಕರಾಗುತ್ತಿದ್ದಾರೆ.

ಅಲ್ಲದೇ ಇತ್ತೀಚೆಗೆ ಮ್ಯಾಕ್ಸ್ ಚಿತ್ರದ ವಿತರಣೆ ಮಾಡುವ ಮೂಲಕ ವಿತರಣೆ ಜವಾಬ್ದಾರಿ ನಿಭಾಯಿಸಿದ್ದಾರೆ. ಇದೀಗ ತಮ್ಮದೇ ಸುಪ್ರಿಯಾನ್ವಿ ಮೂಲಕ ಹೊಸ ಪ್ರತಿಭೆಗಳಿಗೆ ವೇದಿಕೆ ಕಲ್ಪಿಸಲು ತೀರ್ಮಾನ ಮಾಡಿದ್ದಾರೆ.

ಪ್ರಿಯಾ ಸುದೀಪ್ ಹುಟ್ಟುಹಬ್ಬಕ್ಕೆ ಸುಪ್ರಿಯಾನ್ವಿ ನಿರ್ಮಾಣ ಸಂಸ್ಥೆಯ ಮೋಷನ್ ಪೋಸ್ಟರ್ ಬಿಡುಗಡೆ ಮಾಡಲಾಗಿದೆ. ಈ ಬಗ್ಗೆ ಎಕ್ಸ್‌ನಲ್ಲಿ ಮಾಹಿತಿ ಹಂಚಿಕೊಂಡಿರುವ ಪ್ರಿಯಾ ಸುದೀಪ್, ಹೆಮ್ಮೆ ಮತ್ತು ಉತ್ಸಾಹದಿಂದ, ನಾವು ತಾಯಿ ಭದ್ರಕಾಳಿಯ ಪವಿತ್ರ ಆಶೀರ್ವಾದ ಮತ್ತು ನಮ್ಮ ಮೌಲ್ಯಯುತ ಪ್ರೇಕ್ಷಕರ ಆತ್ಮೀಯ ಪ್ರೋತ್ಸಾಹವನ್ನು ಕೋರುತ್ತೇವೆ. ನಾವು ಸುಪ್ರಿಯಾನ್ವಿ ಪಿಕ್ಚರ್ಸ್ ಸ್ಟುಡಿಯೋ ಮೋಷನ್ ಪೋಸ್ಟರ್ ಅನ್ನು ಪ್ರಸ್ತುತಪಡಿಸುತ್ತೇವೆ.

ಈ ಕ್ಷಣವು ಬಲವಾದ ವಿಷಯ, ಹೊಸ ಧ್ವನಿಗಳು ಮತ್ತು ಪ್ರಭಾವಶಾಲಿ ಸಿನೆಮಾಗಳಿಗೆ ಮೀಸಲಾಗಿರುವ ಸೃಜನಾತ್ಮಕ ವೇದಿಕೆಯ ಪ್ರಾರಂಭವನ್ನು ಸೂಚಿಸುತ್ತದೆ. ಸುಪ್ರಿಯಾನ್ವಿ ಪಿಕ್ಚರ್ ಸ್ಟುಡಿಯೋ ಅರ್ಥಪೂರ್ಣ ಸಿನೆಮಾ ಮತ್ತು ಶಕ್ತಿಯುತ ಕಥೆಗಳ ಭರವಸೆಯೊಂದಿಗೆ ಮುಂದುವರಿಯುತ್ತದೆ.

ಹೊಸ ಪ್ರಯಾಣ ಇಂದು ಪ್ರಾರಂಭವಾಗುತ್ತದೆ – ಮುಂದಿನದಕ್ಕಾಗಿ ಸಿದ್ಧ ಆಗಿರಿ ಎಂದು ಬರೆದುಕೊಂಡಿದ್ದಾರೆ.

ಸುಪ್ರಿಯಾನ್ವಿ ಪ್ರೊಡಕ್ಷನ್ ನಡಿ ಹೊಸ ಹೊಸ ಕಥೆಗಳಿಗೆ, ಪ್ರತಿಭಾನ್ವಿತ ಕಲಾವಿದರಿಗೆ ಅವಕಾಶ ಕಲ್ಪಿಸಲು ಪ್ರಿಯಾ ಸುದೀಪ್ ಮುಂದಾಗಿದ್ದಾರೆ. ವಿಭಿನ್ನ ಬಗೆಯ ಕಂಟೆಂಟ್ ಆಧಾರಿತ ಸಿನಿಮಾಗಳು ಸುಪ್ರಿಯಾನ್ವಿ ಪ್ರೊಡಕ್ಷನ್ ನಡಿ ಮೂಡಿ ಬರಲಿದೆ.

# 'ಡಾಲಿ ಪಿಕ್ಚರ್ಸ್'ನಿಂದ ಮತ್ತೊಂದು ಸಿನಿಮಾ ಅನೌನ್ಸ್ ಹೊಸ ಸಿನಿಮಾ ಟೈಟಲ್ 'ಹೆಗ್ಗಣ ಮುದ್ದು'

'ಹೆತ್ತವರಿಗೆ ಹೆಗ್ಗಣ ಮುದ್ದು' ಎನ್ನುವ ಗಾದೆ ಕೇಳಿದ್ದೀರಾ ಅಲ್ವಾ. ಈ ಗಾದೆ ಬಗ್ಗೆ ಯಾಕೀಗ ಅಂತೀರಾ.. 'ಹೆಗ್ಗಣ ಮುದ್ದು' ಎನ್ನುವ ಹೆಸರಿನಲ್ಲೇ ಈಗ ಸ್ಯಾಂಡಲ್‌ವುಡ್ ನಲ್ಲಿ ಸಿನಿಮಾ ಬರ್ತಾ ಇದೆ. ನಟ ರಾಕ್ಷಸ ಡಾಲಿ ಧನಂಜಯ ಅವರ ಡಾಲಿ ಪಿಕ್ಚರ್ಸ್ ನಲ್ಲಿ ಮತ್ತೊಂದು ವಿಭಿನ್ನ ಸಿನಿಮಾ ಮೂಡಿಬರುತ್ತಿದ್ದು ಹೆಗ್ಗಣ ಮುದ್ದು ಎಂದು ಟೈಟಲ್ ಇಡಲಾಗಿದೆ. ಸಖತ್ ವಿಭಿನ್ನವಾಗಿರುವ ಟೈಟಲ್ ಇಟ್ಕೊಂಡು ಹೊಸ ಸಿನಿಮಾ ಮೂಲಕ ಡಾಲಿ ಪಿಕ್ಚರ್ಸ್ ಹೊಸ ವರ್ಷಕ್ಕೆ ಸಿನಿ ಅಭಿಮಾನಿಗಳಿಗೆ ಬರ್ಜರಿ ಸುದ್ದಿ ನೀಡಿದ್ದಾರೆ.

ಅಂದಹಾಗೆ ಹೆಗ್ಗಣ್ಣ ಮುದ್ದು ಪೂರ್ಣ ಮೈಸೂರು ನಟನೆಯ ಸಿನಿಮಾ. ಅವಿನಾಶ್ ಬಳೆಕ್ಕಳ ನಿರ್ದೇಶನದ ಮೊದಲ ಸಿನಿಮಾವಾಗಿದೆ. ಪೂರ್ಣಗೆ ಜೋಡಿಯಾಗಿ ನಟ ಹಾಗೂ ಕಲಾ ನಿರ್ದೇಶಕ ಅರುಣ್ ಸಾಗರ್ ಪುತ್ರಿ ಅದಿತಿ ಸಾಗರ್ ಕಾಣಿಸಿಕೊಂಡಿದ್ದಾರೆ. ಈಗಾಗಲೇ ಶಿವಣ್ಣ ಜೊತೆ ವೇದ ಸಿನಿಮಾದಲ್ಲಿ ಮಿಂಚಿರುವ ಅದಿತಿ ಇದೀಗ ಮೊದಲ ಬಾರಿಗೆ ಹೆಗ್ಗಣ ಮುದ್ದು ಮೂಲಕ ಪೂರ್ಣ ಪ್ರಮಾಣದ ನಾಯಕಿಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ.

ಹೆಗ್ಗಣ ಮುದ್ದು ಪ್ರಸಿದ್ಧ ಗಾದೆ ಮಾತಿನಿಂದ ಸ್ಫೂರ್ತಿ ಪಡೆದು ಇಟ್ಟಿರುವ ಟೈಟಲ್. ಟೈಟಲ್ ನಿಂದನೇ ಸಿನಿಮಾದ ಕಥಾಹಂದರದ ಕುರಿತು ಕುತೂಹಲ ಹೆಚ್ಚಾಗಿದೆ. ಇದೊಂದು ಡ್ರಾಮ ಥ್ರಿಲ್ಲರ್ ಸಿನಿಮಾವಾಗಿದೆ.

ಈ ಬಗ್ಗೆ ಮಾತನಾಡಿರುವ ನಿರ್ದೇಶಕ ಅವನಾಶ್, 'ಸಂಬಂಧಗಳ ಬಗ್ಗೆ ಇರುವ ಸಿನಿಮಾವಾಗಿದೆ. ಹೆತ್ತವರಿಗೆ ಹೆಗ್ಗಣ ಮುದ್ದು ಅಂತ ಹೇಗೆ ಹೇಳ್ತಿವೋ ಹಾಗೆ ಈ ಸಿನಿಮಾದಲ್ಲಿ ನನಗೆ ನಾನೆ ಮುದ್ದು ಎನ್ನುವುದನ್ನು ಹೇಳಲಾಗಿದೆ' ಎಂದು ಹೇಳಿದರು.

ಸೈಲೆಂಟ್ ಆಗಿಯೇ ಶೂಟಿಂಗ್ ಮುಗಿಸಿರುವ ಹೆಗ್ಗಣ ಮುದ್ದು ಸದ್ಯ ರಿಲೀಸ್‌ಗೆ ತಯಾರಿ ಮಾಡಿಕೊಳ್ಳುತ್ತಿದೆ. ಟೈಟಲ್ ಮತ್ತು ಮೋಷನ್ ಪೋಸ್ಟರ್ ರಿಲೀಸ್ ಮಾಡುವ ಮೂಲಕ ಕುತೂಹಲ ಹೆಚ್ಚಿಸಿರುವ ಹೆಗ್ಗಣ್ಣ ಮುದ್ದು ಪೋಸ್ಟ್ ಪ್ರೊಡಕ್ಷನ್ ಕೆಲಸದಲ್ಲಿ ಬ್ಯುಸಿಯಾಗಿದೆ. ಹೆಗ್ಗಣ ಮುದ್ದು ಚಿತ್ರಕ್ಕೆ ಕಾರ್ತಿಕ್ ಚೆನ್ನೂಜಿ ರಾವ್ ಮತ್ತು ರೋಣದ ಬಕ್ಕೇಶ್ ಇಬ್ಬರು ಸಂಗೀತ ನಿರ್ದೇಶನ ಮಾಡಿದ್ದಾರೆ. ನಚಿಕೇತ್ ಬಲೆಕ್ಕಳ ಅವರ ಕ್ಯಾಮರಾ ವರ್ಕ್ ಇದೆ. ಸದ್ಯ ಶೂಟಿಂಗ್ ಮುಗಿಸಿ ಪೋಸ್ಟ್ ಪ್ರೊಡಕ್ಷನ್ ನಲ್ಲಿ ಬ್ಯುಸಿಯಾಗಿರುವ ಹೆಗ್ಗಣ ಮುದ್ದು ಡಾಲಿ ಪಿಕ್ಚರ್ಸ್ ನಿಂದ ಜೆಸಿ ಸಿನಿಮಾ ರಿಲೀಸ್ ಆದ ಬಳಿಕ ತೆರೆ ಮೇಲೆ ಬರಲಿದೆ.



# ಲಕ್ಷ್ಮಿ ಪುತ್ರ ನಾಯಕಿ ವಂದಿತಾ..

ನಾಚುರಲ್ ಸ್ಟಾರ್ ಚಿಕ್ಕಣ್ಣ ಹೀರೋ ಆಗಿ ನಟಿಸುತ್ತಿರುವ ಎರಡನೇ ಸಿನಿಮಾ ಲಕ್ಷ್ಮಿ ಪುತ್ರ. ಎಪಿ ಅರ್ಜುನ್ ಫಿಲ್ಮ್ ಬ್ಯಾನರ್ ನಡಿ ಮೂಡಿ ಬರ್ತಿರುವ ಈ ಚಿತ್ರಕ್ಕೆ ವಿಜಯ್ ಸ್ವಾಮಿ ಆಕ್ಷನ್ ಕಟ್ ಹೇಳ್ತಿದ್ದಾರೆ. ಲಕ್ಷ್ಮಿ ಪುತ್ರ ಸಿನಿಮಾದ ಬಹುತೇಕ ಚಿತ್ರೀಕರಣ ಈಗಾಗಲೇ ಮುಕ್ತಾಯಗೊಂಡಿದೆ. ಹೀಗಿದ್ದರೂ ಚಿತ್ರತಂಡ ನಾಯಕಿ ಪರಿಚಯ ಮಾಡಿರಲಿಲ್ಲ. ಇದೀಗ ಲಕ್ಷ್ಮಿ ಪುತ್ರನಿಗೆ ಜೋಡಿ ಯಾರು ಅನ್ನೋದು ರಿವೀಲ್ ಆಗಿದೆ.

ಲಕ್ಷ್ಮಿ ಪುತ್ರ ಚಿಕ್ಕಣ್ಣನಿಗೆ ಹೊಸ ನಟಿ ನಾಯಕಿಯಾಗಿ ಸಾಥ್ ಕೊಡುತ್ತಿದ್ದಾರೆ. ಅವರೇ ವಂದಿತಾ. ಚಿಕ್ಕಣ್ಣನಿಗೆ ಜೋಡಿಯಾಗಿ ವಂದಿತಾ ಅಭಿನಯಿಸಲಿದ್ದಾರೆ. ಸ್ಪೆಷಲ್ ಪ್ರೋಮೋ ಬಿಡುಗಡೆ ಮಾಡಿರುವ ಚಿತ್ರತಂಡ ವಂದಿತಾ ಅವರನ್ನು ತಮ್ಮ ಬಳಗಕ್ಕೆ ಸ್ವಾಗತ ಮಾಡಿಕೊಂಡಿದೆ.



ಚಿತ್ರದಲ್ಲಿ ತಾರಾ, ಕುರಿ ಪ್ರತಾಪ್, ಧರ್ಮಣ್ಣ ಸೇರಿ ದೊಡ್ಡ ತಾರಾಗಣವಿದೆ. ಅರ್ಜುನ್ ಜನ್ಯಾ ಸಂಗೀತ ಚಿತ್ರಕ್ಕಿದ್ದು, ಎ.ಪಿ ಅರ್ಜುನ್ ಚಿತ್ರದ ಹಾಡುಗಳಿಗೆ ಸಾಹಿತ್ಯ ಬರೆಯುತ್ತಿದ್ದಾರೆ. ಚಿತ್ರದಲ್ಲಿ ತಾಯಿ, ಮಗನ ಬಾಂಧವ್ಯದ ಕಥೆಯನ್ನು ಹೇಳಲಾಗ್ತಿದೆ. ಎಪಿ ಅರ್ಜುನ್ ಫಿಲ್ಮ್ಸ್ ಬ್ಯಾನರ್ ಅಡಿಯಲ್ಲಿ ನಿರ್ದೇಶಕ ಎಪಿ ಅರ್ಜುನ್ ಪತ್ನಿ ಅನ್ನಪೂರ್ಣ ಅರ್ಜುನ್ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಈ ಚಿತ್ರವನ್ನು ರವಿಕಿರಣ್ ಗೌಡ ಸಹ–ನಿರ್ಮಾಣದಲ್ಲಿ ಸಾಥ್ ಕೊಡುತ್ತಿದ್ದಾರೆ.

ಚಿತ್ರದ ಆಕ್ಷನ್ ಸೀಕ್ವೆನ್ಸ್‌ಗಳಿಗೆ ಮಾಸ್ ಮಾದ ನಿರ್ದೇಶನ ಮಾಡಿದ್ದಾರೆ. ಗಿರೀಶ್ ಆರ್ ಗೌಡ ಅವರ ಛಾಯಾಗ್ರಹಣ ಚಿತ್ರಕ್ಕಿದೆ.





# ಹೊರಬಂತು `ವಿಕಲ್ಪ' ಟೀಸರ್

ಬಹುತೇಕ ಹೊಸ ಪ್ರತಿಭೆಗಳೇ ಸೇರಿ ನಿರ್ಮಿಸಿರುವ ಸೈಕಾಲಜಿಕಲ್–ಥ್ರಿಲ್ಲರ್ ಕಥಾಹಂದರ ಹೊಂದಿರುವ ವಿಕಲ್ಪ ಚಿತ್ರ ತೆರೆಗೆ ಬರಲು ಸಿದ್ಧವಾಗುತ್ತಿದೆ. ಈಗಾಗಲೇ ವಿಕಲ್ಪ ಚಿತ್ರದ ಬಹುತೇಕ ಪೋಸ್ಟ್ ಪ್ರೊಡಕ್ಷನ್ ಕೆಲಸಗಳನ್ನು ಪೂರ್ಣಗೊಳಿಸಿರುವ ಚಿತ್ರತಂಡ, ಸದ್ಯ ಚಿತ್ರವನ್ನು ಸೆನ್ಸಾರ್ ಮುಂದೆ ತಂದಿದೆ. ಇದೇ ವೇಳೆ ನಿಧಾನವಾಗಿ ವಿಕಲ್ಪ ಚಿತ್ರದ ಪ್ರಚಾರ ಕಾರ್ಯಗಳಿಗೆ ಚಾಲನೆ ನೀಡಿರುವ ಚಿತ್ರತಂಡ, ಇತ್ತೀಚೆಗೆ ವಿಕಲ್ಪ ದ ಮೊದಲ ಟೀಸರ್ ಅನ್ನು ಬಿಡುಗಡೆ ಮಾಡಿದೆ. ಕನ್ನಡ ಚಿತ್ರರಂಗದ ಹಿರಿಯ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್, ವರ್ಚ್ಯುವಲ್ ಆಗಿ ವಿಕಲ್ಪ ಚಿತ್ರದ ಟೀಸರ್ ಅನ್ನು ಬಿಡುಗಡೆಗೊಳಿಸಿ, ಚಿತ್ರತಂಡಕ್ಕೆ ಶುಭ ಹಾರೈಸಿದ್ದಾರೆ. ಪತ್ರಕರ್ತ ಜೋಗಿ ವಿಕಲ್ಪ ಚಿತ್ರದ ಟೀಸರ್ ಬಿಡುಗಡೆ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಆಗಮಿಸಿ, ಚಿತ್ರತಂಡದ ಪ್ರಯತ್ನದ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡಿದರು.

ಸಿನಿಮಾದ ಹೆಸರೇ ಹೇಳುವಂತೆ, ವಿಕಲ್ಪ ಔಟ್ ಅಂಡ್ ಔಟ್ ಸೈಕಾಲಜಿಕಲ್–ಥ್ರಿಲ್ಲರ್ ಕಥಾಹಂದರದ ಸಿನಿಮಾ. ಮನುಷ್ಯನ ಮನಸ್ಸಿನ ಸುಪ್ತ ಭಾವನೆಗಳು ಮತ್ತು ತಲ್ಲಣಗಳನ್ನು ಚಿತ್ರರೂಪದಲ್ಲಿ ತೆರೆಮೇಲೆ ತಂದಿದೆ ವಿಕಲ್ಪ ಚಿತ್ರತಂಡ. ಸುಮಾರು ಎರಡು ದಶಕಗಳಿಗೂ ಹೆಚ್ಚಿನ ಕಾಲ ಹವ್ಯಾಸಿ ರಂಗಭೂಮಿಯ ಅನುಭವವಿರುವ, ಪ್ರತಿಷ್ಠಿತ ಬಹುರಾಷ್ಟ್ರೀಯ ಐಟಿ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರಾಗಿರುವ ಪೃಥ್ವಿರಾಜ್ ಪಾಟೀಲ್, ತಮ್ಮ ಪರಿಕಲ್ಪನೆಯನ್ನು ವಿಕಲ್ಪ ಚಿತ್ರದ ಮೂಲಕ ತೆರೆಮೇಲೆ ತರುತ್ತಿದ್ದಾರೆ. ಸುರೂಸ್ ಟಾಕೀಸ್ ಸಂಸ್ಥೆಯ ಅಡಿಯಲ್ಲಿ ಶ್ರೀಮತಿ ಇಂದಿರಾ ಶಿವಸ್ವಾಮಿ ನಿರ್ಮಾಣದಲ್ಲಿ ಮೂಡಿಬರುತ್ತಿರುವ ಚೊಚ್ಚಲ ಚಿತ್ರ ಇದಾಗಿದ್ದು, ಈ ಚಿತ್ರದಲ್ಲಿ ನಿರ್ದೇಶಕ ಪೃಥ್ವಿರಾಜ್ ಪಾಟೀಲ್ ಅವರೇ ತೆರೆಮೇಲೂ ಮುಖ್ಯಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ವಿಕಲ್ಪ ಚಿತ್ರದಲ್ಲಿ ಪೃಥ್ವಿರಾಜ್ ಪಾಟೀಲ್ ಅವರೊಂದಿಗೆ ನಾಗಶ್ರೀ ಹೆಬ್ಬಾರ್, ಹರಿಣಿ ಶ್ರೀಕಾಂತ್, ಸಂಧ್ಯಾ ವಿನಾಯಕ್, ಗಣಪತಿ ವಡ್ಡಿನಗದ್ದೆ, ಸ್ವರೂಪ್ ಬಚ್ಚ್, ಪೂಜಾ ಬಚ್ಚ್, ಜಯಂತ್ ಡೇವಿಡ್, ಗಿರೀಶ್ ಹೆಗಡೆ, ಡಾ. ಪ್ರಕೃತಿ, ಮಾಸ್ಟರ್ ಆಯುಷ್ ಸಂತೋಷ್, ಗಣಪತಿ ಹಿತ್ತಲಕೈ, ಪ್ರಜ್ಞಾ ಗಣಪತಿ, ಮಾಧವ ಶರ್ಮಾ, ಗಣಪತಿ ಎ. ಆರ್, ರಾಜ್ಯ ಪ್ರಶಸ್ತಿ ವಿಜೇತ ಯಕ್ಷಗಾನ ಕಲಾವಿದ ಗೋಡೆ ನಾರಾಯಣ ಹೆಗಡೆ ಮುಂತಾದ ದೊಡ್ಡ ಕಲಾವಿದರ ತಾರಾಗಣವೇ ಇದೆ.

ಚಿತ್ರದ ನಾಯಕ ನಟ ಕಂ ನಿರ್ದೇಶಕ ಪೃಥ್ವಿರಾಜ್ ಪಾಟೀಲ್, ಆರಂಭದಿಂದಲೂ ನಾವು ಹೇಳಿಕೊಂಡು ಬಂದಿರುವ ಹಾಗೇ, ಇದೊಂದು ಸೈಕಾಲಜಿಕಲ್–ಥ್ರಿಲ್ಲರ್ ಕಥಾಹಂದರದ ಚಿತ್ರ. ಮನುಷ್ಯನ ಮನಸ್ಸಿನ ಸುಪ್ತ ಭಾವನೆಗಳು, ತುಮುಲ–ತಲ್ಲಣಗಳನ್ನು ಈ ಚಿತ್ರದ ಮೂಲಕ ತೆರೆಮೇಲೆ ತರುತ್ತಿದ್ದೇವೆ. ವಿಕಲ್ಪ ಎಂದರೆ ವಾಸ್ತವ ಮತ್ತು ಕಲ್ಪನೆಗಳ ನಡುವಿನ ಒಂದು ಸ್ಥಿತಿ ಎಂದರ್ಥ. ನಮ್ಮ ಚಿತ್ರದ ಶೀರ್ಷಿಕೆಯ ಪ್ರಕಾರ, ಇದೊಂದು ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದ ಕಥೆ ಎಂದೆನಿಸಿದರೂ, ಇದು ಒಂದು ಸಂಪೂರ್ಣ ಥ್ರಿಲ್ಲರ್ ಚಿತ್ರ ಎನ್ನುವುದು ವಿಶೇಷ. ಸೈಕಾಲಜಿಕಲ್–ಥ್ರಿಲ್ಲರ್ ಅಂಶಗಳ ಜೊತೆಗೆ ನವಿರಾದ ಹಾಸ್ಯ ಮತ್ತು ಮನೋರಂಜನೆಗೆ ಹೆಚ್ಚಿನ ಒತ್ತನ್ನು ಕೊಟ್ಟು ಇಡೀ ಚಿತ್ರದ ಕಥೆಯನ್ನು ಹೆಣೆಯಲಾಗಿದೆ. ಈ ಚಿತ್ರಕ್ಕೆ ಚಿತ್ರದ ಕಥೆಯೆ ಹೀರೋ. ಇಲ್ಲಿ ಪ್ರತಿ ಪಾತ್ರಗಳೂ ಮಾತನಾಡುತ್ತವೆ. ಪ್ರತಿ ಪಾತ್ರಗಳೂ ನೋಡುಗರ ಮನಮುಟ್ಟುತ್ತವೆ ಎಂದು ವಿವರಣೆ ನೀಡಿದರು.

ನಟಿ ಹರಿಣಿ ಶ್ರೀಕಾಂತ್ ಮಾತನಾಡಿ, ಈ ಸಿನಿಮಾದಲ್ಲಿ ನಾನು ಸೈಕಿಯಾಟ್ರಿಸ್ಟ್ ಪಾತ್ರದಲ್ಲಿ ಅಭಿನಯಿಸಿದ್ದೇನೆ. ಇಡೀ ಚಿತ್ರತಂಡ ಹೊಸಬರಾದರೂ, ತುಂಬ ವೃತ್ತಿಪರವಾಗಿ ಸಿನಿಮಾ ಮಾಡಿದ್ದಾರೆ. ನಿರ್ದೇಶಕ ಪೃಥ್ವಿರಾಜ್ ಸಾಕಷ್ಟು ತಯಾರಿ ಮಾಡಿಕೊಂಡು ಈ ಸಿನಿಮಾ ನಿರ್ದೇಶನ ಮಾಡಿದ್ದಾರೆ. ಒಂದು ಚಿತ್ರಕ್ಕೆ ಕಥೆ ಮತ್ತು ಬರವಣಿಗೆಯೇ ಮುಖ್ಯ ಎಂದು ಅಪೇಕ್ಷಿಸುವ ಕನ್ನಡದ ಎಲ್ಲಾ ಪ್ರಬುದ್ಧ ಚಿತ್ರ ಪ್ರೇಕ್ಷಕರಿಗೆ ಈ ಚಿತ್ರ ಖಂಡಿತವಾಗಿಯೂ ಇಷ್ಟವಾಗಲಿದೆ ಎಂದು ಭರವಸೆ ವ್ಯಕ್ತಪಡಿಸಿದರು.

ಚಿತ್ರದ ನಾಯಕಿ ನಾಗಶ್ರೀ ಹೆಬ್ಬಾರ್ ಮಾತನಾಡಿ, ಈ ಸಿನಿಮಾದಲ್ಲಿ ನಾನು ಸಮುದ್ಯತಾ ಎಂಬ ಹೆಸರಿನ ಪಾತ್ರವನನ್ನು ನಿರ್ವಹಿಸಿದ್ದೇನೆ. ತನ್ನೊಳಗೆ ಅಗಾಧ ತಲ್ಲಣಗಳನ್ನು ಇಟ್ಟುಕೊಂಡರೂ, ಮೇಲ್ನೋಟಕ್ಕೆ ಶಾಂತವಾಗಿರುವಂಥ ಪಾತ್ರ ನನ್ನದು. ಇಲ್ಲಿಯವರೆಗೆ ರಂಗಭೂಮಿಯಲ್ಲಿ ಅಭಿನಯಿಸಿದ್ದ ನನಗೆ ಈ ಸಿನಿಮಾ ಹೊಸತರದ ಅನುಭವ ತಂದುಕೊಟ್ಟಿದೆ ಎಂದರು. ಈಗಾಗಲೇ ಈ ಸಿನಿಮಾದ ಒಂದಷ್ಟು ತುಣುಕುಗಳನ್ನು ನೋಡಿದ್ದೇನೆ. ವಿಕಲ್ಪ ಸಿನಿಮಾದ ಬಗ್ಗೆ ತುಡಿತವಿರುವಂಥವರು ಸೇರಿ ಮಾಡಿದ ಸಿನಿಮಾ. ಕನ್ನಡದಲ್ಲಿ ಇಂಥ ಹೊಸ ಪ್ರಯತ್ನದ ಸಿನಿಮಾಗಳು ಬರುವಂತಾಗಬೇಕು. ಈ ಸಿನಿಮಾದ ಕಥೆ, ಟೀಸರ್, ಹಾಡುಗಳು ಭರವಸೆ ಮೂಡಿಸುವಂತಿದೆ. ಚಿತ್ರ ಬಿಡುಗಡೆಯಾದ ಮೇಲೆ ಮೂಡಿಸಿರುವ ನಿರೀಕ್ಷೆಯನ್ನು ನಿಜ ಮಾಡಲಿ. ಹೊಸಬರ ವಿಕಲ್ಪ ಸಿನಿಮಾಕ್ಕೆ ಶುಭವಾಗಲಿ ಎಂದರು ಜೋಗಿ.

ವಿಕಲ್ಪ ಚಿತ್ರದ ಮತ್ತೊಂದು ವಿಶೇಷತೆಯೆಂದರೆ, ಅನೇಕ ನುರಿತ ಮಾನಸಿಕ ವೈದ್ಯರ ಸಲಹೆಯ ಮೇರೆಗೆ ಈ ಚಿತ್ರದ ಹಲವು ಸನ್ನಿವೇಶಗಳನ್ನು ಚಿತ್ರಿಸಲಾಗಿರುವುದು. ಚಿತ್ರದ ದೃಶ್ಯಗಳು ಸಹಜತೆಗೆ ಅತ್ಯಂತ ಹತ್ತಿರವಾಗಿರಬೇಕು ಎಂಬ ಆಶಯದಿಂದ ಚಿತ್ರತಂಡ ಇಂಥದ್ದೊಂದು ಕೆಲಸ ಮಾಡಿದೆ. ಬೆಂಗಳೂರು, ತೀರ್ಥಹಳ್ಳಿ, ಸಾಗರ, ಶಿರಸಿ, ಕುಂದಾಪುರ, ಯಲ್ಲಾಪುರ ಸುತ್ತಮುತ್ತ ವಿಕಲ್ಪ ಚಿತ್ರದ ಬಹುತೇಕ ಚಿತ್ರೀಕರಣ ನಡಸಲಾಗಿದ್ದು, ಸಿಂಗಪುರ, ನೆದರ್ಲ್ಯಾಂಡ್ ಸೇರಿದಂತೆ ವಿದೇಶಗಳಲ್ಲೂ ವಿಕಲ್ಪ ದ ಚಿತ್ರೀಕರಣ ಮಾಡಲಾಗಿದೆ. ವಿಕಲ್ಪ ಚಿತ್ರಕ್ಕೆ ಮಿಥುನ್ ತೀರ್ಥಹಳ್ಳಿ ಸಹ ನಿರ್ದೇಶನವಿದೆ. ವಿಕಲ್ಪ ಚಿತ್ರಕ್ಕೆ ಅಭಿರಾಮ್ ಗೌಡ ಛಾಯಾಗ್ರಹಣ, ಸುರೇಶ್ ಆರುಮುಗಮ್ ಸಂಕಲನ ಕಾರ್ಯ ನಿರ್ವಹಿಸಿದ್ದಾರೆ. ವಿಕಲ್ಪದ ವಿಭಿನ್ನ ಹಾಡುಗಳಿಗೆ ಸಂವತ್ಸರ ಸಂಗೀತ ಸಂಯೋಜಿಸಿದ್ದು, ಪೃಥ್ವಿರಾಜ್ ಪಾಟಿಲ್ ಮತ್ತು ಕೌಂಡಿನ್ಯ ಕುಡ್ಲುತೋಟ ಹಾಡುಗಳಿಗೆ ಸಾಹಿತ್ಯ ರಚಿಸಿದ್ದಾರೆ. ಸಿದ್ಧಾರ್ಥ್ ಬೆಳ್ಮಣ್ಣು, ಸಂವತ್ಸರ, ಶ್ರೀರಂಜಿನಿ, ಇಂಚರ ಮೊದಲಾದ ಗಾಯಕರ ಧ್ವನಿಯಲ್ಲಿ ವಿಕಲ್ಪ ದ ಹಾಡುಗಳು ಮೂಡಿಬಂದಿವೆ.

ಸದ್ಯ ಟೀಸರ್ ಮೂಲಕ ಹೊರಬಂದಿರುವ ವಿಕಲ್ಪ ನಿಧಾನವಾಗಿ ಸಿನಿಪ್ರಿಯರ ಗಮನ ಸೆಳೆಯುತ್ತಿದೆ. ಕನ್ನಡ ಚಿತ್ರರಂಗದಲ್ಲಿ ಸೈಕಾಲಜಿಕಲ್–ಥ್ರಿಲ್ಲರ್ ಸಿನಿಮಾಗಳ ಸಂಖ್ಯೆ ಕಡಿಮೆಯಿದ್ದು, ಅಂಥ ಬೆರಳೆಣಿಕೆಯ ವಿರಳ ಸಿನಿಮಾಗಳ ಸಾಲಿಗೆ ತಮ್ಮ ವಿಕಲ್ಪ ಚಿತ್ರ ಕೂಡ ಸೇರುವಂತಿದೆ. ವಿಕಲ್ಪ ಕನ್ನಡ ಚಿತ್ರರಂಗದ ಮಟ್ಟಿಗೆ ಒಂದು ಅಪರೂಪದ ಚಿತ್ರವಾಗಿ ನಿಲ್ಲದೆ ಎಂಬ ನಿರೀಕ್ಷೆಯಲ್ಲಿದೆ ವಿಕಲ್ಪ ಚಿತ್ರತಂಡ.




# ಜ.30 ಕ್ಕೆ ಚೌಕಿದಾರ್ ರಿಲೀಸ್

ರಥಾವರ ಸಿನಿಮಾ ಖ್ಯಾತಿಯ ಚಂದ್ರಶೇಖರ್ ಬಂಡಿಯಪ್ಪ ಸಾರಥ್ಯದಲ್ಲಿ ಮೂಡಿ ಬಂದಿರುವ ಸಿನಿಮಾ ಚೌಕಿದಾರ್. ಈಗಾಗಲೇ ಟೀಸರ್ ಹಾಗೂ ಹಾಡಿನ ಮೂಲಕ ಕುತೂಹಲ ಹೆಚ್ಚಿಸಿರುವ ಈ ಚಿತ್ರದ ಬಿಡುಗಡೆ ದಿನಾಂಕ ಘೋಷಣೆಯಾಗಿದೆ. ಆಕ್ಷನ್ ಪ್ರಿನ್ಸ್ ಧ್ರುವ ಸರ್ಜಾ ಚೌಕಿದಾರ್ ರಿಲೀಸ್ ಡೇಟ್ ಅನೌನ್ಸ್ ಮಾಡಿ, ಇಡೀ ತಂಡಕ್ಕೆ ಶುಭ ಹಾರೈಸಿದ್ದಾರೆ. ಇದೇ ತಿಂಗಳ 30ರಂದು ಚೌಕಿದಾರ್ ಸಿನಿಮಾ ತೆರೆಗೆ ಬರಲಿದೆ.

ಪೃಥ್ವಿ ಅಂಬಾರ್ ನಾಯಕನಾಗಿ ಹಾಗೂ ಧನ್ಯ ರಾಮ್ ಕುಮಾರ್ ನಾಯಕಿಯಾಗಿ ನಟಿಸಿರುವ ಚೌಕಿದಾರ್ ಸಿನಿಮಾದಲ್ಲಿ ಚಿತ್ರರಂಗದಲ್ಲಿ 50 ವರ್ಷ ಪೂರೈಸಿರುವ ಹಿರಿಯ ನಟ ಸಾಯಿ ಕುಮಾರ್ ಅವರು ವಿಶೇಷ ಪಾತ್ರದಲ್ಲಿ ನಟಿಸಿದ್ದಾರೆ. ಚೈತ್ರದ ಪ್ರೇಮಾಂಜಲಿ ಚಿತ್ರದ ನಾಯಕಿ ಶ್ವೇತಾ, ಸುಧಾರಾಣಿ ಪ್ರಮುಖ ಪಾತ್ರಗಳಿಗೆ ಜೀವ ತುಂಬಿದ್ದಾರೆ. ಧರ್ಮ, ಬಿಗ್ ಬಾಸ್ ಖ್ಯಾತಿಯ ಗಿಲ್ಲಿ ನಟ ಸೇರಿದಂತೆ ಹಲವರು ತಾರಾಬಳಗದಲ್ಲಿದ್ದಾರೆ.

ವಿ ಎಸ್ ಎಂಟರ್ಟೈನ್ಮೆಂಟ್ ಬ್ಯಾನರ್ನಡಿ ಕಲ್ಲಹಳ್ಳಿ ಚಂದ್ರಶೇಖರ್ ನಿರ್ಮಾಣ ಮಾಡಿದ್ದಾರೆ. ವಿದ್ಯಾದೇವಿ ನಿರ್ಮಾಣದಲ್ಲಿ ಸಾಥ್ ಕೊಟ್ಟಿದ್ದಾರೆ.ವಿ.ನಾಗೇಂದ್ರ ಪ್ರಸಾದ್, ಪ್ರಮೋದ್ ಮರವಂತೆ, ಸಂತೋಷ್ ನಾಯಕ್ ಹಾಡುಗಳಿಗೆ ಸಾಹಿತ್ಯ ಬರೆದಿದ್ದಾರೆ. ಸಿದ್ದು ಕಂಚನಹಳ್ಳಿ ಛಾಯಾಗ್ರಹಣ, ಸಚಿನ್ ಬಸ್ರೂರ್ ಸಂಗೀತ ನಿರ್ದೇಶನ ಚಿತ್ರಕ್ಕಿದೆ.

ಫ್ಯಾಮಿಲಿ, ಅಪ್ಪ–ಮಗನ ಬಾಂಧವ್ಯದ ಕಥೆ ಹೊಂದಿರುವ ಈ ಸಿನಿಮಾವನ್ನ ಸೆನ್ಸಾರ್ ಮಂಡಳಿ ಸದಸ್ಯರು ಶ್ಲಾಘಿಸಿದ್ದಾರೆ. ಈ ಚಿತ್ರಕ್ಕೆ U/A ಸರ್ಟಿಫಿಕೇಟ್ ನೀಡಿದ್ದಾರೆ. ಮುರುಳಿ ಮಾಸ್ಟರ್ ಕೊರಿಯೋಗ್ರಫಿ ಮಾಡಿದ್ದಾರೆ. ಜ್ಞಾನೇಶ್ ಮಾತಾಡ್ ಸಂಕಲನ, ಜೈ ಸುಬ್ರಹ್ಮಣ್ಯ ಸಾಹಸ ದೃಶ್ಯಗಳು ಚಿತ್ರಕ್ಕಿದೆ.



ಕನ್ನಡದ ಖ್ಯಾತ ಕಲಾವಿದೆ ಪ್ರೇಮಾ ಜನವರಿ 6ರಂದು ತಮ್ಮ ಹುಟ್ಟು ಹಬ್ಬ ಆಚರಿಸಿಕೊಂಡರು.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,